KACD520000112018

**ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,ಹೊಸದುರ್ಗ.**

**ಉಪಸ್ಥಿತರುಃ-** ಶ್ರೀ ವೈ. ಕೆ. ಬೇನಾಳ, ಬಿ.ಎ., ಎಲ್.ಎಲ್.ಬಿ., (ಆನರ್ಸ), ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು, ಹೊಸದುರ್ಗ.

**ದಿನಾಂಕ 07 ನೇ ಆಗಸ್ಟ್ 2026**

**ಅಸಲು ದಾವೆ ಸಂಖ್ಯೆಃ 01/2018**

**ವಾದಿಯರು:-**

1. ಶಿವರುದ್ರಪ್ಪ ತಂದೆ ಪರಣ್ಣ,
ವಯಸ್ಸು ಸುಮಾರು 84 ವರ್ಷ,
ಮೃತಪಟ್ಟಿದ್ದು ಅವನ ವಾರಸುದಾರರು

1(ಎ) ಸುಶೀಲಮ್ಮ ಗಂಡ ಶಿವರುದ್ರಪ್ಪ,
ವಯಸ್ಸು ಸುಮಾರು 73 ವರ್ಷ,

1(ಬಿ) ಮಂಜುನಾಥ ತಂದೆ ಶಿವರುದ್ರಪ್ಪ,
ವಯಸ್ಸು ಸುಮಾರು 50 ವರ್ಷ,
ಇಬ್ಬರು ವ್ಯವಸಾಯಗಾರರು,
ವಾಸಃ ಕೆಲ್ಲೋಡು ಗ್ರಾಮ,
ಕಸಬಾ ಹೋಬಳಿ,
ಹೊಸದುರ್ಗ ತಾಲ್ಲೂಕು.

1(ಸಿ) ಸುವರ್ಣಮ್ಮ ತಂದೆ ಶಿವರುದ್ರಪ್ಪ,
ಗಂಡ ವೀರಭದ್ರಪ್ಪ,
ವಯಸ್ಸು ಸುಮಾರು 47 ವರ್ಷ,
ವಾಸಃ 2 ನೇ ಮುಖ್ಯ, ಜೈನ್ ದೇವಸ್ಥಾನದ ಹತ್ತಿರ,
ಹೊಸದುರ್ಗ ಟೌನ್,
ಹೊಸದುರ್ಗ ತಾಲ್ಲೂಕು.

1(ಡಿ) ಎಸ್. ಕಲಾವತಿ ತಂದೆ ಶಿವರುದ್ರಪ್ಪ,
ಗಂಡ ಆರ್.ಸಿ. ಪ್ರದೀಪ,
ವಯಸ್ಸು ಸುಮಾರು 39 ವರ್ಷ,
ಮನೆಗೆಲಸ,
ವಾಸಃ ಮೊದಲನೇ ಕ್ರಾಸ್ ಬಾಪೂಜಿ ನಗರ,
ಪಿಲ್ಲೇಕೆರೆನಹಳ್ಳಿ, ಚಿತ್ರದುರ್ಗ ಟೌನ್,

2. ಮಂಜುನಾಥ ತಂದೆ ಶಿವರುದ್ರಪ್ಪ,
ವಯಸ್ಸು ಸುಮಾರು 48 ವರ್ಷ,
ಇಬ್ಬರು ವ್ಯವಸಾಯಗಾರರು,
ವಾಸಃ ಕೆಲ್ಲೋಡು ಗ್ರಾಮ,
ಕಸಬಾ ಹೋಬಳಿ, ಹೊಸದುರ್ಗ ತಾಲ್ಲೂಕು.
**(ವಾದಿಯರ ಪರ ವಕೀಲರು - ಶ್ರೀ ಎಸ್. ಮಂಜುನಾಥ )**

**ವಿರುದ್ಧ**

**ಪ್ರತಿವಾದಿಗಳುಃ-**

1. ರುದ್ರಪ್ಪ ತಂದೆ ಮಲ್ಲಪ್ಪ,
ವಯಸ್ಸು ಸುಮಾರು 73 ವರ್ಷ,

2. ಮುರುಗೇಶ ತಂದೆ ಪರಪ್ಪ,
ವಯಸ್ಸು ಸುಮಾರು 42 ವರ್ಷ,

3. ಶಿವಣ್ಣ ತಂದೆ ಸಿದ್ದಪ್ಪ,
ವಯಸ್ಸು ಸುಮಾರು 80 ವರ್ಷ,
**ಮೃತಪಟ್ಟಿದ್ದು ಅವನ ವಾರಸುದಾರರು**

3(ಎ) ಮರುಳಸಿದ್ದಮ್ಮ ತಂದೆ ಶಿವಣ್ಣ,
ಗಂಡ ಉಮೇಶಪ್ಪ,
ವಯಸ್ಸು ಸುಮಾರು 55 ವರ್ಷ,
ಮನೆಗೆಲಸ,
ವಾಸಃ 2 ನೇ ರಸ್ತೆ, ಜೈನ್ ದೇವಸ್ಥಾನ ಹತ್ತಿರ,
ಹೊಸದುರ್ಗ ಟೌನ್,
ಹೊಸದುರ್ಗ ತಾಲ್ಲೂಕು.

3(ಬಿ) ಎಸ್. ಗಿರಿಜಮ್ಮ ತಂದೆ ಶಿವಣ್ಣ,
ಗಂಡ ಬಸವರಾಜಪ್ಪ,

ವಯಸ್ಸು ಸುಮಾರು 55 ವರ್ಷ,
ಮನೆಗೆಲಸ,
ವಾಸಃ ಕೆಲ್ಲೋಡು ಗ್ರಾಮ,
ಕಸಬಾ ಹೋಬಳಿ,
ಹೊಸದುರ್ಗ ತಾಲ್ಲೂಕು.

3(ಸಿ) ಎಸ್. ಶೀಲಾ ತಂದೆ ಶಿವಣ್ಣ,
ಗಂಡ ಮಹದೇವಪ್ಪ,
ವಯಸ್ಸು ಸುಮಾರು 50 ವರ್ಷ,
ವ್ಯವಸಾಯ,
ವಾಸಃ ಮದುರೆ ಗ್ರಾಮ,
ಕಸಬಾ ಹೋಬಳಿ, ಹೊಸದುರ್ಗ ತಾಲ್ಲೂಕು.

3(ಡಿ) ಎಂ.ಎಸ್. ಮುರುಗೇಶ ತಂದೆ ಶಿವಣ್ಣ,
ವಯಸ್ಸು ಸುಮಾರು 55 ವರ್ಷ,
ಡಾಕ್ಟರ್,
ಮುರುಗೇಶ್ ನರರ್ಸಿಂಗ್ ಹೊಂ,
ಹೊಸದುರ್ಗ ತಾಲ್ಲೂಕು.

3(ಇ) ಎಸ್. ಶಿವ ಪ್ರಕಾಶ್ ತಂದೆ ಶಿವಣ್ಣ,
ವಯಸ್ಸು ಸುಮಾರು 55 ವರ್ಷ,
ಡಾಕ್ಟರ್,
ಮುರುಗೇಶ್ ನರರ್ಸಿಂಗ್ ಹೊಂ,
ಹೊಸದುರ್ಗ ತಾಲ್ಲೂಕು.

4. ಮರುಳಸಿದ್ದಪ್ಪ ತಂದೆ ಸಿದ್ದಪ್ಪ,
**ಮೃತಪಟ್ಟಿದ್ದು ಅವನ ವಾರಸುದಾರರು**

4(ಎ) ಹೆಚ್.ಎಂ. ತಿಪ್ಪೇಸ್ವಾಮಿ ,
ತಂದೆ ಮರುಳುಸಿದ್ದಪ್ಪ,
ವಯಸ್ಸು ಸುಮಾರು 58 ವರ್ಷ,

4(ಬಿ) ಹೆಚ್.ಎಂ ಶಿವಕುಮಾರ,
ತಂದೆ ಮರುಳುಸಿದ್ದಪ್ಪ,
ವಯಸ್ಸು ಸುಮಾರು 53 ವರ್ಷ,

4(ಸಿ) ಹೆಚ್.ಎಂ. ಬಸವರಾಜ ,
ತಂದೆ ಮರುಳುಸಿದ್ದಪ್ಪ,
ವಯಸ್ಸು ಸುಮಾರು 50 ವರ್ಷ,

4(ಡಿ) ಹೆಚ್.ಎಂ. ಗೌರಮ್ಮ ,
ತಂದೆ ಮರುಳುಸಿದ್ದಪ್ಪ,
ಗಂಡ ಶಂಕರ್
ವಯಸ್ಸು ಸುಮಾರು 47 ವರ್ಷ,
ಮನೆಗೆಲಸ,
ವಾಸಃ ಜಿ.ಎನ್. ಕೆರೆ ಗ್ರಾಮ,
ಮತ್ತೋಡು ಹೋಬಳಿ,
ಹೊಸದುರ್ಗ ತಾಲ್ಲೂಕು.

4(ಇ) ಹೆಚ್.ಎಂ. ವೀರೇಶ್ ಬಾಬು ,
ತಂದೆ ಮರುಳುಸಿದ್ದಪ್ಪ,
ವಯಸ್ಸು ಸುಮಾರು 45 ವರ್ಷ,
4(ಎ) ರಿಂದ (ಸಿ) ಮತ್ತು 4(ಇ) ನೇ
ಪ್ರತಿವಾದಿಗಳು ವ್ಯವಸಾಯಗಾರರು ಮತ್ತು
ವ್ಯಾಪರಿಗಳು,
ವಾಸಃ ಹಾಗಲಕೆರೆ ಗ್ರಾಮ,
ಮತ್ತೋಡು ಹೋಬಳಿ,
ಹೊಸದುರ್ಗ ತಾಲ್ಲೂಕು.

5. ಪಾರ್ವತಮ್ಮ ಗಂಡ ಚಂದ್ರಪ್ಪ,
ವಯಸ್ಸು ಸುಮಾರು 66 ವರ್ಷ,
ವ್ಯವಸಾಯ,
ವಾಸಃ ಹುಳಿಯಾರ್ ರಸ್ತೆ,
ಹೊಸದುರ್ಗ ಟೌನ್,

6. ಸುವರ್ಣಮ್ಮ ಗಂಡ ಗಂಗಾಧರಪ್ಪ,
ತಂದೆ ಪರಣ್ಣ,
ವಯಸ್ಸು ಸುಮಾರು 80 ವರ್ಷ,

7. ಶೇಖರಪ್ಪ ತಂದೆ ಪರಣ್ಣ,
ವಯಸ್ಸು ಸುಮಾರು 70 ವರ್ಷ,

8. ಮಹೇಶ್ವರಪ್ಪ ತಂದೆ ಪರಣ್ಣ,
ವಯಸ್ಸು ಸುಮಾರು 65 ವರ್ಷ,

9. ಪ್ರಕಾಶ್ ತಂದೆ ಪರಣ್ಣ,
ವಯಸ್ಸು ಸುಮಾರು 60 ವರ್ಷ,

10. ಪಂಚಾಯಾಯ್ತಿ ಅಭಿವೃದ್ಧಿ ಅಧಿಕಾರಿ,
ಗ್ರಾಮ ಪಂಚಾಯತ್ ಕೆಲ್ಲೋಡು,
1, 2, 3 ಮತ್ತು 6 ರಿಂದ 9 ನೇ ಪ್ರತಿವಾದಿಗಳು
ವ್ಯವಸಾಯಗಾರರು,
ವಾಸಃ ಕೆಲ್ಲೋಡು ಗ್ರಾಮ,
ಕಸಬಾ ಹೋಬಳಿ,
ಹೊಸದುರ್ಗ ತಾಲ್ಲೂಕು.

11. ಶಿವರುದ್ರಮ್ಮ ಗಂಡ ಪರಪ್ಪ,
ವಯಸ್ಸು ಸುಮಾರು 80 ವರ್ಷ,
ಮನೆಗೆಲಸ,
ವಾಸಃ ಕೆಲ್ಲೋಡು ಗ್ರಾಮ,
ಕಸಬಾ ಹೋಬಳಿ,
ಹೊಸದುರ್ಗ ತಾಲ್ಲೂಕು.

12. ಪಾರ್ವತಮ್ಮ ಗಂಡ ರೇವಣ್ಣ,
ತಂದೆ ಪರಣ್ಣ,
ವಯಸ್ಸು ಸುಮಾರು 56 ವರ್ಷ,
ಮನೆಗೆಲಸ,
ವಾಸಃ ಕಲ್ಲೇಶ್ವರ ಬಡಾವಣೆ,
ಹೊಸದುರ್ಗ ಟೌನ್,
ಹೊಸದುರ್ಗ ತಾಲ್ಲೂಕು.

13. ರಾಜೇಶ್ವರಿ ಗಂಡ ಪ್ರಕಾಶ,
ತಂದೆ ಪರಣ್ಣ,
ಮನೆಗೆಲಸ,
ವಾಸಃ ಶ್ರೀರಾಂಪುರಂ,
ಮೊದಲನೆ ಕ್ರಾಸ್, ವಿವೇಕಾನಂದ ಸರ್ಕಲ್, ಮೈಸೂರು.

14. ಉಮಾದೇವಿ ಗಂಡ ಗಂಗಾಧರ,
ತಂದೆ ಪರಣ್ಣ,
ವಯಸ್ಸು ಸುಮಾರು 50 ವರ್ಷ,
ಮನೆಗೆಲಸ,
ವಾಸಃ 3 ನೇ ಮುಖ್ಯ ರಸ್ತೆ, ಹೊಸದುರ್ಗ ಟೌನ್.
ಹೊಸದುರ್ಗ ತಾಲ್ಲೂಕು.

15. ಜ್ಯೋತಿ ಲಕ್ಷ್ಮಿ ಗಂಡ ಕುಮಾರ,
ತಂದೆ ಪರಣ್ಣ,
ವಯಸ್ಸು ಸುಮಾರು 44 ವರ್ಷ,
ಮನೆಗೆಲಸ,
ವಾಸಃ ಕ್ಯಾಲಸನಹಳ್ಳಿ,
ಬೆಂಗಳೂರು.

16. ಹೇಮಾ ಗಂಡ ರಾಜಣ್ಣ,
ವಯಸ್ಸು ಸುಮಾರು 65 ವರ್ಷ,

17. ಕುಮಾರ ತಂದೆ ರಾಜಣ್ಣ,
ವಯಸ್ಸು ಸುಮಾರು 65 ವರ್ಷ,

18. ಕುಸುಮ ಅಲಿಯಾಸ್ ಲತಾ,
ಗಂಡ ಕುಮಾರ ಸ್ವಾಮಿ,
ವಯಸ್ಸು ಸುಮಾರು 28 ವರ್ಷ,
16 ರಿಂದ 18 ನೇ ಪ್ರತಿವಾದಿಗಳ ವಾಸಃ
2 ನೇ ಮುಖ್ಯ ರಸ್ತೆ, ಕುಮಾರ ಎಲೆಕ್ಟ್ರೀಕಲ್,
ಹೊಸದುರ್ಗ ಟೌನ್,
ಹೊಸದುರ್ಗ ತಾಲ್ಲೂಕು.

19. ಜಲಮ್ಮ ಗಂಡ ಮಂಜುನಾಥ,
ವಯಸ್ಸು ಸುಮಾರು 70 ವರ್ಷ,

20. ಗೌರಮ್ಮ ಗಂಡ ತಮ್ಮಯ್ಯ,
ವಯಸ್ಸು ಸುಮಾರು 66 ವರ್ಷ,

21. ಮಲ್ಲಿಕಾರ್ಜುನ ತಂದೆ ಬಸಪ್ಪ,
ವಯಸ್ಸು ಸುಮಾರು 64 ವರ್ಷ,

22. ಪ್ರಭಾ ಗಂಡ ಮಂಜುನಾಥ,
ವಯಸ್ಸು ಸುಮಾರು 62 ವರ್ಷ,

23. ಭಾಗ್ಯಮ್ಮ ಗಂಡ ಯೋಗೇಶ,
ವಯಸ್ಸು ಸುಮಾರು 60 ವರ್ಷ,

24. ಮಂಜುಳ ಗಂಡ ಸುರೇಶ,
ವಯಸ್ಸು ಸುಮಾರು 58 ವರ್ಷ,
19 ರಿಂದ 24 ನೇ ಪ್ರತಿವಾದಿಗಳು
ವ್ಯವಸಾಯಗಾರರು,
ವಾಸಃ #ನಂ-269, 1 ನೇ ಮುಖ್ಯ 8 ನೇ ಕ್ರಾಸ್,
ಮಂಜುನಾಥ ನಗರ,
ಬೆಂಗಳೂರು.

25. ಪ್ರೇಮಾ ಗಂಡ ದನಂಜಯ,
ವಯಸ್ಸು ಸುಮಾರು 57 ವರ್ಷ,

26. ಅಜಯ ತಂದೆ ದನಂಜಯ,
ವಯಸ್ಸು ಸುಮಾರು 36 ವರ್ಷ,

27. ಹರ್ಷ ತಂದೆ ದನಂಜಯ,
ವಯಸ್ಸು ಸುಮಾರು 33 ವರ್ಷ,
25 ರಿಂದ 27 ನೇ ಪ್ರತಿವಾದಿಗಳ ವಾಸಃ
ರಾಮಗೋಪಾಲ ಟಾಕೀಸ್ ಪಕ್ಕ,
ಹುಳಿಯಾರ್ ಅಂಚೆ,
ಚಿಕ್ಕನಾಯ್ಕನಹಳ್ಳಿ ತಾಲ್ಲೂಕು,

28. ಇಂದ್ರಮ್ಮ ಗಂಡ ಮಂಜುನಾಥ,
ವಯಸ್ಸು ಸುಮಾರು 60 ವರ್ಷ,
ಮನೆಗೆಲಸ,

29. ವಿಶ್ವನಾಥ ತಂದೆ ಮಂಜುನಾಥ
ವಯಸ್ಸು ಸುಮಾರು 30 ವರ್ಷ,
28 ಮತ್ತು 29 ನೇ ಪ್ರತಿವಾದಿಗಳ ವಾಸಃ
# ನಂ-836/1,ಮಾತೃಕೃಪಾ ಕಟ್ಟಡ,
ಕಾಳಮ್ಮ ದೇವಿ ದೇವಸ್ಥಾನದ ಹಿಂದೆ, ದಾವಣಗೆರೆ.

30. ಆಶಾರಾಣಿ ಗಂಡ ಕೆ.ಜಿ ಲೋಕೇಶ,
ವಯಸ್ಸು ಸುಮಾರು35 ವರ್ಷ,
ವಾಸಃ 2 ನೇ ಮುಖ್ಯ ರಸ್ತೆ,
ಜೈನ್ ದೇವಸ್ಥಾನದ ಹತ್ತಿರ,
ಹೊಸದುರ್ಗ ಟೌನ್. ಹೊಸದುರ್ಗ ತಾಲ್ಲೂಕು.

31. ಪರಮೇಶ್ವರಿ ಗಂಡ ಪ್ರಕಾಶ್,
ವಯಸ್ಸು ಸುಮಾರು 60 ವರ್ಷ,

32. ಸುಮಾ ಗಂಡ ಸತೀಶ,
ವಯಸ್ಸು ಸುಮಾರು 30 ವರ್ಷ,

33. ಶಾಂತಕುಮಾರ ಎ.ಬಿ. ತಾಯಿ ಗಂಗಮ್ಮ,
ವಯಸ್ಸು ಸುಮಾರು 62 ವರ್ಷ,

34. ಜಗದೀಶ ಎ.ಬಿ. ತಾಯಿ ಗಂಗಮ್ಮ,
ವಯಸ್ಸು ಸುಮಾರು 58 ವರ್ಷ,
31 ರಿಂದ 34 ನೇ ಪ್ರತಿವಾದಿಗಳ ವಾಸಃ
# 67, ವಿದ್ಯಾ ವಾಹಿಣಿ ಪಿ.ಯು ಕಾಲೇಜ್,
ಕೃಷ್ಣ ನಗರ, ತುಮಕೂರ್,

35. ಕೆ.ಪಿ. ಮೋಹನ್ ಕುಮಾರ್ ತಂದೆ ಪ್ರಕಾಶ್,
ವಯಸ್ಸು ಸುಮಾರು 35 ವರ್ಷ,

36. ಕೆ.ಪಿ. ಪವನ್ ಕುಮಾರ್ ತಂದೆ ಪ್ರಕಾಶ್,
ವಯಸ್ಸು ಸುಮಾರು 30 ವರ್ಷ,
35 ಮತ್ತು 36 ನೇ ಪ್ರತಿವಾದಿಗಳ ವಾಸಃ
ಕೆಲ್ಲೋಡು ಗ್ರಾಮ, ಕಸಬಾ ಹೋಬಳಿ,
ಹೊಸದುರ್ಗ ತಾಲ್ಲೂಕು.

37. ರೂಪ ಗಂಡ ಕಾಂತರಾಜು,
ವಯಸ್ಸು ಸುಮಾರು 59 ವರ್ಷ,

38. ಪುನೀತ ತಂದೆ ಕಾಂತರಾಜು,
ವಯಸ್ಸು ಸಮಾರು 29 ವರ್ಷ,

39. ಭವ್ಯ ತಂದೆ ಕಾಂತರಾಜು,
ಗಂಡ ಯತೀಶ್,
ವಯಸ್ಸು ಸುಮಾರು 32 ವರ್ಷ,
37 ರಿಂದ 39 ನೇ ಪ್ರತಿವಾದಿಗಳ ವಾಸಃ
# 2, ವಿ.ಎಂ. ಅಂಚೆ, ಲಾಯರ್ ಪ್ರಭು,
ಸರ್ಕಾರಿ ಶಾಲೆ ಹಿಂದೆ, ಪೀಣ್ಯ 2 ನೇ ಹಂತ,
ಹಂದರಹಳ್ಳಿ, ಬೆಂಗಳೂರು-91,

40. ಉಮೇಶ ತಂದೆ ತಮ್ಮಯ್ಯ,
ವಯಸ್ಸು ಸುಮಾರು 70 ವರ್ಷ,

41. ಲೋಕೇಶ ತಂದೆ ಉಮೇಶ,
ವಯಸ್ಸು ಸುಮಾರು 38 ವರ್ಷ,

42. ಪ್ರದೀಪ ತಂದೆ ಉಮೇಶ,
ವಯಸ್ಸು ಸುಮಾರು 35 ವರ್ಷ,
40 ರಿಂದ 42 ನೇ ಪ್ರತಿವಾದಿಗಳ ವಾಸಃ
ಮಸೀದೆ ಹಿಂದೆ ಮೇಗಳ ಪೇಟೆ,
ಶಿರ, ತುಮಕೂರು.

43. ಸತೀಶ್ ಕುಮಾರ ಜಿ.ಎಸ್.
ತಾಯಿ ಪಾರ್ವತಮ್ಮ,
ವಯಸ್ಸು ಸುಮಾರು 56 ವರ್ಷ,
ವಾಸಃ ಬನ್ನಿ ನಗರ, ಆಂಜನೇಯ ದೇವಸ್ಥಾನ,
5 ನೇ ಮುಖ್ಯ ರಸ್ತೆ, ಶಿರ ತುಮಕೂರು .

44. ಗಿರೀಶ್ ಕುಮಾರ ಜಿ.ಎಸ್. ತಾಯಿ ಪಾರ್ವತಮ್ಮ,
ವಯಸ್ಸು ಸುಮಾರು 42 ವರ್ಷ,
ವಾಸಃ ಬ್ರಿಡ್ಜ್ ಪಕ್ಕ, ಮುಖ್ಯ ರಸ್ತೆ, ಶಿರ,ತುಮಕೂರು.

45. ಸಿದ್ದಮ್ಮ ಗಂಡ ಹೋಟೇಲ್ ಮಲ್ಲಪ್ಪ,
ವಯಸ್ಸು ಸುಮಾರು 90 ವರ್ಷ,
ವಾಸಃ ಕೆಲ್ಲೋಡು ಗ್ರಾಮ,
ಕಸಬಾ ಹೋಬಳಿ, ಹೊಸದುರ್ಗ ತಾಲ್ಲೂಕು.

46. ಶಿವಮ್ಮ ಗಂಡ ಅಂಗಡಿ ಜಯಣ್ಣ @ ಮೃತ್ಯುಂಜಯಪ್ಪ,
ತಾಯಿ ಈರಮ್ಮ,
ವಯಸ್ಸು ಸುಮಾರು 66 ವರ್ಷ,

47. ಸಂಜಯ್ ತಂದೆ ಅಂಗಡಿ ಜಯಣ್ಣ,
ತಾಯಿ ಶಿವಮ್ಮ,
ವಯಸ್ಸು ಸುಮಾರು 35 ವರ್ಷ,
46 ಮತ್ತು 47 ನೇ ಪ್ರತಿವಾದಿಗಳ ವಾಸಃ
ಬಸವೇಶ್ವರ ಬೀದಿ, ತರೀಕೆರೆ ಟೌನ್,
ತರಿಕೆರೆ ತಾಲ್ಲೂಕು,
ಚಿಕ್ಕಮಗಳೂರು ಜಿಲ್ಲೆ.

48. ಬಸವರಾಜಪ್ಪ ತಂದೆ ನಂಜಪ್ಪ,
ವಯಸ್ಸು ಸುಮಾರು 60 ವರ್ಷ,
ವಾಸಃ ತೇರಿನಮನೆ ಪಕ್ಕ, ಕೆಲ್ಲೋಡು ಗ್ರಾಮ,
ಕಸಬಾ ಹೋಬಳಿ,
ಹೊಸದುರ್ಗ ತಾಲ್ಲೂಕು.

49. ಗೌರಮ್ಮ ಗಂಡ ಮರುಲುಸಿದ್ದಪ್ಪ,
ವಯಸ್ಸು ಸುಮಾರು 77 ವರ್ಷ,
(ಅಡುಗೆ ಸದಾಶಿವಪ್ಪ)ಹೈವೆ ಮಾಟಿಹಳ್ಳಿ ಹತ್ತಿರ,
ತಿಪಟೂರು ತಾಲ್ಲೂಕು,
ತುಮಕೂರು ಜಿಲ್ಲೆ.

50. ಪಾರ್ವತಮ್ಮ ಗಂಡ ರುದ್ರಪ್ಪ,(ಹೋಟೇಲ್ ನಾಗರಾಜ)
ವಯಸ್ಸು ಸುಮಾರು 75 ವರ್ಷ,
ವಾಸಃ ಲಕ್ಕಿಹಳ್ಳಿ ಗ್ರಾಮ,
ಮಾಡದಕೆರೆ ಹೋಬಳಿ,
ಹೊಸದುರ್ಗ ತಾಲ್ಲೂಕು,

51. ಕೆ.ಎಸ್.ವೆಂಕಟರಾಮಯ್ಯ ನಾಯ್ಡು,
ತಂದೆ ಶೇಷಯ್ಯ,
ವಯಸ್ಸು ಸುಮಾರು 75 ವರ್ಷ,

52. ಮಾರುತಿ (ಪರದಯ್ಯರ) ತಂದೆ ಚಂದ್ರಪ್ಪ,
ವಯಸ್ಸು ಸುಮಾರು 44 ವರ್ಷ,

53. ಮುರುಳಿ (ಪರದಯ್ಯರ) ತಂದೆ ಚಂದ್ರಪ್ಪ,
ವಯಸ್ಸು ಸುಮಾರು 41 ವರ್ಷ,
51 ರಿಂದ 53 ನೇ ಪ್ರತಿವಾದಿಯರು
ವ್ಯವಸಾಯಗಾರರು,
ವಾಸಃ ಕೆಲ್ಲೋಡು ಗ್ರಾಮ,
ಕಸಬಾ ಹೋಬಳಿ, ಹೊಸದುರ್ಗ ತಾಲ್ಲೂಕು.

(1, 6 ರಿಂದ 9 ನೇ ಪ್ರತಿವಾದಿಯರ ಪರ ವಕೀಲರು -ಶ್ರೀ ಎಸ್. ಗಂಗಾಧರ್ )
(2, 10 ರಿಂದ 14 ನೇ ಪ್ರತಿವಾದಿಯರ ಪರ ವಕೀಲರು -ಶ್ರೀ ಕೆ.ಟಿ. ಮಂಜುನಾಥ)
(19 ರಿಂದ 25, 40 ರಿಂದ 44 ನೇ ಪ್ರತಿವಾದಿಯರ ಪರ ವಕೀಲರು- ಶ್ರೀ ಜಿ.ಬಸವಲಿಂಗಪ್ಪ )
(26 ನೇ ಪ್ರತಿವಾದಿಯು ಗೈರು ಹಾಜರು )
(3 ರಿಂದ 5, 15 ರಿಂದ 18, 27 ರಿಂದ 39, 45 ರಿಂದ 53 ನೇ ಪ್ರತಿವಾದಿಯರ ಸ್ಥಾನದಲ್ಲಿ ಏಕತರ್ಫಿಯ)

| | |
|---|---|
| ದಾವೆ ದಾಖಲು ಮಾಡಿದ ದಿನಾಂಕ | 04-01-2018 |
| ದಾವಾ ಸ್ವರೂಪ | ಘೋಷಣೆ ,ಪಾಲು ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆ ಕೋರಿ ಸಲ್ಲಿಸಿದ ದಾವೆ |
| ಸಾಕ್ಷಿ ದಾಖಲು ಮಾಡಲು ಪ್ರಾರಂಭಿಸಿದ ದಿಃ | 30-11-2020 |
| ತೀರ್ಪು ಘೋಷಣೆ ಮಾಡಿದ ದಿನಾಂಕ | 07-08-2026 |
| ಒಟ್ಟು ಕಾಲಾವಧಿ | ವರ್ಷಗಳು ತಿಂಗಳು ದಿನಗಳು<br>08- -07- -03- |

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**
**ಹೊಸದುರ್ಗ.**

**ತೀರ್ಪು**

ವಾದಿಯರು ಈ ದಾವೆಯನ್ನು ಪ್ರತಿವಾದಿಗಳ ವಿರುದ್ಧ ಸಲ್ಲಿಸಿ, ದಾವಾ ಆಸ್ತಿಗಳು ತಮ್ಮ ಮತ್ತು 1 ರಿಂದ 9 ನೇ ಪ್ರತಿವಾದಿಗಳ ಪಿತ್ರಾರ್ಜಿತ ಜಂಟಿ ಕುಟುಂಬದ ಆಸ್ತಿಗಳೆಂದು ಘೋಷಿಸಬೇಕೆಂದು ಹಾಗೂ ದಾವಾ ಆಸ್ತಿಗಳಲ್ಲಿ 1 ನೇ ವಾದಿಯ ಕಾನೂನುಬದ್ದ ಹಿಸ್ಸೆ ಹಾಗೂ ಅವುಗಳ ಪ್ರತ್ಯೇಕ ಸ್ವಾಧೀನತೆ ಕೊಡಿಸಬೇಕೆಂದು ಮತ್ತು ಮಧ್ಯಕಾಲಿನ ಲಾಭವನ್ನು ಹಾಗೂ ನ್ಯಾಯಾಲಯಕ್ಕೆ ಸರಿಕಂಡ ಇತರೆ ಪರಿಹಾರಗಳನ್ನು ಕೊಡಿಸಬೇಕೆಂದು ಕೋರಿರುತ್ತಾರೆ.

**2. ವಾದ ಪತ್ರದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆಃ-**

ವಾದಿಗಳ ಮತ್ತು 1 ರಿಂದ 9 ನೇ ಪ್ರತಿವಾದಿಗಳ ಮುತ್ತಾತನಾದ ರುದ್ರಪ್ಪ ಇವನು ತನ್ನ 3 ಜನ ಗಂಡು ಮಕ್ಕಳನ್ನು ಬಿಟ್ಟು ಮೃತಪಟ್ಟಿರುತ್ತಾನೆ. ಮೊದಲನೇ ಮಗ ಸಿದ್ದಪ್ಪ, ಎರಡನೇ ಮಗ ಪರಣ್ಣ, ಮೂರನೇ ಮಗ ಮಲ್ಲಪ್ಪ. ಸಿದ್ದಪ್ಪ ತಂದೆ ರುದ್ರಪ್ಪ ಇವನು ಸಹ ಪರಣ್ಣ ಎಂಬ ಮೊದಲನೇ ಮಗನನ್ನು ಬಿಟ್ಟು ಮೃತಪಟ್ಟಿದ್ದು, ಸದರಿ ಪರಣ್ಣನು ಮೊದಲನೆ ಮಗ ಮರುಗೇಶ್, ಎರಡನೇ ಮಗ ಶಿವಣ್ಣ ಮತ್ತು ಮೂರನೇ ಮಗ ಮರುಳಸಿದ್ದಪ್ಪ ಮತ್ತು 4 ನೇ ಮಗ ಚಂದ್ರಪ್ಪ ಇವರನ್ನು ಬಿಟ್ಟು ಮೃತಪಟ್ಟಿರುತ್ತಾನೆ. ಮೃತ ರುದ್ರಪ್ಪನ ಎರಡನೇ ಮಗನಾದ ಪರಣ್ಣನು ತನ್ನ ಮೊದಲನೆ ಮಗನಾದ ಗಂಗಾಧರಪ್ಪ, ಎರಡನೇ ಮಗನಾದ ಶಿವರುದ್ರಪ್ಪ, 3 ನೇ ಮಗನಾದ ಶೇಖರಪ್ಪ, ನಾಲ್ಕನೇ ಮಗನಾದ ಮಹೇಶ್ವರಪ್ಪ, ಐದನೆ ಮಗನಾದ ಪ್ರಕಾಶ ಇವರನ್ನು ಬಿಟ್ಟು ಮೃತಪಟ್ಟಿರುತ್ತಾನೆ. ಮೃತ ಮಲ್ಲಪ್ಪನಿಗೆ ಒಬ್ಬನೇ ಮಗ ರುದ್ರಪ್ಪ. ವಾದಿಗಳು ಮತ್ತು ಪ್ರತಿವಾದಿಗಳು ಹಿಂದೂ ಅವಿಭಕ್ತ ಕುಟುಂಬದ ಸದಸ್ಯರಾಗಿದ್ದು, 1 ನೇ ಪ್ರತಿವಾದಿಯು ಒಟ್ಟು ಕುಟುಂಬದ ಕರ್ತನಿರುತ್ತಾನೆ. ದಾವಾ ಸ್ವತ್ತಿನ ಜಾಗವು ವಾದಿಗಳ ಮತ್ತು 1 ರಿಂದ 9 ನೇ ಪ್ರತಿವಾದಿಗಳ ಜಂಟಿ ಕುಟುಂಬದ

ಸ್ವತ್ತಾಗಿದೆ ಹಾಗೂ ಅವರೆಲ್ಲರೂ ಜಂಟಿ ಕುಟುಂಬದ ಜಾಗವಾಗಿ ದಾವಾ ಸ್ವತ್ತನ್ನು ಅನುಭವಿಸುತ್ತಿದ್ದಾರೆ. 1 ನೇ ಪ್ರತಿವಾದಿಯ ತಂದೆಯು 1962 ರಲ್ಲಿ ಮನೆ ನಿರ್ಮಾಣದ ಉದ್ದೇಶಕ್ಕಾಗಿ ಕೆಲ್ಲೋಡು ಗ್ರಾಮದ ಸರ್ವೆ ನಂಬರ್ 38 ರಲ್ಲಿರುವ 00.20 ಗುಂಟೆ ಜಮೀನನ್ನು ಕೃಷಿಯೇತರ ಉದ್ದೇಶಕ್ಕೆ ಪರಿವರ್ತಿಸಿದ್ದು, ಭೂ ಪರಿವರ್ತನೆಯ ನಂತರ, ಸದರಿ ಜಮೀನನ್ನು ಕೃಷಿಯೇತರ ಉದ್ದೇಶಕ್ಕಾಗಿ ಬಳಸಲಾಗುತ್ತಿದ್ದು, 10 ನೇ ಪ್ರತಿವಾದಿಯ ಕಚೇರಿಯಲ್ಲಿ ಮನೆ ಪಟ್ಟಿ ಸಂಖ್ಯೆ 269/1 ರ ಅಡಿಯಲ್ಲಿ ಅವರ ಹೆಸರಿಗೆ ಖಾತೆ ಬದಲಾವಣೆಯಾಗಿರುತ್ತದೆ. ಅವನು ಮೃತಪಟ್ಟ ನಂತರ 1 ನೇ ಪ್ರತಿವಾದಿ ದಾವಾ ಸ್ವತ್ತಿನ ಖಾತೆಯನ್ನು ತನ್ನ ಹೆಸರಿಗೆ ಬದಲಾಯಿಸಿಕೊಂಡಿರುತ್ತಾನೆ. ಪ್ರಸ್ತುತ ದಾವಾ ಸ್ವತ್ತಿನ ಖಾತೆಯು 1 ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ. 2 ನೇ ವಾದಿ 10 ನೇ ಪ್ರತಿವಾದಿಯನ್ನು ಭೇಟಿ ಮಾಡಿ, ಇ-ಸ್ವತ್ತಿಗಾಗಿ ದಾವಾ ಆಸ್ತಿಯ ಸೈಟ್ ಗಳ ಮನೆ ಪಟ್ಟಿಯನ್ನು ಕೇಳಿದ್ದು, 10 ನೇ ಪ್ರತಿವಾದಿ ಪಂಚಾಯ್ತಿಗೆ ಅರ್ಜಿಯನ್ನು ಸಲ್ಲಿಸಿ, ಯಾವುದೇ ವ್ಯಕ್ತಿಗೆ ಮನೆ ಪಟ್ಟಿ ಸಾರವನ್ನು ನೀಡದಂತೆ ತಿಳಿಸಿರುವುದಾಗಿ 12 ನೇ ಪ್ರತಿವಾದಿ 2 ನೇ ವಾದಿಗೆ ಹೇಳಿರುತ್ತಾನೆ. ಆದ್ದರಿಂದ, 12 ನೇ ಪ್ರತಿವಾದಿ ಮನೆ ಪಟ್ಟಿ ಸಾರಾವನ್ನು ಕೊಡಲು ನಿರಾಕರಿಸಿರುತ್ತಾನೆ. ತದನಂತರ 2 ನೇ ವಾದಿ ದಿನಾಂಕಃ 30-11-2017 ರಂದು ನೊಂದಾಯಿತ ಅಂಚೆ ಮೂಲಕ ಮಾಹಿತಿ ಹಕ್ಕು ಕಾಯ್ದೆಯಡಿ 10 ನೇ ಪ್ರತಿವಾದಿಗೆ ಅರ್ಜಿಯನ್ನು ನೀಡಿದ್ದು, ಆದರೆ 10 ನೇ ಪ್ರತಿವಾದಿ ಮನೆ ಪಟ್ಟಿ ಸಾರವನ್ನು ನೀಡಿರುವುದಿಲ್ಲ. ದಾವಾ ಆಸ್ತಿಗಳು ವಾದಿಗಳ ತಂದೆ ಮತ್ತು 1 ರಿಂದ 9 ನೇ ಪ್ರತಿವಾದಿಗಳ ಅನುವಂಶಿಕವಾದ ಆಸ್ತಿಗಳಾಗಿರುತ್ತವೆ. ವಾದಿಗಳು ಮತ್ತು 1 ರಿಂದ 11 ನೇ ಪ್ರತಿವಾದಿಗಳು ದಾವಾ ಆಸ್ತಿಯ ಶಾಂತಿಯುತ ಸ್ವಾಧೀನಾನುಭವವನ್ನು ಹೊಂದಿದ್ದು, ಪ್ರಸ್ತುತ ವಾದಿಗಳು ಮತ್ತು 1 ರಿಂದ 9 ನೇ ಪ್ರತಿವಾದಿಗಳು ಯಾರ ಅಡೆ-ತಡೆ ಇಲ್ಲದೆ ಇಂದಿನವರೆಗೂ ದಾವಾ ಆಸ್ತಿಯ ನಿವೇಶನವನ್ನು ಜಂಟಿಯಾಗಿ ಅನುಭವಿಸುತ್ತಾ ಮತ್ತು

ಸ್ವಾಧೀನದಲ್ಲಿಟ್ಟುಕೊಂಡಿರುತ್ತಾರೆ. 10ನೇ ಪ್ರತಿವಾದಿ ವಾದಿಗಳ ಮತ್ತು 1 ರಿಂದ 9ನೇ ಪ್ರತಿವಾದಿಗಳ ಅವಿಭಕ್ತ ಕುಟುಂಬದ ಸದಸ್ಯರಲ್ಲ. 1 ರಿಂದ 10ನೇ ಪ್ರತಿವಾದಿಗಳು, ವಾದಿಗಳುಮತ್ತು 1 ರಿಂದ 9ನೇ ಪ್ರತಿವಾದಿಗಳ ಯಾವುದೇ ಒಪ್ಪಿಗೆಯಿಲ್ಲದೆ ವಾದಿಗಳ ಪಿತ್ರಾರ್ಜಿತ ಮತ್ತು ಜಂಟಿ ಕುಟುಂಬದ ಆಸ್ತಿಗಳನ್ನು ಇತರರಿಗೆ ಮಾರಾಟ ಮಾಡುವ ಮೂಲಕ ಪರಸ್ಪರ ಶಾಮೀಲಾಗಿರುತ್ತಾರೆ. ಅವರು ಪರಸ್ಪರ ಶಾಮೀಲಾಗಿ ವಾದಿಗಳ ದಾವಾ ಆಸ್ತಿ ನಿವೇಶನದ ಮೇಲಿನ ಮಾಲೀಕತ್ವವನ್ನು ನಿರಾಕರಿಸಿದ್ದು ಮಾತ್ರವಲ್ಲದೆ, ವಾದಿಗಳ ಒಪ್ಪಿಗೆಯಿಲ್ಲದೆ ದಾವಾ ಸ್ವತ್ತಿನ ಜಾಗದ ಖಾತಾವನ್ನು ತಮ್ಮ ಹೆಸರಿಗೆ ಬದಲಾಯಿಸಲು ಪ್ರತಿವಾದಿಗಳೆಲ್ಲರೂ ಪರಸ್ಪರ ಶಾಮೀಲಾಗಿರುತ್ತಾರೆ. ದಾವಾ ಆಸ್ತಿಯ ಜಾಗದಲ್ಲಿ ಅಥವಾ ಅದರ ಮೇಲೆ ಪ್ರತಿವಾದಿಗಳಿಗೆ ಯಾವುದೇ ಸ್ವತಂತ್ರ ಮತ್ತು ಪ್ರತ್ಯೇಕ ಹಕ್ಕು ಇರುವುದಿಲ್ಲ. ವಾದಿಗಳು ಮತ್ತು 1 ರಿಂದ 9ನೇ ಪ್ರತಿವಾದಿಗಳ ನಡುವಿನ ಸಂಬಂಧವು ಹದಗೆಟ್ಟಿದ್ದರಿಂದ ವಾದಿಗಳು ಮತ್ತು 1 ರಿಂದ 9ನೇ ಪ್ರತಿವಾದಿಗಳು ತಮ್ಮ ತಮ್ಮ ಕುಟುಂಬಗಳೊಂದಿಗೆ ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆ. ಆದಾಗ್ಯೂ ವಾದಿಗಳು ಮತ್ತು 1 ರಿಂದ 9ನೇ ಪ್ರತಿವಾದಿಗಳು ದಾವಾ ಆಸ್ತಿಯ ಜಾಗವನ್ನು ತಮ್ಮ ಒಟ್ಟು ಕುಟುಂಬದ ಆಸ್ತಿಯಾಗಿ ಜಂಟಿಯಾಗಿ ಅನುಭವಿಸುತ್ತಿದ್ದಾರೆ. ಮತ್ತು ಇಂದಿಗೂ ಸಹ ಸದರಿ ಒಟ್ಟು ಕುಟುಂಬದ ಸದಸ್ಯರ ನಡುವೆ ಅದೇ ಮುಂದುವರಿಯುತ್ತಿದೆ. ಹದಗೆಟ್ಟ ಸಂಬಂಧದ ಅನಗತ್ಯ ಲಾಭವನ್ನು ಪಡೆದುಕೊಂಡು ಪ್ರತಿವಾದಿಗಳು ಒಬ್ಬರಿಗೊಬ್ಬರು ಶಾಮಿಲಾಗಿ, ದಾವಾ ಆಸ್ತಿಯ ಜಾಗದ ಖಾತಾವನ್ನು 1ನೇ ಪ್ರತಿವಾದಿ ಹೆಸರಿನಲ್ಲಿ ಇರುವಂತೆ ಮಾಡಲು ಪ್ರಯತ್ನಿಸಿರುತ್ತಾರೆ. ದಾವಾ ಸ್ವತ್ತಿನ ಜಾಗದ ಮೇಲಿನ ವಾದಿಗಳ ಹಕ್ಕನ್ನು ಕಿತ್ತುಕೊಳ್ಳಲು ತಮ್ಮ ನಡುವೆಯೇ ಕೆಲವು ದಾಖಲೆಗಳನ್ನು ಸೃಷ್ಟಿಸಲು ಪ್ರಯತ್ನಿಸುತ್ತಿದ್ದಾರೆ. ವಾದಿಗಳು 1 ರಿಂದ 9ನೇ ಪ್ರತಿವಾದಿಗಳ ಕಾನೂನುಬಾಹಿರ

ಚಟುವಟಿಕೆಗಳನ್ನು ತಿಳಿದುಕೊಂಡು, ದಾವಾ ಆಸ್ತಿಗಳನ್ನು ವಿಭಜಿಸಲು ಮತ್ತು ವಾದಿಗಳಿಗೆ ಅವರವರ ಕಾನೂನುಬದ್ಧ ಹಿಸ್ಸೆಯ ಪ್ರಕಾರ ಪ್ರತ್ಯೇಕ ಸ್ವಾಧೀನತೆ ಬಿಟ್ಟುಕೊಡಲು ಒತ್ತಾಯಿಸಿರುತ್ತಾರೆ. ಈ ಬಗ್ಗೆ ಗ್ರಾಮದ ಹಿರಿಯರ ಮೂಲಕ ಪ್ರತಿವಾದಿಗಳಿಗೆ ಬುದ್ದಿವಾದ ಹೇಳಿಸಿದರೂ ಪ್ರಯೋಜನವಾಗಿರುವುದಿಲ್ಲ. ನವೆಂಬರ್ 2017 ರ ಹಿಂದಿನ ವಾರದಲ್ಲಿ, 1 ರಿಂದ 9 ನೇ ಪ್ರತಿವಾದಿಗಳು ದಾವಾ ನಿವೇಶನವನ್ನು ವಿಭಜಿಸಲು ಮತ್ತು 1 ನೇ ವಾದಿ ತನ್ನ ಕಾನೂನುಬದ್ಧ ಹಿಸ್ಸೆಯನ್ನು ನೀಡಲು ಪದೇ ಪದೇ ವಿನಂತಿಸಿದರೂ ಪ್ರತಿವಾದಿಗಳು ನಿರಾಕರಿಸಿದಾಗ, ದಾವಾ ಕಾರಣ ಉಂಟಾಗಿರುತ್ತದೆ. ಆದ್ದರಿಂದ, ದಾವೆಯಲ್ಲಿ ಕೇಳಿದಂತೆ ತಮ್ಮ ಪರ ಡಿಕ್ರಿ ಮಾಡಬೇಕೆಂದು ವಾದಿಯರು ಪ್ರಾರ್ಥಿಸಿಕೊಂಡಿರುತ್ತಾರೆ.

**3.** ಪ್ರತಿವಾದಿಗಳಿಗೆ ದಾವೆಯ ಸಮನ್ಸನ್ನು ಕಳುಹಿಸಲಾಗಿ, 1,2 6 ರಿಂದ 9,10 ರಿಂದ 14, 19 ರಿಂದ 25 , 40 ರಿಂದ 44 ನೇ ಪ್ರತಿವಾದಿಗಳು ತಮ್ಮ ವಕೀಲರ ಮೂಲಕ ಹಾಜರಾಗಿದ್ದು, 1, 6 ರಿಂದ 9 ನೇ ಪ್ರತಿವಾದಿಗಳು ತಮ್ಮ ಪರ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ. ದಿನಾಂಕಃ 02-08-2021 ರಂದು 1 ನೇ ಪ್ರತಿವಾದಿ ತನ್ನ ಪರ ಹೆಚ್ಚುವರಿ ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದು, 6 ರಿಂದ 9 ನೇ ಪ್ರತಿವಾದಿಗಳು ಮೆಮೊ ಸಲ್ಲಿಸುವುದರ ಮೂಲಕ 1 ನೇ ಪ್ರತಿವಾದಿಯ ಹೆಚ್ಚುವರಿ ಲಿಖಿತ ಹೇಳಿಕೆಯನ್ನು ಅಳವಡಿಸಿಕೊಂಡಿರುತ್ತಾರೆ. ದಿನಾಂಕಃ 18-04-2023 ರಂದು 1, 6 ರಿಂದ 9 ನೇ ಪ್ರತಿವಾದಿಗಳು ತಮ್ಮ ಪರ ಹೆಚ್ಚುವರಿ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ. 11 ನೇ ಪ್ರತಿವಾದಿ ತನ್ನ ಪರ ಲಿಖಿತ ಹೇಳಿಕೆ ಹಾಗೂ ಎದುರುಕ್ಲೇಮನ್ನು ಸಲ್ಲಿಸಿದ್ದು, 10, 12 ರಿಂದ 14 ನೇ ಪ್ರತಿವಾದಿಗಳು ಮೆಮೋ ಸಲ್ಲಿಸುವುದರ ಮೂಲಕ 11 ನೇ ಪ್ರತಿವಾದಿಯ ಲಿಖಿತ ಹೇಳಿಕೆಯನ್ನು ಅಳವಡಿಸಿಕೊಂಡಿರುತ್ತಾರೆ. 11 ನೇ ಪ್ರತಿವಾದಿಯ ಎದುರುಕ್ಲೇಮಿಗೆ ವಾದಿಗಳು

ರಿಜಾಂಡರನ್ನು ಸಲ್ಲಿಸಿರುತ್ತಾರೆ. ಅದೇ ರೀತಿ ಸದರಿ ಎದುರು ಕ್ಲೇಮಿಗೆ 1 ಮತ್ತು 6 ರಿಂದ 9 ನೇ ಪ್ರತಿವಾದಿಗಳು ರಿಜಾಂಡರನ್ನು ಸಲ್ಲಿಸಿರುತ್ತಾರೆ. 43 ನೇ ಪ್ರತಿವಾದಿ ತನ್ನ ಪರ ಲಿಖಿತ ಹೇಳಿಕೆ ಮತ್ತು ಎದುರು ಕ್ಲೇಮನ್ನು ಸಲ್ಲಿಸಿದ್ದು, 19 ರಿಂದ 25, 40 ರಿಂದ 42 ಮತ್ತು 44 ನೇ ಪ್ರತಿವಾದಿಗಳು ತಮ್ಮ ಪರ ಮೆಮೊ ಸಲ್ಲಿಸುವುದರ ಮೂಲಕ 43 ನೇ ಪ್ರತಿವಾದಿಯ ಲಿಖಿತ ಹೇಳಿಕೆಯನ್ನು ಅಳವಡಿಸಿಕೊಂಡಿರುತ್ತಾರೆ. 26 ನೇ ಪ್ರತಿವಾದಿಯು ಗೈರು ಹಾಜರು ಇರುತ್ತಾನೆ. 3 ರಿಂದ 5, 15 ರಿಂದ 18, 27 ರಿಂದ 39, 45 ರಿಂದ 53 ನೇ ಪ್ರತಿವಾದಿಗಳಿಗೆ ದಾವೆಯ ಸಮನ್ಸ್ ಜಾರಿಯಾಗಿದ್ದರೂ ಸಹ, ಹಾಜರಾಗದ ಕಾರಣ ಅವರ ಸ್ಥಾನದಲ್ಲಿ ಏಕತರ್ಫಿಯವಾಗಿರುತ್ತದೆ.

**4. <u>1, 6 ರಿಂದ 9 ನೇ ಪ್ರತಿವಾದಿಯರ ಲಿಖಿತ-ಹೇಳಿಕೆಯ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆಃ-</u>**

ದಾವಾ ಆಸ್ತಿ ಹಾಗೂ ಇತರೆ ಸ್ವತ್ತುಗಳನ್ನು 1 ನೇ ವಾದಿ ಮತ್ತು 6 ನೇ ಪ್ರತಿವಾದಿಯ ಮೃತ ಪತಿ ಗಂಗಾಧರಪ್ಪ ಮತ್ತು 7 ರಿಂದ 9 ನೇ ಪ್ರತಿವಾದಿಯರ ತಂದೆ ಪರಣ್ಣ ಹಾಗೂ 1 ನೇ ಪ್ರತಿವಾದಿಯ ತಂದೆ ಮಲ್ಲಪ್ಪ ಮತ್ತು ಹಾಗೂ ಇತರೆ ಪ್ರತಿವಾದಿಯರ ಹಿರಿಯರು 1962 ರಲ್ಲಿ ವಿಭಾಗ ಮಾಡಿಕೊಂಡು ಅಂದಿನಿಂದ 1 ನೇ ಪ್ರತಿವಾದಿ ಹಾಗೂ ಇತರೆ ಪ್ರತಿವಾದಿಯರು ಇತರೆ ಸ್ವತ್ತುಗಳೊಂದಿಗೆ ದಾವಾ ಆಸ್ತಿಯನ್ನು ವಿಭಾಗ ಮಾಡಿಕೊಂಡು ಅನುಭವಿಸುತ್ತಾ ಬರುತ್ತಿದ್ದು, 1 ನೇ ವಾದಿ ಹಾಗೂ 6 ರಿಂದ 9 ನೇ ಪ್ರತಿವಾದಿಯರಿಗೆ ಸದರಿ ದಾವಾ ಆಸ್ತಿಯಲ್ಲಿ 10 ಗುಂಟೆ ಸ್ವತ್ತು ಬಂದಿದ್ದು, ಸದರಿ 10 ಗುಂಟೆ ಸ್ವತ್ತನ್ನು 1 ನೇ ವಾದಿ ಹಾಗೂ 6 ರಿಂದ 9 ನೇ ಪ್ರತಿವಾದಿಯರು ತಲಾ 02 ಗುಂಟೆಯಂತೆ ಹಾಗೂ 1 ನೇ ಪ್ರತಿವಾದಿ 10 ಗುಂಟೆ ಸ್ವತ್ತನ್ನು ಅನುಭವಿಸುತ್ತ ಬರುತ್ತಿರುತ್ತಾರೆ. ಹಾಗೂ ಕಾನೂನು ಬದ್ದವಾಗಿ ಸ್ವತ್ತಿನ ಸ್ವಾಧೀನ ಅನುಭೋಗ ಹೊಂದಿರುತ್ತಾರೆ. ವಾದಿಯರು, ಪ್ರತಿವಾದಿಯರಿಗೆ ಮೋಸ, ಮತ್ತು ಅನ್ಯಾಯ ಉಂಟು

ಮಾಡುವ ದುರುದ್ದೇಶ ಹಾಗು ದಾವಾ ಆಸ್ತಿಯಲ್ಲಿ ಅತಿ ಹೆಚ್ಚು ಪಾಲನ್ನು ಅಕ್ರಮವಾಗಿ ಕಬಳಿಸುವ ದುರುದ್ದೇಶದಿಂದ ಇಲ್ಲ-ಸಲ್ಲದ ಅಂಶಗಳನ್ನು ಸೇರಿಸಿ ಈ ದಾವೆ ಸಲ್ಲಿಸಿರುತ್ತಾರೆ ಹಾಗೂ ಅನಾವಶ್ಯಕವಾಗಿ ಸುಖಾ-ಸುಮ್ಮನೆ ದಾವೆ ಹೂಡಿ ಪ್ರತಿವಾದಿಯರಿಗೆ ತೊಂದರೆ ಉಂಟುಮಾಡಿರುತ್ತಾರೆ. ವಾದಿಯರು ವಿನಾ ಕಾರಣ ಸತ್ಯಾಂಶಗಳನ್ನು ಮರೆ-ಮಾಚಿ ಈ ದಾವೆ ಸಲ್ಲಿಸಿರುತ್ತಾರೆಂದು ಹಾಗೂ ವಾದಪತ್ರದಲ್ಲಿ ಆರೋಪಿಸಿರುವ ಉಳಿದ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದು ಅಲ್ಲಗಳೆಯುತ್ತಾ, ವಾದಿಯರ ದಾವೆಯನ್ನು ಖರ್ಚು ಸಹಿತ ವಜಾಗೊಳಿಸಬೇಕೆಂದು 1, 6 ರಿಂದ 9 ನೇ ಪ್ರತಿವಾದಿಗಳು ಪ್ರಾರ್ಥಿಸಿಕೊಂಡಿರುತ್ತಾರೆ.

**5. <u>ದಿನಾಂಕ-02-08-2021 ರ 1 ನೇ ಪ್ರತಿವಾದಿಯ ಹೆಚ್ಚುವರಿ ಲಿಖಿತ-ಹೇಳಿಕೆಯ ಸಂಕ್ಷಿಪ್ತ ಸಾರಾಂಶ ಈಕೆಳಗಿನಂತಿದೆಃ-</u>**

ದಾವಾ 2 ನೇ ಸ್ವತ್ತು ಮೂಲತಃ 14 ಎಕರೆ 20 ಗುಂಟೆ ಜಮೀನಾಗಿರುತ್ತದೆ ವಿನಃ ವಾದಿಯರು ತಿಳಿಸುವಂತೆ 11 ಎಕರೆ 18 ಗುಂಟೆ ಜಮೀನಾಗಿರುವುದಿಲ್ಲ. ವಾದಿ ಮತ್ತು ಪ್ರತಿವಾದಿಯರ ಮೂಲ ಪುರುಷನಾದ ಮಾಡದಕೆರೆ ರುದ್ರಪ್ಪ ಅಲಿಯಾಸ್ ರುದ್ರಯ್ಯ ಅವರಿಗೆ ಮೂಲತಃ 14 ಎಕರೆ 20 ಗುಂಟೆ ಜಮೀನು ಹಾಗೂ ಹೊಸದುರ್ಗ ಪಟ್ಟಣದಲ್ಲಿ, ಕರಿಹೆಂಚಿನ ಮನೆ ಸಹಿತ ಸುಮಾರು 100X40 ಅಡಿ ಸ್ವತ್ತು ಇದ್ದು, ಸದರಿ ಸ್ವತ್ತುಗಳನ್ನು 1930 ನೇ ಇಸ್ವಿಯಲ್ಲಿ ರುದ್ರಪ್ಪನವರ ಮಕ್ಕಳಾದ 1 ನೇ ಸಿದ್ದಪ್ಪ, 2 ನೇ ಪರಣ್ಣ ಹಾಗೂ 3 ನೇಮಲ್ಲಪ್ಪ ಇವರು ಲಿಖಿತಪತ್ರದ ಮುಖೇನ ವಿಭಾಗಮಾಡಿಕೊಂಡಿದ್ದು, ಸದರಿ ವಿಭಾಗದ ಪ್ರಕಾರ 1 ನೇ ಸಿದ್ದಪ್ಪ ತಂದೆ ರುದ್ರಪ್ಪ, ಹೊಸದುರ್ಗ ಪಟ್ಟಣದಲ್ಲಿನ, ಕರಿಹೆಂಚಿನಮನೆ ಸಹಿತ ಸುಮಾರು 100X40 ಅಡಿ ಸ್ವತ್ತನ್ನು ಪಡೆದುಕೊಂಡು, 14 ಎಕರೆ 20 ಗುಂಟೆ ಜಮೀನಿನಲ್ಲಿನ ಹಿಸ್ಸಾ ಭಾಗವನ್ನು ಬಿಟ್ಟುಕೊಟ್ಟಿರುತ್ತಾರೆ. 2 ನೇ ಪರಣ್ಣ ಹಾಗೂ 3 ನೇ ಮಲ್ಲಪ್ಪ ಇವರು ಸದರಿ 14

ಎಕರೆ 20 ಗುಂಟೆ ಜಮೀನಿನಲ್ಲಿ ಪರಣ್ಣನ ಹಿಸ್ಸೆಗೆ 7 ಎಕರೆ, ಹಾಗೂ ಮಲ್ಲಪ್ಪನಿಗೆ 7 ಎಕರೆ 17 ಗುಂಟೆಯಂತೆ ವಿಭಾಗ ಮಾಡಿಕೊಂಡು ಅನುಭವಿಸುತ್ತ ಬರುತ್ತಿದ್ದು, 2 ನೇ ಪರಣ್ಣ ತಂದೆ ರುದ್ರಪ್ಪ ತಮ್ಮ ಹಿಸ್ಸೆಗೆ ಬಂದ 7 ಎಕರೆ ಪೈಕಿ 02 ಎಕರೆ, 36 ಗುಂಟೆ ಸ್ವತ್ತನ್ನು ಮೀನಾಕ್ಷಿ ವಾಟರ್ ವರ್ಕ್ಸ್‌ಗಾಗಿ ಸರ್ಕಾರಕ್ಕೆ ಬಿಟ್ಟು ಕೊಟ್ಟು ಉಳಿದ ಸ್ವತ್ತನ್ನು ಅನುಭವಿಸುತ್ತಾ ಬರುತ್ತಿದ್ದು, ತದನಂತರ 1985 ನೇ ಇಸ್ವಿಯಲ್ಲಿ 6 ನೇ ಪ್ರತಿವಾದಿಯ ಮೃತಪತಿ ಗಂಗಾಧರಪ್ಪ ಮತ್ತು ಸಹೋದರರು (1 ನೇ ವಾದಿಯನ್ನು ಒಳಗೊಂಡಂತೆ) ಹಾಗೂ 1 ನೇ ಪ್ರತಿವಾದಿ ದಾವಾ ಸ್ವತ್ತನ್ನು ವಿಭಾಗ ಮಾಡಿಕೊಂಡು ಅನುಭವಿಸುತ್ತ ಬರುತ್ತಿರುತ್ತಾರೆ ಹಾಗೂ ಕಾನೂನುಬದ್ದವಾಗಿ ಸ್ವತ್ತಿನ ಸ್ವಾಧೀನ ಅನುಭೋಗ ಹೊಂದಿರುತ್ತಾರೆ. ವಾದಿಯರು, ಪ್ರತಿವಾದಿಯರಿಗೆ ಮೋಸ ಮತ್ತು ಅನ್ಯಾಯ ಉಂಟು ಮಾಡುವ ದುರುದ್ದೇಶದಿಂದ ಹಾಗೂ ದಾವಾ ಆಸ್ತಿಗಳನ್ನು ಅಕ್ರಮವಾಗಿ ಕಬಳಿಸುವ ದುರುದ್ದೇಶದಿಂದ ಇಲ್ಲ-ಸಲ್ಲದ ಅಂಶಗಳನ್ನು ಸೇರಿಸಿ, ಈ ದಾವೆ ಸಲ್ಲಿರುತ್ತಾರೆ. ಹಾಗೂ ಅನಾವಶ್ಯಕವಾಗಿ ಸುಖಾ-ಸುಮ್ಮನೆ ದಾವೆ ಹೂಡಿ 1 ನೇ ಪ್ರತಿವಾದಿಗೆ ತೊಂದರೆ ಉಂಟುಮಾಡಿರುತ್ತಾರೆ. ವಾದಿಯರು ವಿನಾಕಾರಣ ಸತ್ಯಾಂಶಗಳನ್ನು ಮರೆ-ಮಾಚಿ ದಾವೆ ಸಲ್ಲಿಸಿರುತ್ತಾರೆ. 1 ನೇ ಪ್ರತಿವಾದಿ ತನ್ನ ಮಕ್ಕಳೊಂದಿಗೆ ಆತನ ತಂದೆಯ ಹಿಸ್ಸೆಗೆ ಬಂದ ಸ್ವತ್ತನ್ನು ವಿಭಾಗ ಮಾಡಿಕೊಂಡು ಅನುಭವಿಸುತ್ತ ಬರುತ್ತಿರುತ್ತಾನೆ. ಅದೇ ರೀತಿ 1 ನೇ ವಾದಿ ಸಹ ಆತನ ವಿಭಾಗಕ್ಕೆ ಬಂದ ಸ್ವತ್ತನ್ನು ಅನುಭವಿಸುತ್ತಾ ಬರುತ್ತಿದ್ದು, 2 ನೇ ವಾದಿಯ ತಪ್ಪು ಗ್ರಹಿಕೆಯಿಂದಾಗಿ, 1 ಮತ್ತು 2 ನೇ ವಾದಿಯರು ಸುಖಾ-ಸುಮ್ಮನೆ ಪ್ರತಿವಾದಿಯರ ವಿರುದ್ಧ ಈ ದಾವೆ ಸಲ್ಲಿಸಿರುತ್ತಾರೆ.

**6. <u>ದಿನಾಂಕಃ18-04-2023 ರ 1, 6 ರಿಂದ 9 ನೇ ಪ್ರತಿವಾದಿಯರ ಹೆಚ್ಚುವರಿ ಲಿಖಿತ-ಹೇಳಿಕೆಯ ಸಂಕ್ಷಿಪ್ತ ಸಾರಾಂಶ ಈಕೆಳಗಿನಂತಿದೆಃ-</u>**

ದಾವಾ ತಪಶೀಲಿನ 3 ನೇ ಆಸ್ತಿ 2 ನೇ ವಾದಿಯ ತಂದೆ ಅಂದರೆ ಮೃತ 1 ನೇ ವಾದಿ

ಶಿವರುದ್ರಪ್ಪ ತಂದೆ ಪರಣ್ಣ ಮತ್ತು 6ನೇ ಪ್ರತಿವಾದಿಯ ಗಂಡ ಮೃತ ಗಂಗಾಧರಪ್ಪ, 7ನೇ ಪ್ರತಿವಾದಿ ಶೇಖರಪ್ಪ, 8ನೇ ಪ್ರತಿವಾದಿ ಮಹೇಶ್ವರಪ್ಪ ಮತ್ತು 9ನೇ ಪ್ರತಿವಾದಿ ಪ್ರಕಾಶ ಇವರು, ಅವರ ತಂದೆ ಪರಣ್ಣನ ವಿಭಾಗಕ್ಕೆ ಬಂದ ಸ್ವತ್ತುಗಳೊಂದಿಗೆ ದಾವಾ ತಪಶೀಲಿನ 3ನೇ ಆಸ್ತಿ ಅಂದರೆ ಜಮೀನು ಸರ್ವೆ ನಂ-7/8 ರ 6 ಎಕರೆ ಮತ್ತು ಜಮೀನು ಸರ್ವೆನಂ-7/9 ರ 3 ಎಕರೆ, ಒಟ್ಟು 9 ಎಕರೆ ಸ್ವತ್ತನ್ನು 1974ರಲ್ಲಿ ವಿಭಾಗ ಮಾಡಿಕೊಂಡಿದ್ದು, ಆ ಪೈಕಿ ವಾದಿಗೆ 02 ಎಕರೆ ಮತ್ತು 6 ರಿಂದ 9ನೇ ಪ್ರತಿವಾದಿಯರಿಗೆ ತಲಾ 1 ಎಕರೆ ಮುಕ್ಕಾಲು ಗುಂಟೆ ಸ್ವತ್ತನ್ನು ಪಡೆದು ಸ್ವಾಧೀನಾನುಭವದಲ್ಲಿರುತ್ತಾರೆ ಹಾಗೂ ಸದರಿ ದಾವಾ ತಲಪಶೀಲಿನ 3ನೇ ಆಸ್ತಿ ಈಗಾಗಲೆ ವಾದಿ ಮತ್ತು 6ರಿಂದ 9ನೇ ಪ್ರತಿವಾದಿಯರ ಮಧ್ಯೆ ವಿಭಾಗವಾಗಿ ಹಂಚಿಕೆಯಾಗಿರುವುದರಿಂದ ಸದರಿ ವಾದಿಯರು ಮತ್ತು 6 ರಿಂದ 9ನೇ ಪ್ರತಿವಾದಿಯರ ದಾವಾ ಸ್ವತ್ತನ್ನು ವಿಭಾಗ ಮಾಡಿಕೊಂಡು ಅನುಭವಿಸುತ್ತಾ ಬರುತ್ತಿರುತ್ತಾರೆ ಹಾಗೂ ಅವರಲ್ಲರೂ ಕಾನೂನುಬದ್ದವಾಗಿ ದಾವಾ ತಪಶೀಲಿನ 3ನೇ ಆಸ್ತಿಯ ಸ್ವಾಧೀನಾನುಭೋಗ ಹೊಂದಿರುತ್ತಾರೆ. ವಾದಿಯರು, ಪ್ರತಿವಾದಿಯರಿಗೆ ಮೋಸ ಮತ್ತು ಅನ್ಯಾಯ ಉಂಟು ಮಾಡುವ ದುರುದ್ದೇಶದಿಂದ ಹಾಗೂ ದಾವಾ ತಪಶೀಲಿನ ಸ್ವತ್ತುಗಳನ್ನು ಅಕ್ರಮವಾಗಿ ಕಬಳಿಸುವ ದುರುದ್ದೇಶದಿಂದ ಇಲ್ಲ-ಸಲ್ಲದ ಅಂಶಗಳನ್ನು ಸೇರಿಸಿ, ಈ ದಾವೆ ಸಲ್ಲಿಸಿರುತ್ತಾರೆ ಹಾಗೂ ಅನಾವಶ್ಯಕವಾಗಿ ಸುಖಾ-ಸುಮ್ಮನೆ ದಾವೆ ಹೂಡಿ 1, 6ರಿಂದ 9ನೇ ಪ್ರತಿವಾದಿಯರಿಗೆ ತೊಂದರೆ ಉಂಟುಮಾಡಿರುತ್ತಾರೆ. ವಾದಿಯರು ವಿನಾಕಾರಣ ಸತ್ಯಾಂಶವನ್ನು ಮರೆ-ಮಾಚಿ ಈ ದಾವೆ ಸಲ್ಲಿಸಿರುತ್ತಾರೆ. ವಾದಿ ಮಂಜುನಾಥ ತಂದೆ ಶಿವರುದ್ರಪ್ಪ ಮೇಲ್ಕಂಡ ದಾವಾ ತಪಶೀಲಿನ 1 ರಿಂದ 3ನೇ ಆಸ್ತಿಗಳಲ್ಲಿ ಈಗಾಗಲೇ ಪಾಲು ಪಡೆದುಕೊಂಡು ಸ್ವಾಧೀನಾನುಭವದಲ್ಲಿರುವುದಲ್ಲದೆ, ಪ್ರತಿವಾದಿಯರಿಗೆ ಮೋಸ ಮಾಡಿ, ಹೊಸರಾಳುಗ್ರಾಮದ ರಿ.ಸರ್ವೆ ನಂ-67/2 ರಲ್ಲಿ 3

ಎಕರೆ ಸ್ವತ್ತನ್ನು ಆತನ ಹೆಸರಿಗೆ ಅಕ್ರಮವಾಗಿ ವರ್ಗಾಯಿಸಿಕೊಂಡು ಅನುಭವಿಸುತ್ತ ಬರುತ್ತಿರುತ್ತಾನೆ. ವಾದಿ 1, 6 ರಿಂದ 9ನೇ ಪ್ರತಿವಾದಿಯರ ವಿರುದ್ಧ ದುರುದ್ದೇಶಪೂರ್ವಕವಾಗಿ ಈ ಸುಳ್ಳು ದಾವೆ ಸಲ್ಲಿಸಿರುತ್ತಾನೆ.

**7. <u>11 ನೇ ಪ್ರತಿವಾದಿಯ ಲಿಖಿತ-ಹೇಳಿಕೆ ಮತ್ತು ಎದುರುಕ್ಲೇಮಿನ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆಃ-</u>**

1ನೇ ವಾದಿಯ ಮುತ್ತಜ್ಜ ಮತ್ತು ಪ್ರತಿವಾದಿಗಳ ಮುತ್ತಜ್ಜನಾದ ರುದ್ರಪ್ಪನು ತನ್ನ ಮಕ್ಕಳಾದ ಸಿದ್ದಪ್ಪ, ಪರಣ್ಣ ಮತ್ತು ಮಲ್ಲಪ್ಪ ಎಂಬ 3 ಜನ ಗಂಡು ಮಕ್ಕಳನ್ನು ಬಿಟ್ಟು ಮೃತಪಟ್ಟಿರುತ್ತಾನೆ. ಸಿದ್ದಪ್ಪ ತಂದೆ ರುದ್ರಪ್ಪನು ತನ್ನ ಮಕ್ಕಳಾದ ಪರಣ್ಣ, ಶಿವಣ್ಣ, ಮರುಳುಸಿದ್ದಪ್ಪ, ಚಂದ್ರಪ್ಪ ಎಂಬ ಗಂಡು ಮಕ್ಕಳನ್ನು ಬಿಟ್ಟು ಮೃತಪಟ್ಟಿರುತ್ತಾನೆ. ಪರಣ್ಣ ತಂದೆ ಸಿದ್ದಪ್ಪನು ತನ್ನ ಹೆಂಡತಿ ಶಿವರುದ್ರಮ್ಮ, ಮಗ ಮುರುಗೇಶ್ ಮತ್ತು ಪಾರ್ವತಮ್ಮ, ರಾಜೇಶ್ವರಿ, ಉಮಾದೇವಿ ಹಾಗೂ ಕೊನೆಯ ಮಗಳು ಜ್ಯೋತಿ ಲಕ್ಷ್ಮಿ ಇವರನ್ನು ಬಿಟ್ಟು ಮೃತಪಟ್ಟಿರುತ್ತಾನೆ. ಚಂದ್ರಪ್ಪನು ತನ್ನ ಹೆಂಡತಿ ಪಾರ್ವತಮ್ಮಳನ್ನು ಬಿಟ್ಟು ಮೃತಪಟ್ಟಿರುತ್ತಾನೆ. ಪರಣ್ಣ ತಂದೆ ರುದ್ರಪ್ಪನು ತನ್ನ ಮಕ್ಕಳಾದ ಗಂಗಾಧರಪ್ಪ, ಶಿವರುದ್ರಪ್ಪ, ಶೇಖರಪ್ಪ, ಮಹೇಶ್ವರಪ್ಪ ಮತ್ತು ಕೊನೆಯ ಮಗ ಪ್ರಕಾಶ್ ಇವರನ್ನು ಬಿಟ್ಟು ಮೃತಪಟ್ಟಿರುತ್ತಾನೆ. ಮೃತ ಗಂಗಾಧರಪ್ಪ ತಂದೆ ಪರಣ್ಣನು ತನ್ನ ಹೆಂಡತಿ ಸುವರ್ಣಮ್ಮಳನ್ನು ಬಿಟ್ಟು ಮೃತಪಟ್ಟಿರುತ್ತಾನೆ. ಮಲ್ಲಪ್ಪ ತಂದೆ ರುದ್ರಪ್ಪನು ತನ್ನ ಮಗ ರುದ್ರಪ್ಪನನ್ನು ಬಿಟ್ಟು ಮೃತಪಟ್ಟಿರುತ್ತಾನೆ. ವಾದಿಗಳು ಮತ್ತು ಪ್ರತಿವಾದಿಗಳು ಹಿಂದೂ ಅವಿಭಕ್ತ ಕುಟುಂಬದ ಸದಸ್ಯರಾಗಿರುತ್ತಾರೆ. 1ನೇ ಪ್ರತಿವಾದಿ ಒಟ್ಟು ಕುಟುಂಬದ ಕರ್ತನಿರುತ್ತಾನೆ. ಲಿಖಿತ ಹೇಳಿಕೆಯ ತಪಶೀಲಿನ ಆಸ್ತಿಗಳು ವಾದಿಗಳ ಮತ್ತು ಪ್ರತಿವಾದಿಗಳ ಪಿತ್ರಾರ್ಜಿತ ಮತ್ತು ಜಂಟಿ ಕುಟುಂಬದ ಆಸ್ತಿಗಳಾಗಿರುತ್ತವೆ. ವಾದಿಗಳು ಮತ್ತು ಪ್ರತಿವಾದಿಗಳು ಲಿಖಿತ ಹೇಳಿಕೆಯ ತಪಶೀಲಿನ

ಆಸ್ತಿಗಳ ಶಾಂತಿಯುತ ಸ್ವಾಧೀನದಲ್ಲಿದ್ದು, ಇಂದಿನವರೆಗೂ ಯಾವುದೇ ಅಡೆ-ತಡೆ ಇಲ್ಲದೆ ಅನುಭವಿಸುತ್ತಿದ್ದಾರೆ. 1 ನೇ ಪ್ರತಿವಾದಿಯ ತಂದೆ 1957-58 ರಲ್ಲಿ ಎಂ.ಆರ್ ನಂ. 13/1957-58 ರ ಅಡಿಯಲ್ಲಿ ಸಿದ್ದಪ್ಪನ ಹೆಸರಿನಿಂದ ಆಸ್ತಿಯ ಖಾತಾವನ್ನು ತನ್ನ ಹೆಸರಿಗೆ ಬದಲಾವಣೆ ಮಾಡಿಕೊಂಡಿರುತ್ತಾನೆ. ಈ ಮಧ್ಯೆ ಅವರ ಅಜ್ಜ ಸಿದ್ದಪ್ಪನು 1960-61 ರಲ್ಲಿ ಮೀನಾಕ್ಷಿ ಜಲಮಂಡಳಿ ಕಾಮಗಾರಿಗಳ ನಿರ್ಮಾಣಕ್ಕಾಗಿ 2 ಎಕರೆ 36 ಗುಂಟೆ ಜಮೀನನ್ನು ಸರ್ಕಾರಕ್ಕೆ ಮಾರಾಟ ಮಾಡಿದ್ದನು. ಸದರಿ ಜಮೀನನ್ನು 1960-61 ರ ಎಂ.ಆರ್ ನಂ. 18/1960-61 ರ ಅಡಿಯಲ್ಲಿ ಸರ್ಕಾರದ ಪರವಾಗಿ ವರ್ಗಾವಣೆಯಾಗಿರುತ್ತದೆ. ಸದರಿ ಜಮೀನನ್ನು ಒಟ್ಟು ಕುಟುಂಬದ ಆಸ್ತಿ ಮತ್ತು ಇತರ ಆಸ್ತಿಗಳಾಗಿ ಪರಿಗಣಿಸಲಾಗಿರುತ್ತದೆ. ಅದರ ಮೇಲೆ, ಕರ್ನಾಟಕ ಸರ್ಕಾರವು 1964 ರಲ್ಲಿ 2 ಎಕರೆ 36 ಗುಂಟೆ ಜಮೀನಿಗೆ ಬದಲಾಗಿ 11 ರಿಂದ 14 ನೇ ಪ್ರತಿವಾದಿಗಳ ಕುಟುಂಬಕ್ಕೆ 04 ಎಕರೆ ಜಮೀನನ್ನು ಮಂಜೂರು ಮಾಡಿತ್ತು. ಆದರೆ ಆ ಸಮಯದಲ್ಲಿ 1 ನೇ ಪ್ರತಿವಾದಿಯ ತಂದೆ 11 ರಿಂದ 14 ನೇ ಪ್ರತಿವಾದಿಗಳ ಒಟ್ಟು ಕುಟುಂಬದ ಕರ್ತನಿದ್ದ. ಆದ್ದರಿಂದ ಸರ್ಕಾರವು 1 ನೇ ಪ್ರತಿವಾದಿಯ ತಂದೆಯ ಹೆಸರಿನಲ್ಲಿ ಜಮೀನನ್ನು ಮಂಜೂರು ಮಾಡಿತ್ತು. 11 ರಿಂದ 14 ನೇ ಪ್ರತಿವಾದಿಗಳ ತಾತನಾದ ಸಿದ್ದಪ್ಪನ ಜೀವಿತಾವಧಿಯಲ್ಲಿ 1 ನೇ ಪ್ರತಿವಾದಿಯ ತಂದೆ, ವಾದಿಗಳು ಮತ್ತು ಪ್ರತಿವಾದಿಗಳು ಒಟ್ಟು ಕುಟುಂಬದಿಂದ ಯಾವುದೇ ಹಿಸ್ಸೆಯನ್ನು ಇಂದಿನವರೆಗೆ ಪಡೆದುಕೊಂಡಿರುವುದಿಲ್ಲ. ಪ್ರತಿವಾದಿಗಳು ಮತ್ತು ವಾದಿಗಳು 11 ರಿಂದ 14 ನೇ ಪ್ರತಿವಾದಿಗಳ ತಾತ ಮತ್ತು ಇತರರ ನಡುವೆ ವಿಭಾಗ ಪತ್ರದ ನಕಲಿ ದಾಖಲೆಗಳನ್ನು ಸೃಷ್ಟಿಸಲು ಪ್ರಯತ್ನಿಸಿರುತ್ತಾರೆ. ಅವೆಲ್ಲವೂ ಸುಳ್ಳು ದಾಖಲೆಗಳಾಗಿರುತ್ತವೆ. ಮಂಜೂರಾದ ಸ್ವತ್ತು ಲಿಖಿತ ಹೇಳಿಕೆ ತಪಶೀಲಿನ 4 ನೇ ಸ್ವತ್ತಾಗಿರುತ್ತದೆ. ತದನಂತರ 1 ನೇ ಪ್ರತಿವಾದಿಯ ತಂದೆಯು 1962 ರಲ್ಲಿ ಮನೆ ನಿರ್ಮಾಣಕ್ಕಾಗಿ ಕೆಲ್ಲೋಡು

ಗ್ರಾಮದ ಸರ್ವೆ ನಂ 38 ರಲ್ಲಿರುವ 00.20 ಗುಂಟೆ ಜಮೀನಿನ ಜಂಟಿ ಕುಟುಂಬದ ಸ್ವತ್ತನ್ನು ಭೂಪರಿವರ್ತನೆ ಮಾಡಿಕೊಂಡಿದ್ದನು. 1 ನೇ ಪ್ರತಿವಾದಿಯ ತಂದೆಯ ಮರಣದ ನಂತರ, 1 ನೇ ಪ್ರತಿವಾದಿ ಲಿಖಿತ ಹೇಳಿಕೆ ತಪಶೀಲಿನ ಸ್ವತ್ತಿನ ಖಾತಾವನ್ನು ತನ್ನ ಹೆಸರಿಗೆ ಬದಲಾಯಿಸಿಕೊಂಡಿರುತ್ತಾನೆ. ಲಿಖಿತ ಹೇಳಿಕೆ ತಪಶೀಲಿನ 1 ನೇ ಆಸ್ತಿಯ ಖಾತೆಯು 1 ನೇ ಪ್ರತಿವಾದಿಯ ಹೆಸರಿನಲ್ಲಿದೆ. ಲಿಖಿತ ಹೇಳಿಕೆ ತಪಶೀಲಿನ 1 ನೇ ಆಸ್ತಿಯ ಖಾತೆಯು 1 ಮತ್ತು 6 ರಿಂದ 9 ನೇ ಪ್ರತಿವಾದಿಗಳು ಹಾಗೂ 1 ನೇ ವಾದಿಯ ಹೆಸರಿನಲ್ಲಿ ಇರುತ್ತದೆ. ಲಿಖಿತ ಹೇಳಿಕೆ ತಪಶೀಲಿನ 3 ನೇ ಆಸ್ತಿಯ ಖಾತೆಯು 6 ನೇ ಪ್ರತಿವಾದಿಯ ಹೆಸರಿನಲ್ಲಿಇರುತ್ತದೆ. ಲಿಖಿತ ಹೇಳಿಕೆ ತಪಶೀಲಿನ 4 ನೇ ಆಸ್ತಿಯ ಖಾತೆಯು 3(ಎ)ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ. ಲಿಖಿತ ಹೇಳಿಕೆ ತಪಶೀಲಿನ ಸ್ವತ್ತುಗಳೆಲ್ಲವೂ ವಾದಿಗಳ ಮತ್ತು ಪ್ರತಿವಾದಿಗಳ ತಂದೆಯವರು ಅನುವಂಶಿಕವಾಗಿ ಪಡೆದ ಆಸ್ತಿಯಾಗಿರುತ್ತವೆ. ವಾದಿಗಳು ಮತ್ತು ಪ್ರತಿವಾದಿಗಳು ಲಿಖಿತ ಹೇಳಿಕೆ ತಪಶೀಲಿನ ಸ್ವತ್ತುಗಳ ಶಾಂತಿಯುತ ಸ್ವಾಧೀನಾನುಭವದಲ್ಲಿರುತ್ತಾರೆ. ವಾದಿಗಳು ಮತ್ತು ಪ್ರತಿವಾದಿಗಳು ಯಾವುದೇ ಅಡೆ-ತಡೆ ಇಲ್ಲದೆ ಇಂದಿನವರೆಗೆ ಲಿಖಿತ ಹೇಳಿಕೆ ತಪಶೀಲಿನ ಸ್ವತ್ತುಗಳನ್ನು ಜಂಟಿಯಾಗಿ ಸ್ವಾಧೀನದಲ್ಲಿಟ್ಟುಕೊಂಡು ಅನುಭವಿಸುತ್ತಿದ್ದಾರೆ. 1 ನೇ ಪ್ರತಿವಾದಿ ಇತರರೊಂದಿಗೆ ಶಾಮೀಲಾಗಿ ವಾದಿಗಳ ಮತ್ತು ಪ್ರತಿವಾದಿಗಳ ಪಿತ್ರಾರ್ಜಿತ ಹಾಗೂ ಜಂಟಿ ಕುಟುಂಬದ ಸ್ವತ್ತುಗಳನ್ನು 2 ಮತ್ತು 11 ರಿಂದ 14 ನೇ ಪ್ರತಿವಾದಿಗಳ ಒಪ್ಪಿಗೆ ಇಲ್ಲದೆ, ವಂಚಿಸುವ ಉದ್ದೇಶದಿಂದ ಇತರರಿಗೆ ಮಾರಾಟ ಮಾಡಿರುತ್ತಾರೆ. ಅವರು ಪರಸ್ಪರ ಶಾಮೀಲಾಗಿದ್ದು, 2 ಮತ್ತು 11 ರಿಂದ 14 ನೇ ಪ್ರತಿವಾದಿಗಳ ಲಿಖಿತ ಹೇಳಿಕೆ ತಪಶೀಲಿನ ಸ್ವತ್ತುಗಳ ಮೇಲಿನ ಮಾಲೀಕತ್ವವನ್ನು ನಿರಾಕರಿಸಿದ್ದು ಮಾತ್ರವಲ್ಲದೆ, ವಾದಿಗಳು ಮತ್ತು ಪ್ರತಿವಾದಿಗಳು ಎಲ್ಲರೂ ಪರಸ್ಪರ ಶಾಮೀಲಾಗಿ 11 ರಿಂದ 14 ನೇ ಪ್ರತಿವಾದಿಗಳ ಸಮ್ಮತಿ ಇಲ್ಲದೆ ಲಿಖಿತ ಹೇಳಿಕೆ ತಪಶೀಲಿನ ಸ್ವತ್ತುಗಳ ಖಾತಾವನ್ನು

ತಮ್ಮ ಹೆಸರಿಗೆ ಬದಲಾಯಿಸಿಕೊಂಡಿರುತ್ತಾರೆ. ಈ ವ್ಯವಹಾರವು ಕಾನೂನುಬಾಹಿರವಾಗಿದ್ದು, ಅದು 2 ಮತ್ತು 11 ರಿಂದ 14 ನೇ ಪ್ರತಿವಾದಿಗಳಿಗೆ ಬಾಂದಾಯಿಸುವುದಿಲ್ಲ. 1, 3 ರಿಂದ 9 ನೇ ಪ್ರತಿವಾದಿಗಳು ಮತ್ತು ವಾದಿಗಳಿಗೆ ಲಿಖಿತ ಹೇಳಿಕೆ ತಪಶೀಲಿನ ಸ್ವತ್ತುಗಳ ಮೇಲೆ ಯಾವುದೇ ಸ್ವತಂತ್ರ ಮತ್ತು ಪ್ರತ್ಯೇಕ ಹಕ್ಕು ಇರುವುದಿಲ್ಲ. ವಾದಿಗಳು ಮತ್ತು 2 ಹಾಗೂ 11 ರಿಂದ 14 ನೇ ಪ್ರತಿವಾದಿಯರ ನಡುವಿನ ಸಂಬಂಧವು ಹದಗೆಟ್ಟ ಕಾರಣ, ವಾದಿಗಳು ಮತ್ತು ಪ್ರತಿವಾದಿಗಳು ತಮ್ಮ ತಮ್ಮ ಕುಟುಂಬಗಳೊಂದಿಗೆ ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆ, ಆದಾಗ್ಯೂ ವಾದಿಗಳು ಮತ್ತು ಪ್ರತಿವಾದಿಗಳು ಲಿಖಿತ ಹೇಳಿಕೆಯ ತಪಶೀಲಿನ ಆಸ್ತಿಗಳನ್ನು ಜಂಟಿಯಾಗಿ ತಮ್ಮ ಒಟ್ಟು ಕುಟುಂಬದ ಆಸ್ತಿಗಳಾಗಿ ಅನುಭವಿಸುತ್ತಿದ್ದಾರೆ. ಮತ್ತು ಇಂದಿಗೂ ಸಹ ಸದರಿ ಒಟ್ಟು ಕುಟುಂಬದ ಸದಸ್ಯರ ನಡುವೆ ಅದೇ ಮುಂದುವರೆದಿರುತ್ತದೆ. ಪ್ರತಿವಾದಿಗಳು ಸದರಿ ಹದಗೆಟ್ಟ ಸಂಬಂಧದ ಅನಗತ್ಯ ಲಾಭವನ್ನು ಪಡೆದುಕೊಂಡು, ಲಿಖಿತ ಹೇಳಿಕೆಯ ತಪಶೀಲಿನ ಆಸ್ತಿಗಳು 1 ನೇ ಪ್ರತಿವಾದಿಯ ಹೆಸರಿನಲ್ಲಿರುವುದನ್ನು ಬಳಸಿಕೊಂಡು, ಪರಸ್ಪರ ಒಳಸಂಚು ನಡೆಸಿ ಲಿಖಿತ ಹೇಳಿಕೆಯ ತಪಶೀಲಿನ ಆಸ್ತಿಗಳ ಮೇಲೆ 2, 11 ರಿಂದ 14 ನೇ ಪ್ರತಿವಾದಿಗಳ ಹಕ್ಕನ್ನು ಕಿತ್ತುಕೊಳ್ಳಲು ತಮ್ಮ ನಡುವೆ ಕೆಲವು ದಾಖಲೆಗಳನ್ನು ಸೃಷ್ಟಿಸಲು ಪ್ರಯತ್ನಿಸುತ್ತಿದ್ದಾರೆ. 2 ಮತ್ತು 11 ರಿಂದ 14 ನೇ ಪ್ರತಿವಾದಿಗಳು 1 ನೇ ಪ್ರತಿವಾದಿ ಮತ್ತು 3 ರಿಂದ 9 ಪ್ರತಿವಾದಿಗಳ ಕಾನೂನುಬಾಹಿರ ಚಟುವಟಿಕೆಗಳನ್ನು ತಿಳಿದು, ಲಿಖಿತ ಹೇಳಿಕೆಯ ತಪಶೀಲಿನ ಆಸ್ತಿಗಳಲ್ಲಿ ತಮ್ಮ ತಂದೆಯ ಹಿಸ್ಸೆಯನ್ನು ಮತ್ತು ಮೃತ ಪರಣ್ಣ ತಂದೆ ಸಿದ್ದಪ್ಪನ ಹಿಸ್ಸೆಯ ಪ್ರತ್ಯೇಕ ಸ್ವಾಧೀನತೆಯನ್ನು ಬಿಟ್ಟುಕೊಡಲು ಒತ್ತಾಯಿಸಿರುತ್ತಾರೆ. ಪ್ರತಿವಾದಿಗಳು ಮತ್ತು 1 ನೇ ವಾದಿ ಗ್ರಾಮದ ಹಿರಿಯರು ನೀಡಿದ ಸಲಹೆಗಳನ್ನು ತಿರಸ್ಕರಿಸಿದ್ದು, ನವೆಂಬರ್ 2017 ರ ಹಿಂದಿನ ವಾರದಲ್ಲಿ 1 ರಿಂದ 9 ನೇ ಪ್ರತಿವಾದಿಗಳು ಮತ್ತು ವಾದಿಗಳು ಲಿಖಿತ ಹೇಳಿಕೆಯ ತಪಶೀಲಿನ ಆಸ್ತಿಗಳನ್ನು

ವಿಭಜಿಸಲು ನಿರಾಕರಿಸಿದಾಗ ಮತ್ತು 2,11 ರಿಂದ 14 ನೇ ಪ್ರತಿವಾದಿಗಳು ಬೇಡಿಕೆ, ವಿನಂತಿ ಮಾಡಿದಾಗ್ಯೂ ಅವರು ಲಿಖಿತ ಹೇಳಿಕೆಯ ತಪಶೀಲಿನ ಆಸ್ತಿಗಳಲ್ಲಿ ಅವರ ಪ್ರತ್ಯೇಕ ಹಿಸ್ಸೆಯನ್ನು ಕೊಡಲು ನಿರಾಕರಿಸಿದಾಗ, ದಾವಾ ಕಾರಣ ಉಂಟಾಗಿರುತ್ತದೆ ಎಂದು ಹಾಗೂ ವಾದಪತ್ರದಲ್ಲಿ ಆರೋಪಿಸಿರುವ ಉಳಿದ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದು ಅಲ್ಲಗಳೆಯುತ್ತಾ, ಎದುರು ಕ್ಲೇಮಿನಲ್ಲಿ ಕೇಳಿದಂತೆ ಲಿಖಿತ ಹೇಳಿಕೆಯ ತಪಶೀಲಿನ ಆಸ್ತಿಗಳನ್ನು ವಾದಿಗಳ ಮತ್ತು ಪ್ರತಿವಾದಿಗಳ ಪಿತ್ರಾರ್ಜಿತ ಜಂಟಿ ಕುಟುಂಬದ ಆಸ್ತಿಗಳೆಂದು ಘೋಷಿಸಿ, ಸದರಿ ಆಸ್ತಿಗಳಲ್ಲಿ 2, 11 ರಿಂದ 14 ನೇ ಪ್ರತಿವಾದಿಗಳ ಕಾನೂನುಬದ್ಧ ಹಿಸ್ಸೆಯನ್ನು ಪ್ರತ್ಯೇಕಿಸಿ ಕೊಡಬೇಕೆಂದು ಹಾಗೂ ಮಧ್ಯಕಾಲಿನ ಲಾಭವನ್ನು ಕೊಡಿಸಬೇಕೆಂದು 11 ನೇ ಪ್ರತಿವಾದಿ ಪ್ರಾರ್ಥಿಸಿಕೊಂಡಿರುತ್ತಾನೆ.

**8. <u>11 ನೇ ಪ್ರತಿವಾದಿಯ ಎದುರು ಕ್ಲೇಮಿಗೆ ವಾದಿಯರು ಸಲ್ಲಿಸಿದ ರಿ-ಜಾಯಿಂಡರ್ ನ ಸಂಕ್ಷಿಪ್ತ ಸಾರಂಶ ಈ ಕೆಳಗಿನಂತಿದೆ</u>.**

ಪ್ರತಿವಾದಿಗಳು ಲಿಖಿತ ಹೇಳಿಕೆಯ ಆಸ್ತಿಗಳನ್ನು ಸರಿಯಾಗಿ ಮೌಲ್ಯಮಾಪನ ಮಾಡಿರುವುದಿಲ್ಲ ಮತ್ತು ಮಾರುಕಟ್ಟೆ ಮೌಲ್ಯದ ಆಧಾರದ ಮೇಲೆ ನ್ಯಾಯಾಲಯದ ಶುಲ್ಕವನ್ನು ಭರಿಸಿರುವುದಿಲ್ಲ. ಪ್ರತಿವಾದಿಗಳ ಲಿಖಿತ ಹೇಳಿಕೆಯು ಕಾನೂನಿನ ಪ್ರಕಾರ ಊರ್ಜಿತವಾಗಿರುವುದಿಲ್ಲ. ಲಿಖಿತ ಹೇಳಿಕೆಯ ಖಂಡಿಕೆಯಲ್ಲಿ ಪ್ರಾರ್ಥಿಸಿದಂತೆ ಪ್ರತಿವಾದಿಗಳು ಯಾವುದೇ ಪರಿಹಾರಕ್ಕೆ ಅರ್ಹರಾಗಿರುವುದಿಲ್ಲ. ಲಿಖಿತ ಹೇಳಿಕೆಯ ತಪಶೀಲಿನ ಆಸ್ತಿಗಳು ಚೆಕ್ಕುಬಂದಿಗಳು ಕಾಲ್ಪನಿಕವಾಗಿದ್ದು, ಪ್ರಸ್ತುತ ಲಿಖಿತ ಹೇಳಿಕೆಯನ್ನು ಸಲ್ಲಿಸುವ ಉದ್ದೇಶಕ್ಕಾಗಿ ಮಾತ್ರವೇ ಸೃಷ್ಟಿಸಲಾಗಿರುತ್ತದೆ. ಪ್ರತಿವಾದಿಗಳ ಲಿಖಿತ ಹೇಳಿಕೆಯು ಸುಳ್ಳು, ಕ್ಷುಲ್ಲಕ ಮತ್ತು ವಾದಿಗಳಿಗೆ ಕಿರುಕುಳ ನೀಡುವಂತದ್ದಾಗಿರುತ್ತದೆ. ಆದ್ದರಿಂದ, ಪ್ರತಿವಾದಿಗಳ ಲಿಖಿತ ಹೇಳಿಕೆಯನ್ನು ಹೆಚ್ಚಿನ

ಖರ್ಚಿನೊಂದಿಗೆ ವಜಾಗೊಳಿಸಬೇಕೆಂದು ವಾದಿಗಳು ಪ್ರಾರ್ಥಿಸಿಕೊಂಡಿರುತ್ತಾರೆ.

**9. 11 ನೇ ಪ್ರತಿವಾದಿಯ ಎದುರು ಕ್ಲೇಮಿಗೆ 1, 6 ರಿಂದ 9 ನೇ ಪ್ರತಿವಾದಿಯರು ಸಲ್ಲಿಸಿದ ರಿ-ಜಾಯಿಂಡರ್ ನ ಸಂಕ್ಷಿಪ್ತ ಸಾರಾಂಶ ಈಕೆಳಗಿನಂತಿದೆಃ-**

ದಾವಾ ತಪಶೀಲಿನ 1 ರಿಂದ 4 ನೇ ಸ್ವತ್ತುಗಳಿಗೂ ಹಾಗೂ 11 ನೇ ಪ್ರತಿವಾದಿಗೂ ಯಾವುದೇ ರೀತಿಯ ಸಂಬಂಧವಿರುದಿಲ್ಲ. 11 ನೇ ಪ್ರತಿವಾದಿಯ ಅಜ್ಜ ಅಂದೆರ 1 ನೇ ಸಿದ್ದಪ್ಪ ಮತ್ತು ಮೃತ ವಾದಿ ಶಿವರುದ್ರಪ್ಪ ಹಾಗೂ 1 ರಿಂದ 9 ನೇ ಪ್ರತಿವಾದಿಯರ ತಂದೆ ಹಾಗೂ 6 ನೇ ಪ್ರತಿವಾದಿಯ ಮಾವನಾದ ಪರಣ್ಣ ಮತ್ತು 1 ನೇ ಪ್ರತಿವಾದಿಯ ತಂದೆ ಮಲ್ಲಪ್ಪ ಇವರುಗಳು, ತಮಗೆ ಸೇರಿದ ಸುಮಾರು 14 ಎಕರೆ 20 ಗುಂಟೆ ಜಮೀನು ಹಾಗೂ ಹೊಸದುರ್ಗ ಪಟ್ಟಣದಲ್ಲಿ, ಕರಿಹೆಂಚಿನ ಮನೆ ಸಹಿತ ಸುಮಾರು 100X 40 ಅಡಿ ಸ್ವತ್ತು ಇದ್ದು, ಸದರಿ ಸ್ವತ್ತುಗಳನ್ನು 1930 ನೇ ಇಸ್ವಿಯಲ್ಲಿ ರುದ್ರಪ್ಪನವರ ಮಕ್ಕಳಾದ 1 ನೇ ಸಿದ್ದಪ್ಪ, 2 ನೇ ಪರಣ್ಣ ಹಾಗೂ 3 ನೇ ಮಲ್ಲಪ್ಪ ಇವರು ಲಿಖಿತ ಪತ್ರದ ಮುಖೇನ ವಿಭಾಗಮಾಡಿಕೊಂಡಿದ್ದು, ಸದರಿ ವಿಭಾಗದ ಪ್ರಕಾರ 1 ನೇ ಸಿದ್ದಪ್ಪ ತಂದೆ ರುದ್ರಪ್ಪ, ಹೊಸದುರ್ಗ ಪಟ್ಟಣದಲ್ಲಿನ, ಕರಿಹೆಂಚಿನಮನೆ ಸಹಿತ ಸುಮಾರು 100X40 ಅಡಿ ಸ್ವತ್ತನ್ನು ಪಡೆದುಕೊಂಡು, 14 ಎಕರೆ 20 ಗುಂಟೆ ಜಮೀನಿನಲ್ಲಿನ ಹಿಸ್ಸಾ ಭಾಗವನ್ನು ಬಿಟ್ಟುಕೊಟ್ಟಿರುತ್ತಾರೆ. ಸದರಿ ವಿಭಾಗವಾದ ಕಾಲದಿಂದಲೂ ವಾದಿ-ಪ್ರತಿವಾದಿಯರು ಅವರಿಗೆ ಸೇರಿದ ಸ್ವತ್ತುಗಳನ್ನು ಅನುಭವಿಸುತ್ತ ಪೂರ್ಣಪ್ರಮಾಣದಲ್ಲಿ ಬೇರೆ-ಬೇರೆಯಾಗಿ ಹಾಗೂ ಕಾನೂನುಬದ್ದವಾಗಿ ಸ್ವತ್ತಿನ ಸ್ವಾಧೀನಾನುಭೋಗ ಹೊಂದಿರುತ್ತಾರೆ. ವಾದಿಯರು ಮತ್ತು 11 ನೇ ಪ್ರತಿವಾದಿಯರು ಒಬ್ಬರಿಗೊಬ್ಬರು ಷರಿಕ್ಕಾಗಿ, 1 ನೇ ಪ್ರತಿವಾದಿ ಹಾಗೂ 6 ರಿಂದ 9 ನೇ ಪ್ರತಿವಾದಿಯರಿಗೆ ಮೋಸ ಮತ್ತು ಅನ್ಯಾಯ ಉಂಟು ಮಾಡುವ ದುರುದ್ದೇಶದಿಂದ ಹಾಗೂ ದಾವಾ ಆಸ್ತಿಗಳನ್ನು ಅಕ್ರಮವಾಗಿ ಕಬಳಿಸುವ ದುರುದ್ದೇಶದಿಂದ ಇಲ್ಲ-ಸಲ್ಲದ ಅಂಶಗಳನ್ನು

ಸೇರಿಸಿ, ಲಿಖಿತ ತಕರಾರು ಹೇಳಿಕೆ ಮತ್ತು ಎದುರುಕ್ಲೇಮ ಸಲ್ಲಿಸಿರುತ್ತಾರೆ. ಹಾಗು 1, 6 ರಿಂದ 9 ನೇ ಪ್ರತಿವಾದಿಯರಿಗೆ ತೊಂದರೆ ಉಂಟುಮಾಡಿರುತ್ತಾರೆ. 11 ನೇ ಪ್ರತಿವಾದಿ 2, 12,13, ಮತ್ತು 14 ನೇ ಪ್ರತಿವಾದಿಯರೊಂದಿಗೆ ಸೇರಿಕೊಂಡು, ವಿನಾ ಕಾರಣ ಸತ್ಯಾಂಶವನ್ನು ಮರೆ-ಮಾಚಿ ಲಿಖಿತ ತಕರಾರು ಹೇಳಿಕೆ ಮತ್ತು ಎದುರು ಕ್ಲೇಮ್ ಸಲ್ಲಿಸಿರುತ್ತಾರೆ. 1 ನೇ ಪ್ರತಿವಾದಿ ತನ್ನ ಮಕ್ಕಳೊಂದಿಗೆ ಆತನ ತಂದೆಯ ಹಿಸ್ಸೆಗೆ ಬಂದ ಸ್ವತ್ತನ್ನು ವಿಭಾಗ ಮಾಡಿಕೊಂಡು ಅನುಭವಿಸುತ್ತ ಬರುತ್ತಿರುತ್ತಾನೆ. ಅದೇ ರೀತಿ 1 ನೇ ವಾದಿ ಸಹ ಆತನ ವಿಭಾಗಕ್ಕೆ ಬಂದ ಸ್ವತ್ತುಗಳನ್ನು ಅನುಭವಿಸುತ್ತ ಬರುತ್ತಿದ್ದು, 2 ನೇ ವಾದಿಯ ಚಿತಾವಣೆಯಿಂದ ಹಾಗೂ ತಪ್ಪು ಗ್ರಹಿಕೆಯಿಂದಾಗ, 11 ನೇ ಪ್ರತಿವಾದಿ ಸುಖಾ-ಸುಮ್ಮನೆ 1, 6 ರಿಂದ 9 ನೇ ಪ್ರತಿವಾದಿಯರ ವಿರುದ್ಧ ಲಿಖಿತ ಹೇಳಿಕೆ ಮತ್ತು ಎದುರುಕ್ಲೇಮನ್ನು ಸಲ್ಲಿಸಿರುತ್ತಾರೆ. 11 ನೇ ಪ್ರತಿವಾದಿಯ ಅಜ್ಜ ಸಿದ್ದಪ್ಪ ಬಹಳ ಬೆಲೆ ಬಾಳುವಂತಹ ಹೊಸದುರ್ಗ ಪಟ್ಟಣದಲ್ಲಿರುವ ಸ್ವತ್ತನ್ನು ವಿಭಾಗದಲ್ಲಿ ಪಡೆದುಕೊಂಡ ಮೇಲೆ ಸಿದ್ದಪ್ಪ ಮತ್ತು ಆತನ ಮಗ ಪರಣ್ಣ ಅಂದರೆ 11 ನೇ ಪ್ರತಿವಾದಿಯ ತಂದೆ, ಸದರಿ ಸ್ವತ್ತನ್ನು 3(ಎ)ನೇ ಪ್ರತಿವಾದಿಯ ಕುಟುಂಬಕ್ಕೂ ಹಾಗೂ ಇತರೆಯವರಿಗೂ ಮಾರಾಟ ಮಾಡಿರುತ್ತಾರೆ. ಕಾರಣ ಸದರಿ ಲಿಖಿತ ಹೇಳಿಕೆ ಮತ್ತು ಎದುರುಕ್ಲೇಮ್ ತಪಶೀಲಿನ ಆಸ್ತಿಯಲ್ಲಿ 11 ನೇ ಪ್ರತಿವಾದಿ 2, 12, 13, ಮತ್ತು 14 ನೇ ಪ್ರತಿವಾದಿಯರಿಗೆ ಯಾವುದೇ ಹಕ್ಕು, ಅಧಿಕಾರ ಹಾಗೂ ಹಿಸ್ಸೆ ಇರುವುದಿಲ್ಲ. ಆದ್ದರಿಂದ, 11 ನೇ ಪ್ರತಿವಾದಿ ಸಲ್ಲಿಸಿರುವ ಲಿಖಿತ ಹೇಳಿಕೆ ಮತ್ತು ಎದುರು ಕ್ಲೇಮನ್ನು ಖರ್ಚು ಸಹಿತ ವಜಾ ಮಾಡಬೇಕೆಂದು 1, 6 ರಿಂದ 9 ನೇ ಪ್ರತಿವಾದಿಯರು ಪ್ರಾರ್ಥಿಸಿಕೊಂಡಿರುತ್ತಾರೆ.

**10. <u>43 ನೇ ಪ್ರತಿವಾದಿಯ ಲಿಖಿತ-ಹೇಳಿಕೆ ಮತ್ತು ಎದುರುಕ್ಲೇಮಿನ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆಃ-</u>**

ವಾದಿಗಳು ಮತ್ತು ಪ್ರತಿವಾದಿಗಳು ಹಿಂದೂ ಅವಿಭಕ್ತ ಕುಟುಂಬದ ಸದಸ್ಯರಾಗಿದ್ದು, 1 ನೇ ಪ್ರತಿವಾದಿ ಸದರಿ ಒಟ್ಟು ಕುಟುಂಬದ ಕರ್ತನಾಗಿರುತ್ತಾನೆ. ಲಿಖಿತ ಹೇಳಿಕೆಯ ತಪಶೀಲಿನ ಆಸ್ತಿಗಳು ವಾದಿಗಳ ಮತ್ತು ಪ್ರತಿವಾದಿಗಳ ಪಿತ್ರಾರ್ಜಿತ ಹಾಗೂ ಜಂಟಿ ಕುಟುಂಬದ ಆಸ್ತಿಗಳಾಗಿರುತ್ತವೆ. ವಾದಿಗಳು ಮತ್ತು ಪ್ರತಿವಾದಿಗಳು ಇಂದಿನವರೆಗೂ ಯಾವುದೇ ಅಡೆ-ತಡೆ ಇಲ್ಲದೆ ಲಿಖಿತ ಹೇಳಿಕೆಯ ತಪಶೀಲಿನ ಆಸ್ತಿಗಳ ಶಾಂತಿಯುತ ಸ್ವಾಧೀನಾನುಭವದಲ್ಲಿರುತ್ತಾರೆ. 1 ನೇ ಪ್ರತಿವಾದಿಯ ತಂದೆಯು 1957-58 ರಲ್ಲಿ ಎಂ.ಆರ್ ಸಂಖ್ಯೆ 13/1957-58 ರ ಅಡಿಯಲ್ಲಿ ಸಿದ್ದಪ್ಪ ಇವನ ಹೆಸರಿನಿಂದ ತನ್ನ ಹೆಸರಿಗೆ ಆಸ್ತಿಯ ಖಾತಾವನ್ನು ವರ್ಗಾಯಿಸಿಕೊಂಡಿರುತ್ತಾನೆ. ಈ ನಡುವೆ 43 ನೇ ಪ್ರತಿವಾದಿಯ ತಾತ ಸಿದ್ದಪ್ಪನು 2 ಎಕರೆ 36 ಗುಂಟೆ ಜಮೀನನ್ನು 1960-61 ರಲ್ಲಿ ಮೀನಾಕ್ಷಿ ಜಲಮಂಡಳಿ ಕಾಮಗಾರಿ ನಿರ್ಮಾಣಕ್ಕಾಗಿ ಸರ್ಕಾರಕ್ಕೆ ಮಾರಾಟ ಮಾಡಿದ್ದನು. ಈ ಜಮೀನನ್ನು ಸರ್ಕಾರದ ಪರವಾಗಿ ಎಂ.ಆರ್ ಸಂಖ್ಯೆ 18/1960-61 ರ ಅಡಿಯಲ್ಲಿ ಒಟ್ಟು ಕುಟುಂಬದ ಆಸ್ತಿ ಮತ್ತು ಇತರ ಆಸ್ತಿಗಳನ್ನು ವರ್ಗಾಯಿಸಲಾಗಿರುತ್ತದೆ. ಆ ಸಮಯದಲ್ಲಿ ಕರ್ನಾಟಕ ಸರ್ಕಾರವು ಸದರಿ 2 ಎಕರೆ 36 ಗುಂಟೆ ಜಮೀನಿಗೆ ಬದಲಾಗಿ 1964 ರಲ್ಲಿ 43 ನೇ ಪ್ರತಿವಾದಿಯ ಕುಟುಂಬಕ್ಕೆ 4 ಎಕರೆ ಜಮೀನನ್ನು ಮಂಜೂರು ಮಾಡಿರುತ್ತದೆ. ಆದರೆ ಆ ಸಮಯದಲ್ಲಿ 1 ನೇ ಪ್ರತಿವಾದಿಯ ತಂದೆಯು 43 ನೇ ಪ್ರತಿವಾದಿಯ ಒಟ್ಟು ಕುಟುಂಬದ ಕರ್ತನಾಗಿದ್ದನು. ಆದ್ದರಿಂದ, ಸರ್ಕಾರವು 1 ನೇ ಪ್ರತಿವಾದಿಯ ತಂದೆಯ ಹೆಸರಿನಲ್ಲಿ ಜಮೀನನ್ನು ಮಂಜೂರು ಮಾಡಿರುತ್ತದೆ. 43 ನೇ ಪ್ರತಿವಾದಿಯ ತಾತ ಸಿದ್ದಪ್ಪನ ಜೀವಿತಾವಧಿಯಲ್ಲಿ, ಇಂದಿನವರೆಗೂ ವಾದಿಗಳ ಮತ್ತು ಪ್ರತಿವಾದಿಗಳ ಒಟ್ಟು ಕುಟುಂಬದಲ್ಲಿ ಯಾವುದೇ ಪಾಲುವಿಭಾಗವಾಗಿರುವುದಿಲ್ಲ.

ಪ್ರತಿವಾದಿಗಳು ಮತ್ತು ವಾದಿಗಳು 43 ನೇ ಪ್ರತಿವಾದಿಯ ತಾತನ ಮಧ್ಯೆ ಪಾಲುವಿಭಾಗವಾಗಿರುವ ಕೆಲವು ದಾಖಲೆಗಳನ್ನು ಸೃಷ್ಟಿಸಲು ಪ್ರಯತ್ನಿಸಿರುತ್ತಾರೆ. ಮಂಜೂರಾದ ಆಸ್ತಿಯು 43 ನೇ ಪ್ರತಿವಾದಿಯ (ಎದುರು ಕ್ಲೈಮ್ ) ಲಿಖಿತ ಹೇಳಿಕೆಯ 4 ನೇ ತಪಶೀಲಿನ ಆಸ್ತಿಯಾಗಿರುತ್ತದೆ. ನಂತರ 1 ನೇ ಪ್ರತಿವಾದಿಯ ತಂದೆಯು ಮನೆ ಕಟ್ಟುವುದಕ್ಕಾಗಿ 1962 ರಲ್ಲಿ ಕೆಲ್ಲೋಡು ಗ್ರಾಮದ ಸರ್ವೆ ಸಂಖ್ಯೆ 38 ರ ವಿಸ್ತೀರ್ಣ 00.20 ಗುಂಟೆ ಜಮೀನಿನ ಒಟ್ಟು ಕುಟುಂಬದ ಆಸ್ತಿಯನ್ನು ಭೂಪರಿವರ್ತನೆ ಮಾಡಿಸಿರುತ್ತಾನೆ. 1 ನೇ ಪ್ರತಿವಾದಿಯ ತಂದೆಯು ಮೃತಪಟ್ಟ ನಂತರ, 1 ನೇ ಪ್ರತಿವಾದಿಯು ಲಿಖಿತ ಹೇಳಿಕೆಯ ತಪಶೀಲಿನ ಆಸ್ತಿಗಳ ಖಾತಾವನ್ನು ತನ್ನ ಹೆಸರಿಗೆ ವರ್ಗಾಯಿಸಿಕೊಂಡಿರುತ್ತಾನೆ. ಲಿಖಿತ ಹೇಳಿಕೆಯ ತಪಶೀಲಿನ 1 ನೇ ಆಸ್ತಿಯ ಖಾತೆಯು 1 ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ ಮತ್ತು ಲಿಖಿತ ಹೇಳಿಕೆಯ ತಪಶೀಲಿನ 2 ನೇ ಆಸ್ತಿಯ ಖಾತೆಯು 1, 6 ರಿಂದ 9 ನೇ ಪ್ರತಿವಾದಿಗಳು ಹಾಗೂ 1 ನೇ ವಾದಿಯ ಹೆಸರಿನಲ್ಲಿರುತ್ತದೆ ಮತ್ತು ಲಿಖಿತ ಹೇಳಿಕೆಯ ತಪಶೀಲಿನ 3 ನೇ ಆಸ್ತಿಯ ಖಾತೆಯು 6 ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ. ಲಿಖಿತ ಹೇಳಿಕೆಯ ತಪಶೀಲಿನ 4 ನೇ ಆಸ್ತಿಯ ಖಾತೆಯು 3(ಎ)ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ. ಲಿಖಿತ ಹೇಳಿಕೆಯ ತಪಶೀಲಿನ ಎಲ್ಲಾ ಸ್ವತ್ತುಗಳು ವಾದಿಗಳ ಮತ್ತು ಪ್ರತಿವಾದಿಗಳ ತಂದೆಯರಿಗೆ ಅನುವಂಶಿಕವಾಗಿ ಬಂದಂತಹ ಆಸ್ತಿಗಳಾಗಿರುತ್ತವೆ. ವಾದಿಗಳು ಮತ್ತು ಪ್ರತಿವಾದಿಗಳು ಲಿಖಿತ ಹೇಳಿಕೆಯ ತಪಶೀಲಿನ ಸ್ವತ್ತುಗಳ ಶಾಂತಿಯುತ ಸ್ವಾಧೀನಾನುಭವದಲ್ಲಿರುತ್ತಾರೆ. ಈಗ ವಾದಿಗಳು ಮತ್ತು ಪ್ರತಿವಾದಿಗಳು ಜಂಟಿಯಾಗಿ ಸ್ವಾಧೀನದಲ್ಲಿದ್ದು, ಇಂದು ಯಾರ ಅಡೆ-ತಡೆ ಇಲ್ಲದೆ ಲಿಖಿತ ಹೇಳಿಕೆಯ ತಪಶೀಲಿನ ಸ್ವತ್ತುಗಳನ್ನು ಅನುಭವಿಸುತ್ತಿದ್ದಾರೆ. 1 ನೇ ಪ್ರತಿವಾದಿ ಇತರರೊಂದಿಗೆ ಶಾಮೀಲಾಗಿ ವಾದಿಗಳು ಮತ್ತು ಪ್ರತಿವಾದಿಗಳ ಪಿತ್ರಾರ್ಜಿತ ಜಂಟಿ ಕುಟುಂಬದ ಸ್ವತ್ತುಗಳನ್ನು 19 ರಿಂದ 25 ಮತ್ತು 40 ರಿಂದ 44 ನೇ

ಪ್ರತಿವಾದಿಗಳ ಒಪ್ಪಿಗೆ ಇಲ್ಲದೆ, ವಂಚಿಸುವ ಉದ್ದೇಶದಿಂದ ಮಾರಾಟ ಮಾಡಿರುತ್ತಾನೆ. ಅವರು ಒಬ್ಬರಿಗೊಬ್ಬರು ಶಾಮೀಲಾಗಿ 19 ರಿಂದ 25 ಮತ್ತು 40 ರಿಂದ 44 ನೇ ಪ್ರತಿವಾದಿಗಳ ಲಿಖಿತ ಹೇಳಿಕೆಯ ತಪಶೀಲಿನ ಆಸ್ತಿಗಳ ಮಾಲೀಕತ್ವವನ್ನು ನಿರಾಕರಿಸಿದ್ದು ಮಾತ್ರವಲ್ಲದೆ, ಪ್ರತಿವಾದಿಗಳು ಮತ್ತು ವಾದಿಗಳು ಎಲ್ಲರೂ 19 ರಿಂದ 25 ಮತ್ತು 40 ರಿಂದ 44 ನೇ ಪ್ರತಿವಾದಿಗಳ ಸಮ್ಮತಿಯಿಲ್ಲದೆ ಲಿಖಿತ ಹೇಳಿಕೆಯ ತಪಶೀಲಿನ ಸ್ವತ್ತುಗಳ ಖಾತಾವನ್ನು ತಮ್ಮ ಹೆಸರಿಗೆ ಬದಲಾಯಿಸಿಕೊಳ್ಳಲು ಪರಸ್ಪರ ಶಾಮೀಲಾಗಿರುತ್ತಾರೆ. ಈ ವ್ಯವಹಾರವು ಕಾನೂನುಬಾಹಿರವಾಗಿದ್ದು, ಅದು 19 ರಿಂದ 25 ಮತ್ತು 40 ರಿಂದ 44 ನೇ ಪ್ರತಿವಾದಿಗಳಿಗೆ ಬಾಂಧಾಯಿಸುವುದಿಲ್ಲ. 1, 3 ರಿಂದ 9 ನೇ ಪ್ರತಿವಾದಿಗಳು ಮತ್ತು ವಾದಿಗಳಿಗೆ ಲಿಖಿತ ಹೇಳಿಕೆಯ ತಪಶೀಲಿನ ಸ್ವತ್ತುಗಳ ಮೇಲೆ ಯಾವುದೇ ಸ್ವತಂತ್ರ ಮತ್ತು ಸಂಪೂರ್ಣ ಹಕ್ಕಿರುವುದಿಲ್ಲ. ವಾದಿಗಳು ಹಾಗೂ 19 ರಿಂದ 25 ಮತ್ತು 40 ರಿಂದ 44 ನೇ ಪ್ರತಿವಾದಿಗಳ ನಡುವಿನ ಸಂಬಂಧವು ಹದಗೆಟ್ಟಿದ್ದರಿಂದ, ವಾದಿಗಳು ಮತ್ತು ಪ್ರತಿವಾದಿಗಳು ತಮ್ಮ ತಮ್ಮ ಕುಟುಂಬಗಳೊಂದಿಗೆ ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆ, ಆದಾಗ್ಯೂ ವಾದಿಗಳು ಮತ್ತು ಪ್ರತಿವಾದಿಗಳು ಲಿಖಿತ ಹೇಳಿಕೆಯ ತಪಶೀಲಿನ ಸ್ವತ್ತುಗಳನ್ನು ತಮ್ಮ ಜಂಟಿ ಕುಟುಂಬದ ಸ್ವತ್ತುಗಳಾಗಿ ಜಂಟಿಯಾಗಿ ಅನುಭವಿಸುತ್ತಿದ್ದಾರೆ. ಮತ್ತು ಇಂದು ಕೂಡ ಅದೇ ಮುಂದುವರಿಯುತ್ತಿದೆ. ಪ್ರತಿವಾದಿಗಳು ಹದಗೆಟ್ಟ ಸಂಬಂಧದ ಅನಗತ್ಯ ಲಾಭವನ್ನು ಪಡೆದುಕೊಂಡು, ಲಿಖಿತ ಹೇಳಿಕೆಯ ತಪಶೀಲಿನ ಸ್ವತ್ತುಗಳ ಖಾತಾವನ್ನು 1 ನೇ ಪ್ರತಿವಾದಿಯ ಹೆಸರಿಗೆ ಮಾಡಿಕೊಂಡಿರುತ್ತಾರೆ. ಅವರು ಒಬ್ಬರಿಗೊಬ್ಬರು ಶಾಮೀಲಾಗಿದ್ದು, 19 ರಿಂದ 25 ಮತ್ತು 40 ರಿಂದ 44 ನೇ ಪ್ರತಿವಾದಿಗಳ ಲಿಖಿತ ಹೇಳಿಕೆಯ ತಪಶೀಲಿನ ಆಸ್ತಿಗಳ ಮೇಲಿನ ಹಕ್ಕನ್ನು ಕಿತ್ತುಕೊಳ್ಳಲು ಮತ್ತು ವಂಚಿಸಲು ತಮ್ಮ ನಡುವೆಯೇ ಕೆಲವು ದಾಖಲೆಗಳನ್ನು ಸೃಷ್ಟಿಸಲು ಪ್ರಯತ್ನಿಸುತ್ತಿದ್ದಾರೆ. 19 ರಿಂದ 25 ಮತ್ತು 40 ರಿಂದ 44 ನೇ

ಪ್ರತಿವಾದಿಗಳು 1, 3 ರಿಂದ 9 ನೇ ಪ್ರತಿವಾದಿಗಳ ಕಾನೂನುಬಾಹಿರ ಚಟುವಟಿಕೆಗಳನ್ನು ತಿಳಿದುಕೊಂಡು, ಅವರ ತಂದೆಯ ಪಾಲಿನ ಮತ್ತು ಮೃತ ಪರಣ್ಣ ತಂದೆ ಸಿದ್ದಪ್ಪ ನ ಲಿಖಿತ ಹೇಳಿಕೆಯ ತಪಶೀಲಿನ ಆಸ್ತಿಗಳಲ್ಲಿನ ಅವರ ಹಕ್ಕಿನ ಕಾನೂನುಬದ್ಧ ಹಿಸ್ಸೆಯನ್ನು ಪ್ರತ್ಯೇಕಿಸಿ ಕೊಡಬೇಕೆಂದು ವಾದಿಗಳಿಗೆ ಮತ್ತು 1, 3 ರಿಂದ 9 ನೇ ಪ್ರತಿವಾದಿಯರಿಗೆ ಒತ್ತಾಯಿಸಿದ್ದು, ಪ್ರತಿವಾದಿಗಳು ಮತ್ತು 1 ನೇ ವಾದಿ ನಿರಾಕರಿಸಿರುತ್ತಾರೆ. ಗ್ರಾಮದ ಹಿರಿಯರು ನೀಡಿದ ಸಲಹೆಗಳು ವ್ಯರ್ಥವಾಗಿರುತ್ತವೆ. ನವೆಂಬರ್ 2017 ರ ಹಿಂದಿನ ವಾರದಲ್ಲಿ 1 ರಿಂದ 9 ನೇ ಪ್ರತಿವಾದಿಗಳು ಮತ್ತು ವಾದಿಗಳು ಲಿಖಿತ ಹೇಳಿಕೆಯ ತಪಶೀಲಿನ ಆಸ್ತಿಗಳನ್ನು ವಿಭಜಿಸಲು ನಿರಾಕರಿಸಿದ್ದು ಮತ್ತು 19 ರಿಂದ 25 ಮತ್ತು 40 ರಿಂದ 44 ನೇ ಪ್ರತಿವಾದಿಗಳ ಲಿಖಿತ ಹೇಳಿಕೆಯ ತಪಶೀಲಿನ ಆಸ್ತಿಗಳಲ್ಲಿನ ಅವರ ಹಕ್ಕಿನ ಕಾನೂನುಬದ್ಧ ಹಿಸ್ಸೆಯನ್ನು ನೀಡದೆ ವಂಚಿಸಿದ್ದು, 19 ರಿಂದ 25 ಮತ್ತು 40 ರಿಂದ 44 ನೇ ಪ್ರತಿವಾದಿಗಳ ಬೇಡಿಕೆಯನ್ನು ನಿರಾಕರಿಸಿದಾಗ, ದಾವಾ ಕಾರಣ ಉಂಟಾಗಿರುತ್ತದೆಂದು ಹಾಗೂ ವಾದಪತ್ರದಲ್ಲಿ ಆರೋಪಿಸಿರುವ ಉಳಿದ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದು ಅಲ್ಲಗಳೆಯುತ್ತಾ, ಲಿಖಿತ ಹೇಳಿಕೆಯ ತಪಶೀಲಿನ ಆಸ್ತಿಗಳನ್ನು ವಾದಿಗಳ ಮತ್ತು ಪ್ರತಿವಾದಿಗಳ ಪಿತ್ರಾರ್ಜಿತ ಜಂಟಿ ಕುಟುಂಬದ ಆಸ್ತಿಗಳೆಂದು ಘೋಷಿಸಿ, ಸದರಿ ಆಸ್ತಿಗಳಲ್ಲಿ 19 ರಿಂದ 25 ಮತ್ತು 40 ರಿಂದ 44 ನೇ ಪ್ರತಿವಾದಿಗಳ ಕಾನೂನುಬದ್ಧ ಹಿಸ್ಸೆಯನ್ನು ಪ್ರತ್ಯೇಕಿಸಿ ಕೊಡಬೇಕೆಂದು ಹಾಗೂ ಮಧ್ಯಕಾಲಿನ ಲಾಭವನ್ನು ಕೊಡಿಸಬೇಕೆಂದು 43 ನೇ ಪ್ರತಿವಾದಿ ಪ್ರಾರ್ಥಿಸಿಕೊಂಡಿರುತ್ತಾನೆ.

**11**. ವಾದ ಪತ್ರ, ಲಿಖಿತ ಹೇಳಿಕೆಗಳು ಹಾಗೂ ದಾಖಲೆಗಳನ್ನು ಅವಲೋಕಿಸಿ, ಈ ನ್ಯಾಯಾಲಯವು ಈ ಕೆಳಕಂಡಂತೆ ವಿವಾದಾಂಶಗಳನ್ನು ಹಾಗು ಹೆಚ್ಚುವರಿ ವಿವಾದಾಂಶಗಳನ್ನು ರಚಿಸಿರುತ್ತದೆ.

1. Whether plaintiffs prove that suit schedule properties are joint family properties of themselves and defendant No.1 to 9?
2. Whether defendant No.1, 6 to 9 prove that there was already partition among sons of propositor Rudrappa in 1962 and other related facts as averred in para No.13 of the written statement?
3. Whether plaintiffs are entitled for declaration, partition and separate possession in respect of suit schedule properties and other reliefs as prayed for?
4. What order or decree?

**Additional Issue dated on 02-08-2021**

1. Whether defendant No.1, 6 to 9 proves that, there was a partition in the properties, as alleged in their additional written statement?

**Additional Issues dated on 15-07-2023**

1. Whether plaintiff proves that they are entitled for mesne profits as sought?
2. Whether defendant No.11 to 14 proves that written statement schedule properties are joint family and ancestral properties of plaintiff and defendants?
3. Whether defendant No.11 to 14 proves that they are entitled for share in written statement schedule properties?
4. Whether defendant No.11 to 14 proves that they are entitled for mesne profits as

sought?

5. Whether defendant No.11 to 14 are entitled for the reliefs as sought?

**Additional Issues dated on 18-03-2026**

1. Whether the defendant No.19 to 25 and 40 to 44 prove that, the written statement schedule properties are ancestral and joint family properties of the plaintiffs and defendants, as pleaded in the written statement?
2. Whether the defendant No.19 to 25 and 40 to 44 are entitled to the reliefs of partition and separate possession, as payed for?

**12.** ವಾದ ಪತ್ರದಲ್ಲಿ ಆರೋಪಿಸಿರುವಂತಹ ಅಂಶಗಳನ್ನು ಸಾಭೀತುಪಡಿಸಲು 2 ನೇ ವಾದಿ ತಾನು ಪಿ.ಡಬ್ಲೂ-1 ಎಂದು ವಿಚಾರಣೆಗೆ ಒಳಪಟ್ಟು, ಒಬ್ಬ ಸಾಕ್ಷಿದಾರನನ್ನು ಪಿ.ಡಬ್ಲೂ-2 ಎಂದು ವಿಚಾರಣೆಗೆ ಒಳಪಡಿಸಿಕೊಂಡು, 72 ದಾಖಲೆಗಳನ್ನು ನಿಪಿ.1 ರಿಂದ 72 ಎಂದು ಗುರುತಿಸಿಕೊಂಡು, ತಮ್ಮ ಪರ ಸಾಕ್ಷಿ ವಿಚಾರಣೆಯನ್ನು ಮುಕ್ತಾಯಗೊಳಿಸಿಕೊಂಡಿರುತ್ತಾರೆ.

**13.** ಲಿಖಿತ ಹೇಳಿಕೆಗಳಲ್ಲಿ ಹಾಗು ಹೆಚ್ಚುವರಿ ಲಿಖಿತ ಹೇಳಿಕೆಗಳಲ್ಲಿ ಆರೋಪಿಸಿರುವ ಅಂಶಗಳನ್ನು ಸಾಭೀತುಪಡಿಸಲು, 1 ಮತ್ತು 8 ನೇ ಪ್ರತಿವಾದಿಗಳು ತಾವು ಡಿ.ಡಬ್ಲೂ-1 ಮತ್ತು 2 ಎಂದು ವಿಚಾರಣೆಗೆ ಒಳಪಟ್ಟು, 3 ಜನ ಸಾಕ್ಷಿದಾರರನ್ನು ಡಿ.ಡಬ್ಲೂ-3 ರಿಂದ 5 ಹಾಗೂ 3(ಎ), 3(ಬಿ) ಮತ್ತು 4(ಇ)ನೇ ಪ್ರತಿವಾದಿಗಳನ್ನು ತಮ್ಮ ಪರ ಡಿ.ಡಬ್ಲೂ-7 ರಿಂದ 9 ಎಂದು ವಿಚಾರಣೆಗೆ ಒಳಪಡಿಸಿಕೊಂಡಿರುತ್ತಾರೆ. 2 ನೇ ಪ್ರತಿವಾದಿ ತಾನು ಡಿ.ಡಬ್ಲೂ-6 ಎಂದು ವಿಚಾರಣೆಗೆ ಒಳಪಟ್ಟಿರುತ್ತಾನೆ. 43 ನೇ

ಪ್ರತಿವಾದಿ ತಾನು ಡಿ.ಡಬ್ಲೂ-10 ಎಂದು ವಿಚಾರಣೆಗೆ ಒಳಪಟ್ಟಿದ್ದು, ಆದರೆ ಪಾಟಿಸವಾಲಿಗೆ ಹಾಜರಾಗದ ಕಾರಣ, ಡಿ.ಡಬ್ಲೂ-10 ರವರ ಸಾಕ್ಷಿಯನ್ನು ಕೈಬಿಟ್ಟಿರುತ್ತದೆ. 44 ನೇ ಪ್ರತಿವಾದಿಯಿಂದ ಮುಕ್ತಿಯಾರನಾಮೆ ಪಡೆದ ಗುರುಪ್ರಸಾದ್ ಡಿ.ಡಬ್ಲೂ-11 ಎಂದು ವಿಚಾರಣೆಗೆ ಒಳಪಟ್ಟಿದ್ದು ಹಾಗೂ 41 ನೇ ಪ್ರತಿವಾದಿ ತಾನು ಡಿ.ಡಬ್ಲೂ-12 ಎಂದು ವಿಚಾರಣೆಗೆ ಒಳಪಟ್ಟಿರುತ್ತಾನೆ. ಪ್ರತಿವಾದಿಗಳು 25 ದಾಖಲೆಗಳನ್ನು ನಿಡಿ-1 ರಿಂದ 25 ಎಂದು ಗುರುತಿಸಿಕೊಂಡು ತಮ್ಮ ಪರ ಸಾಕ್ಷಿವಿಚಾರಣೆಯನ್ನು ಮುಕ್ತಾಯಗೊಳಿಸಿಕೊಂಡಿರುತ್ತಾರೆ.

**14.** ವಾದಿಯರ ಮತ್ತು ಪ್ರತಿವಾದಿಯರ ಪರ ವಕೀಲರ ವಾದವನ್ನು ಆಲಿಸಲಾಯಿತು.

**15.** ವಾದಪತ್ರ, ಲಿಖಿತ-ಹೇಳಿಕೆಗಳು, ಹೆಚ್ಚುವರಿ ಲಿಖಿತ ಹೇಳಿಕೆಗಳು ಮತ್ತು ಉಭಯ ಪಕ್ಷಗಾರರ ಪರ ಇರುವಂತಹ ಮೌಖಿಕ ಹಾಗೂ ದಾಖಲಾತಿ ಸಾಕ್ಷಿ ಹಾಗೂ ಈ ಕೇಸಿನ ವಸ್ತು-ಸ್ಥಿತಿ ಮತ್ತು ಸಂದರ್ಭಗಳನ್ನ ಅವಲೋಕಿಸಿ, ಮೇಲಿನ ವಿವಾದಾಂಶಗಳಿಗೆ ಹಾಗೂ ಹೆಚ್ಚುವರಿ ವಿವಾದಾಂಶಗಳಿಗೆ ಈ ಕೆಳಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಉತ್ತರಿಸುತ್ತಿದ್ದೇನೆಃ-

| | |
|---|---|
| ವಿವಾದಾಂಶ -1 - | ನಕಾರಾತ್ಮಕ |
| ವಿವಾದಾಂಶ -2 - | ಸಕಾರಾತ್ಮಕ |
| ವಿವಾದಾಂಶ -3 - | ನಕಾರಾತ್ಮಕ |
| ವಿವಾದಾಂಶ -4 - | ಅಂತಿಮ ಆದೇಶದಂತೆ |
| ದಿಃ 02**-08-2021** ರ ಹೆ.ವಿವಾದಾಂಶ -1 - | ಸಕಾರಾತ್ಮಕ |

ದಿಃ 15-07-2023 ರ ನಕಾರಾತ್ಮಕ
ಹೆ.ವಿವಾದಾಂಶ -1 -

ಹೆ.ವಿವಾದಾಂಶ -2 - ನಕಾರಾತ್ಮಕ

ಹೆ.ವಿವಾದಾಂಶ -3 - ನಕಾರಾತ್ಮಕ

ಹೆ.ವಿವಾದಾಂಶ -4 - ನಕಾರಾತ್ಮಕ

ಹೆ.ವಿವಾದಾಂಶ -5 - ನಕಾರಾತ್ಮಕ

ದಿಃ 18-03-2026 ರ ನಕಾರಾತ್ಮಕ
ಹೆ.ವಿವಾದಾಂಶ -1 -

ಹೆ.ವಿವಾದಾಂಶ -2 - ನಕಾರಾತ್ಮಕ

## **ಕಾರಣಗಳು**

**16. ವಿವಾದಾಂಶ-1, 2 ದಿನಾಂಕಃ02-08-2021 ರ ಹೆಚ್ಚುವರಿ ವಿವಾದಾಂಶ-1, ದಿನಾಂಕಃ 15-07-2023 ರ ಹೆಚ್ಚುವರಿ ವಿವಾದಾಂಶ-2 ಮತ್ತು ದಿನಾಂಕಃ 18-03-2026 ರ ಹೆಚ್ಚುವರಿ ವಿವಾದಾಂಶ-1**: ಈ ಐದು ವಿವಾದಾಂಶಗಳು ಮೇಲ್ನೋಟಕ್ಕೆ ಬೇರೆ ಬೇರೆಯಾಗಿ ಕಂಡು ಬಂದರೂ ಸಹ, ಆಂತರಿಕವಾಗಿ ಒಂದೊಕ್ಕೊಂದು ಸಂಬಂಧ ಹೊಂದಿರುವುದರಿಂದ, ವಿಷಯಗಳ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಒಟ್ಟಿಗೆ ಪರಿಗಣಿಸಲಾಗಿದೆ.

ವಾದಿಗಳ ಮತ್ತು 1 ರಿಂದ 9 ಹಾಗೂ 11 ರಿಂದ 53 ನೇ ಪ್ರತಿವಾದಿಗಳ ಕುಟುಂಬದ ಮೂಲ ಪುರುಷ ರುದ್ರಪ್ಪ, ಸದರಿ ರುದ್ರಪ್ಪ ಮೃತಪಟ್ಟಿರುತ್ತಾನೆ ಎನ್ನುವುದು ನಿರ್ವಿವಾದವಾದ ಸಂಗತಿ. ಅದೇ ರೀತಿ ಸದರಿ ಮೂಲ ಪುರುಷ ರುದ್ರಪ್ಪನಿಗೆ ಸಿದ್ದಪ್ಪ, ಪರಣ್ಣ ಮತ್ತು ಮಲ್ಲಪ್ಪ ಎಂಬ ಮೂರು ಜನ ಗಂಡುಮಕ್ಕಳು ಇದ್ದು, ಅವರು ಸಹ ಮೃತಪಟ್ಟಿರುತ್ತಾರೆ ಎನ್ನುವುದು ನಿರ್ವಿವಾದವಾದ ಸಂಗತಿ.

**17.** ವಾದಿಗಳು ತಮ್ಮ ವಾದಪತ್ರದಲ್ಲಿ ಆರೋಪಿಸಿದಂತೆ, ದಾವಾ ಆಸ್ತಿಗಳು ತಮ್ಮ ಮತ್ತು 1 ರಿಂದ 9 ನೇ ಪ್ರತಿವಾದಿಗಳ ಪಿತ್ರಾರ್ಜಿತ ಜಂಟಿ ಕುಟುಂಬದ ಆಸ್ತಿಗಳು ಎನ್ನುವುದನ್ನು ಸಾಭೀತುಪಡಿಸಲು 2 ನೇ ವಾದಿ ತಾನು ಪಿ.ಡಬ್ಲೂ-1 ಎಂದು ವಿಚಾರಣೆಗೆ ಒಳಪಟ್ಟು, ತನ್ನ ಮುಖ್ಯ ವಿಚಾರಣೆಯಲ್ಲಿ ವಾದಪತ್ರದ ಅಂಶಗಳಿಗೆ ಪೂರಕವಾಗಿ ಸಾಕ್ಷಿ ನುಡಿದಿರುತ್ತಾನೆ. ಅಲ್ಲದೆ, ವಾದಿಯರ ಪರ ಸಾಕ್ಷಿ ನುಡಿದ ಪಿ.ಡಬ್ಲೂ-2 ತನ್ನ ಮುಖ್ಯ ವಿಚಾರಣೆಯ ಸಾಕ್ಷಿಯಲ್ಲಿ, ವಾದಿಯರ ಕೇಸಿಗೆ ಪೂರಕವಾಗಿ ಸಾಕ್ಷಿ ನುಡಿದಿರುತ್ತಾನೆ.

**18**. 1, 6 ರಿಂದ 9 ನೇ ಪ್ರತಿವಾದಿಗಳು ತಮ್ಮ ಲಿಖಿತ ಹೇಳಿಕೆ ಮತ್ತು ಹೆಚ್ಚುವರಿ ಲಿಖಿತ ಹೇಳಿಕೆಗಳಲ್ಲಿ ಆರೋಪಿಸಿದಂತೆ, ದಾವಾ ತಪಶೀಲಿನ 1 ನೇ ಆಸ್ತಿಯನ್ನು 1 ನೇ ವಾದಿ 6 ನೇ ಪ್ರತಿವಾದಿಯ ಮೃತ ಗಂಡ ಗಂಗಾಧರಪ್ಪ, 7 ರಿಂದ 9 ನೇ ಪ್ರತಿವಾದಿಗಳ ತಂದೆ ಪರಣ್ಣ ಹಾಗೂ 1 ನೇ ಪ್ರತಿವಾದಿಯ ತಂದೆ ಮಲ್ಲಪ್ಪ ಮತ್ತು ಇತರೆ ಪ್ರತಿವಾದಿಯರು ಹಿರಿಯರು 1962 ನೇ ಇಸವಿಯಲ್ಲಿ ಹಾಗೂ ದಾವಾ ತಪಶೀಲಿನ 2 ನೇ ಆಸ್ತಿಯನ್ನು 1930 ನೇ ಇಸವಿಯಲ್ಲಿ ರುದ್ರಪ್ಪನ ಮಕ್ಕಳಾದ ಸಿದ್ದಪ್ಪ, ಪರಣ್ಣ ಹಾಗೂ ಮಲ್ಲಪ್ಪ ಇವರು ಲಿಖಿತ ಪತ್ರದ ಮೂಲಕ ಭಾಗ ಮಾಡಿಕೊಂಡಿದ್ದು, ಅದೇ ರೀತಿ ದಾವಾ ತಪಶೀಲಿನ 3 ನೇ ಆಸ್ತಿಯನ್ನು 1 ನೇ ವಾದಿ, 6 ನೇ ಪ್ರತಿವಾದಿಯ ಗಂಡ ಮೃತ ಗಂಗಾಧರಪ್ಪ, 7 ರಿಂದ 9 ನೇ ಪ್ರತಿವಾದಿಗಳು 1974 ರಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ ಎನ್ನುವುದನ್ನು ಸಾಭೀತುಪಡಿಸಲು 1 ಮತ್ತು 8 ನೇ ಪ್ರತಿವಾದಿಗಳು ತಾವು ಡಿಡಬ್ಲೂ-1 ಮತ್ತು 2 ಎಂದು ವಿಚಾರಣೆಗೆ ಒಳಪಟ್ಟು, ತಮ್ಮ ಮುಖ್ಯ ವಿಚಾರಣೆಯ ಸಾಕ್ಷಿಯಲ್ಲಿ ಲಿಖಿತ ಹೇಳಿಕೆ ಮತ್ತು ಹೆಚ್ಚುವರಿ ಲಿಖಿತ ಹೇಳಿಕೆಗಳಿಗೆ ಪೂರಕವಾಗಿ ಸಾಕ್ಷಿ ನುಡಿದಿರುತ್ತಾರೆ. ಅಲ್ಲದೆ, 1, 6 ರಿಂದ 9 ನೇ ಪ್ರತಿವಾದಿಗಳ ಪರ ಸಾಕ್ಷಿ ನುಡಿದ ಡಿ.ಡಬ್ಲೂ-3 ರಿಂದ 5, 7 ರಿಂದ 9 ರವರು ತಮ್ಮ

ಮುಖ್ಯ ವಿಚಾರಣೆಯ ಸಾಕ್ಷಿಯಲ್ಲಿ, 1, 6 ರಿಂದ 9 ನೇ ಪ್ರತಿವಾದಿಗಳ ಕೇಸಿಗೆ ಪೂರಕವಾಗಿ ಸಾಕ್ಷಿ ನುಡಿದಿರುತ್ತಾರೆ.

**19**. 11 ನೇ ಪ್ರತಿವಾದಿಯ ಲಿಖಿತ ಹೇಳಿಕೆ ಮತ್ತು ಎದುರುಕ್ಲೇಮಿನಲ್ಲಿ ಆರೋಪಿಸಿದಂತೆ, ಲಿಖಿತ ಹೇಳಿಕೆ ತಪಶೀಲಿನ ಆಸ್ತಿಗಳು ವಾದಿಗಳ ಮತ್ತು ಪ್ರತಿವಾದಿಗಳ ಪಿತ್ರಾರ್ಜಿತ ಜಂಟಿ ಕುಟುಂಬದ ಆಸ್ತಿಗಳಾಗಿದ್ದು, ಅದರಂತೆ ಜಂಟಿ ಸ್ವಾಧೀನಾನುಭವದಲ್ಲಿ ಇರುತ್ತವೆ ಎನ್ನುವುದನ್ನು ಸಾಭೀತುಪಡಿಸಲು 2 ನೇ ಪ್ರತಿವಾದಿ ತಾನು ಡಿ.ಡಬ್ಲೂ-6 ಎಂದು ವಿಚಾರಣೆಗೆ ಒಳಪಟ್ಟು, ತನ್ನ ಮುಖ್ಯ ವಿಚಾರಣೆಯಲ್ಲಿ 11 ನೇ ಪ್ರತಿವಾದಿಯ ಲಿಖಿತ ಹೇಳಿಕೆ ಮತ್ತು ಎದುರುಕ್ಲೇಮಿಗೆ ಪೂರಕವಾಗಿ ಸಾಕ್ಷಿ ನುಡಿದಿರುತ್ತಾನೆ.

**20**. 43 ನೇ ಪ್ರತಿವಾದಿಯ ಲಿಖಿತ ಹೇಳಿಕೆ ಮತ್ತು ಎದುರುಕ್ಲೇಮಿನಲ್ಲಿ ಆರೋಪಿಸಿದಂತೆ, ಎದುರುಕ್ಲೇಮಿನ ತಪಶೀಲಿನ ಆಸ್ತಿಗಳು ವಾದಿಗಳ ಮತ್ತು ಪ್ರತಿವಾದಿಗಳ ಪಿತ್ರಾರ್ಜಿತ ಜಂಟಿ ಕುಟುಂಬದ ಆಸ್ತಿಗಳಾಗಿದ್ದು, ಅದರಂತೆ ಜಂಟಿ ಸ್ವಾಧೀನಾನುಭವದಲ್ಲಿ ಇರುತ್ತವೆ ಎನ್ನುವುದನ್ನು ಸಾಭೀತುಪಡಿಸಲು 44 ನೇ ಪ್ರತಿವಾದಿಯಿಂದ ಮುಕ್ತಿಯಾರನಾಮೆ ಪಡೆದ ಡಿ.ಡಬ್ಲೂ-11 ಹಾಗೂ 41 ನೇ ಪ್ರತಿವಾದಿಯಾದ ಡಿ.ಡಬ್ಲೂ-12 ಎಂದು ವಿಚಾರಣೆಗೆ ಒಳಪಟ್ಟು, ತಮ್ಮ ಮುಖ್ಯ ವಿಚಾರಣೆಯ ಸಾಕ್ಷಿಯಲ್ಲಿ 43 ನೇ ಪ್ರತಿವಾದಿಯ ಲಿಖಿತ ಹೇಳಿಕೆ ಮತ್ತು ಎದುರುಕ್ಲೇಮಿಗೆ ಪೂರಕವಾಗಿ ಸಾಕ್ಷಿ ನುಡಿದಿರುತ್ತಾರೆ.

**21**. ವಾದಿಗಳ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ, 1 ನೇ ವಾದಿ ಶಿವರುದ್ರಪ್ಪನು ಮೃತ ಪಟ್ಟಿರುತ್ತಾನೆ. 2 ನೇ ವಾದಿ ಮೃತ ಶಿವರುದ್ರಪ್ಪನ ಮಗನಿರುತ್ತಾನೆ. 1[ಎ] ರಿಂದ 1[ಡಿ] ನೇ ಪ್ರತಿವಾದಿಗಳು ಮೃತ ಶಿವರುದ್ರಪ್ಪನ

ವಾರಸುದಾರರಿರುತ್ತಾರೆ. ವಾದಿಯರು ಮತ್ತು ಪ್ರತಿವಾದಿಯರು ಹಿಂದೂ ಅವಿಭಕ್ತ ಕುಟುಂಬದ ಸದಸ್ಯರಿದ್ದು ಮತ್ತು ದಾವ ಸ್ವತ್ತುಗಳು ವಾದಿಯರ ಮತ್ತು ಪ್ರತಿವಾದಿಯರ ಪಿತ್ರಾರ್ಜಿತವಾದ ಮತ್ತು ಒಟ್ಟು ಕುಟುಂಬದ ಸ್ವತ್ತುಗಳಾಗಿರುತ್ತವೆ. ವಾದಿಯರ ಮತ್ತು ಪ್ರತಿವಾದಿಯರ ಕುಟುಂಬದ ಮೂಲ ಪುರುಷ ರುದ್ರಪ್ಪ ತಂದೆ ಮಲ್ಲಪ್ಪ, ಸದರಿ ರುದ್ರಪ್ಪ ತಂದೆ ಮಲ್ಲಪ್ಪನಿಗೆ 3 ಜನ ಗಂಡು ಮಕ್ಕಳು ಮೊದಲನೆ ಮಗ ಸಿದ್ದಪ್ಪ, 2 ನೇ ಮಗ ಪರಣ್ಣ, 3 ನೇ ಮಗ ಮಲ್ಲಪ್ಪ. ರುದ್ರಪ್ಪನ ಮೊದಲನೆ ಮಗ ಸಿದ್ದಪ್ಪ ಪೌತಿಯಾಗಿದ್ದು ಅವನಿಗೆ 6 ಜನ ಮಕ್ಕಳು. 1. ಪಾರ್ವತಮ್ಮ, 2. ಚನ್ನಮ್ಮ 3. ಪರಣ್ಣ, 4. ಶಿವಣ್ಣ, 5 ನೇ ಮರಳುಸಿದ್ದಪ್ಪ ಮತ್ತು 6 ನೇ ಮಗ ಚಂದ್ರಪ್ಪನಿರುತ್ತಾನೆ. ಸಿದ್ದಪ್ಪನ ಮೊದಲನೆ ಮಗಳಾದ ಪಾರ್ವತಮ್ಮಳು ಪೌತಿಯಾಗಿದ್ದು ಅವಳಿಗೆ 8 ಜನ ಮಕ್ಕಳಿರುತ್ತಾರೆ. 1.ರಾಜಣ್ಣ 2.ಜಾಲಮ್ಮ 3.ಗೌರಮ್ಮ 4,ಮಲ್ಲಿಕಾರ್ಜುನಪ್ಪ 5. ಪ್ರಭಾವತಿ, 6.ಭಾಗ್ಯಮ್ಮ 7.ಧನಂಜಯ ಮತ್ತು 8 ಮಂಜುಳ ಇರುತ್ತಾಳೆ. ಸಿದ್ದಪ್ಪನ ಮೊದಲನೆ ಮಗಳಾದ ಪಾರ್ವತಮ್ಮನ ಮೊದಲನೆ ಮಗ ರಾಜಣ್ಣನು ಪೌತಿಯಾಗಿದ್ದು ಅವನ ಹೆಂಡತಿ ಹೇಮಲತಾ, ಮಕ್ಕಳಾದ ಕುಮಾರಸ್ವಾಮಿ ಹಾಗೂ ಕುಸುಮ ಇವರುಗಳನ್ನು ಬಿಟ್ಟು ಮೃತಪಟ್ಟಿರುತ್ತಾನೆ. 7 ನೇ ಮಗ ಧನಂಜಯನು ತನ್ನ ಹೆಂಡತಿ ಪ್ರೇಮ ಹಾಗೂ ಮಕ್ಕಳಾದ ಅಜಯ ಹಾಗೂ ಹರ್ಷ ಇವರುಗಳನ್ನು ಬಿಟ್ಟು ಮೃತಪಟ್ಟಿರುತ್ತಾನೆ. ಸಿದ್ದಪ್ಪನ 2 ನೇ ಮಗಳಾದ ಚೆನ್ನಮ್ಮಳು ತನ್ನ ಮಕ್ಕಳಾದ ಪಾರ್ವತಮ್ಮ ಮತ್ತು ಮಂಜುನಾಥ ಇವರನ್ನು ಬಿಟ್ಟು ಮೃತಪಟ್ಟಿರುತ್ತಾಳೆ. ಅವಳ ಮಗಳಾದ ಪಾರ್ವತಮ್ಮಳು ತನ್ನ ಮಕ್ಕಳಾದ ಉಮಾದೇವಿ, ಮರುಳುಸಿದ್ದಪ್ಪ, ಉಮೇಶ ಹಾಗೂ ಮಮತ ಇವರುಗಳನ್ನು ಬಿಟ್ಟು ಮೃತಪಟ್ಟಿರುತ್ತಾಳೆ. ಚೆನ್ನಮ್ಮಳ ಮಗ ಮಂಜುನಾಥನು ತನ್ನ ಹೆಂಡತಿ ಇಂದ್ರಮ್ಮ ಮತ್ತು ಮಕ್ಕಳಾದ ಆಶಾರಾಣಿ ಮತ್ತು ವಿಶ್ವನಾಥ ಇವರುಗಳನ್ನು ಬಿಟ್ಟು ಪೌತಿಯಾಗಿರುತ್ತಾನೆ. ಸಿದ್ದಪ್ಪನ 3 ನೇ ಮಗ

ಪರಣ್ಣನು ತನ್ನ ಹೆಂಡತಿ ಶಿವರುದ್ರಮ್ಮ ಹಾಗೂ ಮಕ್ಕಳಾದ 1.ಪಾರ್ವತಮ್ಮ, 2.ರಾಜೇಶ್ವರಿ, 3. ಉಮಾದೇವಿ, 4.ಜ್ಯೋತಿಲಕ್ಷ್ಮೀ ಹಾಗೂ 5.ಮುರುಗೇಶ್ ಇವರುಗಳನ್ನು ಬಿಟ್ಟು ಪೌತಿಯಾಗಿರುತ್ತಾನೆ. ಸಿದ್ದಪ್ಪನ 4 ನೇ ಮಗ ಶಿವಣ್ಣ ಹಾಗೂ ಅವನ ಹೆಂಡತಿ ಶಾಂತಮ್ಮಳು ತಮ್ಮ ಮಕ್ಕಳಾದ 1.ಮರಳುಸಿದ್ದಮ್ಮ, 2.ಗಿರಿಜಮ್ಮ, 3.ಶೀಲಾ, 4.ಮುರುಗೇಶ್, 5.ಶಿವಪ್ರಕಾಶ್ ಇವರುಗಳನ್ನು ಬಿಟ್ಟು ಪೌತಿಯಾಗಿರುತ್ತಾರೆ. ಸಿದ್ದಪ್ಪನ 5 ನೇ ಮಗ ಮರಳುಸಿದ್ದಪ್ಪ ಹಾಗೂ ಅವನ ಮೊದಲನೇ ಹೆಂಡತಿಯಾದ ಗೌರಮ್ಮ ತಮ್ಮ ಮಗನಾದ ತಿಪ್ಪೇಸ್ವಾಮಿಯನ್ನು ಬಿಟ್ಟು ಮೃತಪಟ್ಟಿರುತ್ತಾರೆ. ಸದರಿ ಮರಳುಸಿದ್ದಪ್ಪನ 2 ನೇ ಹೆಂಡತಿ ಶಾರದಮ್ಮಳು ತನ್ನ ಮಕ್ಕಳಾದ ಶಿವಕುಮಾರ, ಬಸವರಾಜ, ಗೌರಮ್ಮ, ವೀರೇಶ್ ಇವರನ್ನು ಬಿಟ್ಟು ಮೃತಪಟ್ಟಿರುತ್ತಾಳೆ. ಸಿದ್ದಪ್ಪನ 6 ನೇ ಮಗ ಚಂದ್ರಪ್ಪ ಹಾಗೂ ಅವನ ಹೆಂಡತಿ ಪಾರ್ವತಮ್ಮ ಅವರು ತಮ್ಮ ಮಕ್ಕಳಾದ ಉಮಾದೇವಿ, ಮರಳುಸಿದ್ದಪ್ಪ, ಉಮೇಶ್, ಮತ್ತು ಮಮತ ಇವರುಗಳನ್ನು ಬಿಟ್ಟು ಮೃತಪಟ್ಟಿರುತ್ತಾರೆ. ಮೂಲ ಪುರುಷ ರುದ್ರಪ್ಪನ 2 ನೇ ಮಗ ಪರಣ್ಣ ತನ್ನ ಮಕ್ಕಳಾದ 1.ಪಾರ್ವತಮ್ಮ 2.ಗಂಗಮ್ಮ 3.ಗಂಗಾಧರಪ್ಪ, 4.ಶಿವರುದ್ರಪ್ಪ, 5.ಶೇಖರಪ್ಪ, 6.ಮಹೇಶ್ವರಪ್ಪ, ಮತ್ತು 7.ಪ್ರಕಾಶ್ ಇವರುಗಳನ್ನು ಬಿಟ್ಟು ಮೃತಪಟ್ಟಿರುತ್ತಾನೆ. ಸದರಿ ಪರಪ್ಪನ ಮೊದಲನೆ ಮಗಳಾದ ಪಾರ್ವತಮ್ಮಳು ತನ್ನ ಮಕ್ಕಳಾದ 1.ರಮೇಶ್, 2.ಕುಮಾರಿ 3.ಸತೀಶ, ಮತ್ತು 4.ಗೀರಿಶ್ ಇವರುಗಳನ್ನು ಬಿಟ್ಟು ಮೃತಪಟ್ಟಿರುತ್ತಾಳೆ. ಸದರಿ ಪರಣ್ಣನ 2 ನೇ ಮಗಳಾದ ಗಂಗಮ್ಮಳು ತನ್ನ ಮಕ್ಕಳಾದ ಪ್ರಕಾಶ, ಶಾಂತಕುಮಾರ, ಕಾಂತರಾಜು, ಲಲಿತಮ್ಮ ಹಾಗೂ ಜಗದೀಶ ಇವರುಗಳನ್ನು ಬಿಟ್ಟು ಪೌತಿಯಾಗಿರುತ್ತಾಳೆ. ಸದರಿ ಗಂಗಮ್ಮಳ ಮೊದಲನೆ ಮಗ ಪ್ರಕಾಶ್ ಹಾಗೂ ಅವನ ಹೆಂಡತಿ ಪರಮೇಶ್ವರಿ ಮಗಳು ಸುಮ ಇವಳನ್ನು ಬಿಟ್ಟು ಪೌತಿಯಾಗಿರುತ್ತಾರೆ. ಗಂಗಮ್ಮಳ 3 ನೇ ಮಗ ಕಾಂತರಾಜು

ತನ್ನ ಹೆಂಡತಿ ರೂಪಾ [ಪುಷ್ಪಲತಾ] ಮತ್ತು ಮಕ್ಕಳಾದ ಭವ್ಯ ಮತ್ತು ಪುನೀತ್ ಇವರುಗಳನ್ನು ಬಿಟ್ಟು ಪೌತಿಯಾಗಿರುತ್ತಾನೆ. ಗಂಗಮ್ಮಳ 4 ನೇ ಮಗಳಾದ ಲಲಿತಮ್ಮ ತನ್ನ ಗಂಡ ಪ್ರಕಾಶ [9 ನೇ ಪ್ರತಿವಾದಿ] ಮತ್ತು ಮಕ್ಕಳಾದ ಮೋಹನ್ ಕುಮಾರ್ ಮತ್ತು ಪವನ್ ಕುಮಾರ್ ಇವರುಗಳನ್ನು ಬಿಟ್ಟು ಪೌತಿಯಾಗಿರುತ್ತಾಳೆ. ಸದರಿ ಪರಪ್ಪನ 3 ನೇ ಮಗನಾದ ಗಂಗಾಧರಪ್ಪನು ತನ್ನ ಹೆಂಡತಿ ಸುವರ್ಣಮ್ಮ ಮತ್ತು ಅವರ ಮಕ್ಕಳಾದ ರಾಜಪ್ಪ, ಪ್ರಸನ್ನಕುಮಾರ, ಭಾರತಿ ಮತ್ತು ಮಂಜುನಾಥ ಇವರುಗಳನ್ನು ಬಿಟ್ಟು ಮೃತಪಟ್ಟಿರುತ್ತಾನೆ. ಪರಣ್ಣನ 4 ನೇ ಮಗನಾದ ಶಿವರುದ್ರಪ್ಪನು ದಾವೆಯಲ್ಲಿ 1 ನೇ ವಾದಿಯಾಗಿದ್ದು, ತನ್ನ ಹೆಂಡತಿ ಸುಶೀಲಮ್ಮ, ಮಂಜುನಾಥ (2 ನೇ ವಾದಿ) ಹಾಗೂ ಸುವರ್ಣಮ್ಮ ಹಾಗೂ ಕಲಾವತಿ ಇವರುಗಳನ್ನು ಬಿಟ್ಟು ಮೃತಪಟ್ಟಿರುತ್ತಾನೆ. ಮೂಲ ಪುರುಷ ರುದ್ರಪ್ಪನ 3 ನೇ ಮಗ ಮಲ್ಲಪ್ಪನು ತನ್ನ ಮಕ್ಕಳಾದ ಸಿದ್ದಮ್ಮ, ಈರಮ್ಮ, ಶಿವಮ್ಮ, ಗೌರಮ್ಮ, ರುದ್ರಪ್ಪ ಮತ್ತು ಪಾರ್ವತಮ್ಮ ಇವರುಗಳನ್ನು ಬಿಟ್ಟು ಪೌತಿಯಾಗಿರುತ್ತಾನೆ. ಮಲ್ಲಪ್ಪನ 2 ನೇ ಮಗಳಾದ ಈರಮ್ಮಳು ತನ್ನ ಮಕ್ಕಳಾದ ಪರಮೇಶ್ ಮತ್ತು ಶಿವಮ್ಮ ಇವರುಗಳನ್ನು ಬಿಟ್ಟು ಪೌತಿಯಾಗಿರುತ್ತಾಳೆ. ಈರಮ್ಮಳ ಮಗ ಪರಮೇಶ್ ಇವನು ಪೌತಿಯಾಗಿದ್ದು ಇವನದ್ದು ನಷ್ಟಸಂತತಿಯಾಗಿರುತ್ತದೆ. ಈರಮ್ಮಳ ಮಗಳಾದ ಶಿವಮ್ಮಳಿಗೆ ಸಂಜಯ್ ಮತ್ತು ಪ್ರಶಾಂತ್ ಇಬ್ಬರು ಮಕ್ಕಳ ಪೈಕಿ ಪ್ರಶಾಂತನು ಮೃತಪಟ್ಟಿದ್ದು ನಷ್ಟಸಂತತಿಯಾಗಿರುತ್ತದೆ. ಮಲ್ಲಪ್ಪನ 3 ನೇ ಮಗಳಾದ ಶಿವಮ್ಮಳು ತನ್ನ ಮಗನಾದ ಬಸವಾರಾಜು ಇವನನ್ನು ಬಿಟ್ಟು ಮೃತಪಟ್ಟಿರುತ್ತಾಳೆ. ನಿಡಿ-6 ರ 5 ನೇ ಸಾಲಿನಲ್ಲಿ 1935 ನೇ ಇಸವಿಯಲ್ಲಿ ಭಾಗವಾಗಿದೆ ಎಂದು ನಮೂದಿಸಿರುತ್ತದೆ. ಅಂದಿನವರೆಗೂ ವಾದಿಯರು ಮತ್ತು ಪ್ರತಿವಾದಿಯರ ಒಟ್ಟು ಕುಟುಂಬದಲ್ಲಿ ವಾಸವಿದ್ದ ಬಗ್ಗೆ ತಿಳಿದುಬರುತ್ತದೆ. ನಿಡಿ-7 ದಿನಾಂಕಃ 04-02-1989 ರಂದು ಪರಣ್ಣನ ಮಕ್ಕಳು ಪಂಚಾಯ್ತಿದಾರರಿಗೆ ಬರೆದುಕೊಟ್ಟ ಕರಾರುಪತ್ರದ ಪ್ರಕಾರ

ವಾದಿಯರು ಮತ್ತು ಪ್ರತಿವಾದಿಯರ ಒಟ್ಟಿಗೆ ವಾಸವಾಗಿದ್ದ ಬಗ್ಗೆ ತಿಳಿದುಬರುತ್ತದೆ. ನಿಡಿ-23 ರ ಕ್ರಯಪತ್ರವನ್ನು ಮೃತ ಸಿದ್ದಪ್ಪನು ಬರೆದುಕೊಟ್ಟಿಲ್ಲ. ಅಲ್ಲದೆ, ಅದರಲ್ಲಿರುವ ಸ್ವತ್ತು ಮಲ್ಲಪ್ಪನ ಕುಟುಂಬದ ಸ್ವತ್ತು ಅಲ್ಲವೆಂದು ಕಂಡುಬರುತ್ತದೆ. ರುದ್ರಪ್ಪನ ಒಟ್ಟು ಕುಟುಂಬದ ಜಮೀನಿಂದ ಮೀನಾಕ್ಷಿ ವಾಟರ್ ವರ್ಕ್ ಗೆ ವರ್ಗಾವಣೆಯಾಗಿರುವ ಕಾರಣ, ದಾವಾ ಸ್ವತ್ತು ವಾದಿಯರಿಗೆ ಮತ್ತು ಪ್ರತಿವಾದಿಯರಿಗೆ ಒಟ್ಟು ಕುಟುಂಬದ ಜಮೀನುಗಳು ಸ್ಪಷ್ಟವಾಗಿ ಇರುತ್ತದೆ. ನಿ.ಡಿ-4 ಪಾಲುವಿಭಾಗ ಪತ್ರವು 1 ಮತ್ತು 6 ರಿಂದ 9 ನೇ ಪ್ರತಿವಾದಿಗಳು ಸೃಷ್ಟಿಸಿರುತ್ತಾರೆ. ಆದ್ದರಿಂದ, ವಾದಿಯರ ಮತ್ತು ಪ್ರತಿವಾದಿಯರ ಮೂಲ ಪುರುಷ ರುದ್ರಪ್ಪನ ಮಕ್ಕಳ ನಡುವೆ ಯಾವುದೇ ಪಾಲುವಿಭಾಗವಾಗದೆ ಇರುವುದರಿಂದ, ದಾವಾ ಆಸ್ತಿಗಳು ವಾದಿಯರ ಮತ್ತು ಪ್ರತಿವಾದಿಯರ ಅವಿಭಕ್ತ ಕುಟುಂಬದ ಆಸ್ತಿಗಳಾಗಿರುತ್ತವೆ ಎಂದು ಹೀಗೆ ತಮ್ಮ ಲಿಖಿತ ವಾದಮಂಡನೆಯಲ್ಲಿ ಹೇಳುತ್ತಾ, ವಾದಿಯರ ದಾವೆಯನ್ನು ಖರ್ಚು ಸಹಿತ ಡಿಕ್ರಿಮಾಡಬೇಕೆಂದು ತಮ್ಮ ವಾದವನ್ನು ಮಂಡಿಸಿರುತ್ತಾರೆ.

**22**. 1 ಮತ್ತು 6 ರಿಂದ 9 ನೇ ಪ್ರತಿವಾದಿಯರ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ, ದಾವಾ ತಪಶೀಲಿನ 1 ನೇ ಆಸ್ತಿಯನ್ನು 1 ನೇ ವಾದಿ 6 ನೇ ಪ್ರತಿವಾದಿಯ ಮೃತ ಗಂಡ ಗಂಗಾಧರಪ್ಪ, 7 ರಿಂದ 9 ನೇ ಪ್ರತಿವಾದಿಗಳ ತಂದೆ ಪರಣ್ಣ ಹಾಗೂ 1 ನೇ ಪ್ರತಿವಾದಿಯ ತಂದೆ ಮಲ್ಲಪ್ಪ ಮತ್ತು ಇತರೆ ಪ್ರತಿವಾದಿಯರು ಹಿರಿಯರು 1962 ನೇ ಇಸವಿಯಲ್ಲಿ ಹಾಗೂ ದಾವಾ ತಪಶೀಲಿನ 2 ನೇ ಆಸ್ತಿಯನ್ನು 1930 ನೇ ಇಸವಿಯಲ್ಲಿ ರುದ್ರಪ್ಪನ ಮಕ್ಕಳಾದ ಸಿದ್ದಪ್ಪ, ಪರಣ್ಣ ಹಾಗೂ ಮಲ್ಲಪ್ಪ ಇವರು ಲಿಖಿತ ಪತ್ರದ ಮೂಲಕ ಭಾಗ ಮಾಡಿಕೊಂಡಿದ್ದು, ಅದೇ ರೀತಿ ದಾವಾ ತಪಶೀಲಿನ 3 ನೇ ಆಸ್ತಿಯನ್ನು 1 ನೇ ವಾದಿ, 6 ನೇ ಪ್ರತಿವಾದಿಯ ಗಂಡ ಮೃತ ಗಂಗಾಧರಪ್ಪ, 7 ರಿಂದ 9 ನೇ ಪ್ರತಿವಾದಿಗಳು 1974 ರಲ್ಲಿ ವಿಭಾಗ ಮಾಡಿಕೊಂಡು, ಅದರಂತೆ ಆಗಿನಿಂದಲೇ

ಪ್ರತ್ಯೇಕ ಸ್ವಾಧೀನತೆಯಲ್ಲಿ ಇರುವ ಕಾರಣ, ವಾದಿಗಳ ಮತ್ತು ಪ್ರತಿವಾದಿಗಳ ಮಧ್ಯೆ ಜಂಟಿ ಕುಟುಂಬ ಹಾಗೂ ಜಂಟಿ ಕುಟುಂಬದ ಆಸ್ತಿಗಳು ಎಂಬ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಅಲ್ಲದೆ, ವಾದಿಗಳು ತಮ್ಮ ವಾದಪತ್ರದಲ್ಲಿ ಕೇವಲ ದಾವಾ ಆಸ್ತಿ ಸೈಟ್ ಇರುತ್ತದೆ ಎಂದ ಹೇಳಿದ್ದು, ಆದರೆ ದಾವಾ ತಪಶೀಲಿನ 2 ಮತ್ತು 3 ನೇ ಆಸ್ತಿಗಳ ಬಗ್ಗೆ ತಮ್ಮ ವಾದಪತ್ರದಲ್ಲಿ ಏನನ್ನು ಹೇಳಿಲ್ಲ. ಅಲ್ಲದೆ, 1 ಮತ್ತು 6 ರಿಂದ 9 ನೇ ಪ್ರತಿವಾದಿಗಳು ತಮ್ಮ ಲಿಖಿತ ಹೇಳಿಕೆ ಮತ್ತು ಹೆಚ್ಚುವರಿ ಲಿಖಿತ ಹೇಳಿಕೆಗಳಲ್ಲಿ ಹೇಳಿದಂತೆ ಈಗಾಗಲೇ ಪಾಲುವಿಭಾಗವಾಗಿರುವುದನ್ನು ತಮ್ಮ ದಾಖಲಾತಿ ಸಾಕ್ಷಿ ಹಾಗೂ ಡಿ.ಡಬ್ಲೂ-1 ರಿಂದ 5, 7 ರಿಂದ 9 ರವರ ಸಾಕ್ಷಿಯ ಮೂಲಕ ಸಾಬೀತುಪಡಿಸಿರುತ್ತಾರೆ ಎಂದು ತಮ್ಮ ವಾದವನ್ನು ಮಂಡಿಸುತ್ತಾ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ಧರಿತ ಪ್ರಕರಣಗಳಾದ-

1.Civil appeal No.3934/2006 ( P. Anjanappa(D) By LRs V/s A.P. Nanjundappa and ors)

2. AIR 2004 SC 4130 (K.G. Shivalingappa (Dead) By LRs and V/s G.S. Eshwarappa and Ors)

ಗಳನ್ನು ಆಧರಿಸಿ, ವಾದಿಗಳ ದಾವೆಯನ್ನು ಅದೇ ರೀತಿ 2, 10 ರಿಂದ 14 ನೇ ಪ್ರತಿವಾದಿಗಳು ಮತ್ತು 19 ರಿಂದ 25, 40 ರಿಂದ 44 ನೇ ಪ್ರತಿವಾದಿಗಳ ಎದುರುಕ್ಲೇಮಿನ ದಾವೆಯನ್ನು ವಜಾಗೊಳಿಸಬೇಕೆಂದು ತಮ್ಮ ವಾದವನ್ನು ಮಂಡಿಸಿರುತ್ತಾರೆ.

**23.** 2 ಮತ್ತು 10 ರಿಂದ 14 ನೇ ಪ್ರತಿವಾದಿಯರ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ, ವಾದಿಯರು ಪ್ರತಿವಾದಿಯರು ಹಿಂದು ಅವಿಭಕ್ತ ಕುಟುಂಬದ ಸದಸ್ಯರಿದ್ದು ಮತ್ತು ದಾವಾ ಸ್ವತ್ತುಗಳು ವಾದಿಯರ ಮತ್ತು ಪ್ರತಿವಾದಿಯರ ಪಿತ್ರಾರ್ಜಿತವಾದ ಮತ್ತು ಒಟ್ಟು ಕುಟುಂಬದ ಸ್ವತ್ತುಗಳಾಗಿದ್ದರಿಂದ ವಾದಿಯರು ಪಾಲುವಿಭಾಗ ಕೋರಿ ದಾವೆಯನ್ನು ಸಲ್ಲಿಸಿರುತ್ತಾರೆ. ವಾದಿಯರು ಮತ್ತು ಇತರೆ ಪ್ರತಿವಾದಿಯರ ವಂಶ ವೃಕ್ಷವನ್ನು ಒಪ್ಪಿಕೊಂಡಿರುತ್ತಾರೆ. 1 ಮತ್ತು 6 ರಿಂದ 9 ನೇ ಪ್ರತಿವಾದಿಯರು ನ್ಯಾಯಾಲಯಕ್ಕೆ ಹಾಜರಾಗಿ ಲಿಖಿತ ತಕರಾರನ್ನು ಸಲ್ಲಿಸಿದ್ದಾರೆ, ಸದರಿ ತಕರಾರಿನಲ್ಲಿ 1 ನೇ ವಾದಿ, 6 ನೇ ಪ್ರತಿವಾದಿಯ ಮೃತ ಪತಿ ಗಂಗಾಧರಪ್ಪ ಮತ್ತು 7 ರಿಂದ 9 ನೇ ಪ್ರತಿವಾದಿಯರ ತಂದೆ ಪರಣ್ಣ ಹಾಗೂ 1 ನೇ ಪ್ರತಿವಾದಿಯ ತಂದೆ ಮಲ್ಲಪ್ಪ ಹಾಗು ಇತರೆ ಪ್ರತಿವಾದಿಯರು 1962 ನೇ ಇಸ್ವಿಯಲ್ಲಿ ಪಾಲುವಿಭಾಗ ಮಾಡಿಕೊಂಡು ಅನುಭವಿಸುತ್ತಾ ಬರುತ್ತಿದ್ದಾರೆಂದು ಹಾಗೂ ದಾವಾ ತಪಶೀಲಿನ 1 ನೇ ಆಸ್ತಿಯಲ್ಲಿ 1 ನೇ ವಾದಿ ಹಾಗೂ 6 ರಿಂದ 9 ನೇ ಪ್ರತಿವಾದಿಯರಿಗೆ 20 ಗುಂಟೆ ಜಮೀನು ಪೈಕಿ ತಲಾ 2 ಗುಂಟೆಯಂತೆ ಹಾಗೂ 1 ನೇ ಪ್ರತಿವಾದಿಯು 10 ಗುಂಟೆ ಪ್ರದೇಶ ಅನುಭವಿಸುತ್ತಾ ಬರುತ್ತಿದ್ದಾರೆಂದು ತಿಳಿಸಿರುತ್ತಾರೆ, 2 ನೇ ಪ್ರತಿವಾದಿ ಮತ್ತು 10 ರಿಂದ 14 ಹಾಗೂ 40 ರಿಂದ 44 ನೇ ಪ್ರತಿವಾದಿಯರು ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ಲಿಖಿತ ತಕರಾರನ್ನು ಸಲ್ಲಿಸುವ ಮೂಲಕ ಎದುರು ದಾವೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ, ಎದುರುದಾವೆಯಲ್ಲಿ 3 ಮತ್ತು 4 ನೇ ಎದುರು ದಾವಾ ಸ್ವತ್ತುಗಳನ್ನು ಹೆಚ್ಚುವರಿಯಾಗಿ ತಂದಿರುತ್ತಾರೆ. ಆದರೆ ವಾದಿಯರು ಎದುರು ದಾವೆಗೆ ತಕರಾರನ್ನು ಸಲ್ಲಿಸಿರುವುದಿಲ್ಲ. ವಾದಿಯರು ಮತ್ತು ಇತರೆ ಪ್ರತಿವಾದಿಯರು ವಂಶ ವೃಕ್ಷವನ್ನು ಒಪ್ಪಿಕೊಂಡಿರುತ್ತಾರೆ. ಸದರಿ ಎದುರು ದಾವೆಯಲ್ಲಿ ದಾವಾ ಸ್ವತ್ತುಗಳು ಒಟ್ಟು ಕುಟುಂಬದ ಹಾಗೂ ಪಿತ್ರಾರ್ಜಿತವಾದ ಸ್ವತ್ತುಗಳೆಂದು ಹಾಗು

ವಾದಿಯರು ಮತ್ತು ಪ್ರತಿವಾದಿಯರೆಲ್ಲರೂ ಒಟ್ಟು ಕುಟುಂಬದ ಸದಸ್ಯರೆಂದು ದಾವಾ ಸ್ವತ್ತುಗಳನ್ನು ಎಲ್ಲರೂ ಒಟ್ಟಿಗೆ ಅನುಭವಿಸುತ್ತೇವೆ ಎಂದು ತಿಳಿಸಿರುತ್ತಾರೆ. ಪಾಲು ವಿಭಾಗವಾಗಿರುವುದಿಲ್ಲವೆಂದು ಹಾಗೂ ದಾವಾ ಸ್ವತ್ತುಗಳಲ್ಲಿ ವಾದಿಯರಿಗೆ ಮತ್ತು ಇತರೆ ಪ್ರತಿವಾದಿಯರಿಗೆ ಇರುವಷ್ಟೇ ಹಕ್ಕು ಅಧಿಕಾರ ತಮಗೂ ಇದೆ ಎಂದು ಹಾಗೂ ವಾದಿಯರು ಮತ್ತು ಪ್ರತಿವಾದಿಯರು ಸಹ ಹಿಸ್ಸಾ ಪಾಲು ಇದೆ ಎಂದು ತಿಳಿಸಿರುತ್ತಾರೆ. ವಾದಿಯರು ಮತ್ತು 1 ನೇ ಪ್ರತಿವಾದಿ 2, 10 ರಿಂದ 14 ನೇ ಪ್ರತಿವಾದಿಯರು ಒಟ್ಟು ಕುಟುಂಭದ ಸದಸ್ಯರಲ್ಲ ಎಂಬುದನ್ನು ಸಾಭೀತುಪಡಿಸುವಲ್ಲಿ ವಿಫಲರಾಗಿದ್ದಾರೆ. ಎದುರುದಾವೆಯಲ್ಲಿನ ಅಂಶಗಳಿಗೆ ಪೂರಕವಾಗಿ ಡಿ.ಡಬ್ಲೂ-6 ತನ್ನ ಮುಖ್ಯ ವಿಚಾರಣೆಯಲ್ಲಿ ಸಾಕ್ಷಿ ನುಡಿದಿದ್ದು, ಡಿ.ಡಬ್ಲೂ-1 ಮತ್ತು 2 ರವರು ಸರ್ಕಾರದಿಂದ 1954-55 ರಲ್ಲಿ ಹೊಸರಾಳು ಗ್ರಾಮದಲ್ಲಿ 4 ಎಕರೆ ಜಮೀನು ಮಂಜೂರಾಗಿತ್ತು ಎಂದು ಸರಿ ಎಂದು ಒಪ್ಪಿಕೊಂಡಿರುತ್ತಾರೆ. ಆದ್ದರಿಂದ, 2, 10 ರಿಂದ 14 ನೇ ಪ್ರತಿವಾದಿಯರು ತಮ್ಮ ಮೇಲಿರುವ ವಿವಾದಾಂಶವನ್ನು ಸಾಭೀತುಪಡಿಸಿರುವುದರಿಂದ, ದಾವಾ ಆಸ್ತಿಗಳು ವಾದಿಯರ ಮತ್ತು ಪ್ರತಿವಾದಿಯರ ಒಟ್ಟು ಕುಟುಂಬದ ಸ್ವತ್ತುಗಳೆಂದು ಘೋಷಿಸಿ, 2, 10 ರಿಂದ 14 ನೇ ಪ್ರತಿವಾದಿಯರ ಎದುರು ಕ್ಲೇಮಿನ ದಾವೆಯನ್ನು ಖರ್ಚು ಸಹಿತ ಡಿಕ್ರಿಮಾಡಬೇಕೆಂದು, ಹೀಗೆ ತಮ್ಮ ವಾದವನ್ನು ಮಂಡಿಸಿರುತ್ತಾರೆ.

**24.** 19 ರಿಂದ 25 ಮತ್ತು 40 ರಿಂದ 44 ನೇ ಪ್ರತಿವಾದಿಯರ ಪರ ವಕೀಲರು ತಮ್ಮ ವಾದಮಂಡನೆಯಲ್ಲಿ, ವಾದಿಯರು ಮತ್ತು 40 ರಿಂದ 44 ನೇ ಪ್ರತಿವಾದಿಯರು ಸಲ್ಲಿಸಿದ ಎದುರು ದಾವೆಗೆ ತಕರಾರು ಸಲ್ಲಿಸಿರುವುದಿಲ್ಲ. ಸದರಿ ಎದುರು ದಾವೆಯಲ್ಲಿ ದಾವಾ ಸ್ವತ್ತುಗಳು ಒಟ್ಟು ಕುಟುಂಬದ ಹಾಗೂ ಪಿತ್ರಾರ್ಜಿತವಾದ ಸ್ವತ್ತುಗಳೆಂದು ಹಾಗೂ ವಾದಿಯರು ಮತ್ತು ಪ್ರತಿವಾದಿಯರೆಲ್ಲರೂ ಒಟ್ಟು ಕುಟುಂಬದ ಸದಸ್ಯರೆಂದು ದಾವಾ ಸ್ವತ್ತುಗಳನ್ನು ಎಲ್ಲರು ಒಟ್ಟಿಗೆ ಅನುಭವಿಸುತ್ತೇವೆ ಎಂದು

ಹೇಳಿರುತ್ತಾರೆ. ಅಲ್ಲದೆ, ಪಾಲು ವಿಭಾಗವಾಗಿರುವುದಿಲ್ಲವೆಂದು ಹಾಗೂ ದಾವಾ ಸ್ವತ್ತುಗಳಲ್ಲಿ ವಾದಿಯರಿಗೆ ಮತ್ತು ಇತರೆ ಪ್ರತಿವಾದಿಯರಿಗೆ ಇರುವಷ್ಟೇ ಹಕ್ಕು ಅಧಿಕಾರ ಇದೆ ಎಂದು ಹಾಗೂ ವಾದಿಯರು ಮತ್ತು ಪ್ರತಿವಾದಿಯರು ಸಹ ಹಿಸ್ಸಾ ಪಾಲು ಇದೆ ಎಂದು ಹೇಳಿರುತ್ತಾರೆ. ವಾದಿಯರು ತಮ್ಮ ಕುಟುಂಬದ ವಂಶ ವೃಕ್ಷವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ನಿಡಿ-7 ದಿನಾಂಕಃ 04-02-1989 ರಂದು ಪರಣ್ಣನ ಮಕ್ಕಳು ಪಂಚಾಯ್ತಿದಾರರಿಗೆ ಪಂಚಾಯ್ತಿಗಾಗಿ ಬರೆದುಕೊಟ್ಟ ಕರಾರುಪತ್ರದ ಪ್ರಕಾರ ವಾದಿಯರು ಮತ್ತು ಪ್ರತಿವಾದಿಯರು ಒಟ್ಟಿಗೆ ವಾಸವಾಗಿರುವುದು ಕಂಡುಬರುತ್ತದೆ. ಅಲ್ಲದೆ, ಡಿ.ಡಬ್ಲೂ-2 ತನ್ನ ಪಾಟಿಸವಾಲಿನಲ್ಲಿ ರುದ್ರಪ್ಪ ಮರಣಹೊಂದಿದ ನಂತರ, ಒಟ್ಟು ಕುಟುಂಬದಲ್ಲಿ ಇದ್ದ ಕಾರಣ, ಅವರ ಹಿರಿಯ ಮಗ ಸಿದ್ದಪ್ಪನಿಗೆ ಪೌತಿ ಖಾತೆಯಾಗಿರುತ್ತದೆ ಎನ್ನುವುದು ಸರಿ. 1961-62 ರಲ್ಲಿ ಮೀನಾಕ್ಷಿ ವಾಟರ್ ವರ್ಕ್ಸ್ ಗೆ ಸಿದ್ದಪ್ಪನವರಿಂದಲೇ ಜಾಗ ವರ್ಗಾವಣೆಯಾಗಿರುತ್ತದೆ ಎಂದರೆ ಸರಿ ಎಂದು ಸಾಕ್ಷಿ ನುಡಿದಿರುವುದರಿಂದ, ದಾವಾ ಆಸ್ತಿಗಳು ವಾದಿಯರ ಮತ್ತು ಪ್ರತಿವಾದಿಯರ ಒಟ್ಟು ಕುಟುಂಬದ ಆಸ್ತಿಗಳು ಎಂದು ಸ್ಪಷ್ಟವಾಗಿರುತ್ತದೆ. ಆದ್ದರಿಂದ, ವಾದಿಯರ ಮತ್ತು ಪ್ರತಿವಾದಿಯರ ಮಧ್ಯೆ ದಾವಾ ಆಸ್ತಿಗಳಲ್ಲಿ ಪಾಲುವಿಭಾಗವಾಗದೇ ಇರುವುದರಿಂದ, ಎದುರುಕ್ಲೇಮಿನಲ್ಲಿ ಕೇಳಿದ ಆಸ್ತಿಯಲ್ಲಿ 19 ರಿಂದ 25 ಮತ್ತು 40 ರಿಂದ 44 ನೇ ಪ್ರತಿವಾದಿಗಳಿಗೆ ಹಿಸ್ಸೆಯ ಹಕ್ಕು ಇರುವುದು ಸಾಭೀತು ಆಗಿರುವ ಕಾರಣ, ದಾವಾ ಆಸ್ತಿಗಳು ವಾದಿಯರ ಮತ್ತು ಪ್ರತಿವಾದಿಯರ ಒಟ್ಟು ಕುಟುಂಬದ ಸ್ವತ್ತುಗಳೆಂದು ಘೋಷಿಸುವ ಮೂಲಕ ವಾದಿಯರ ದಾವೆಯನ್ನು ಹಾಗೂ 19 ರಿಂದ 25 ಹಾಗು 40 ರಿಂದ 44 ನೇ ಪ್ರತಿವಾದಿಗಳ ಎದುರುಕ್ಲೇಮನ್ನು ಡಿಕ್ರಿಗೊಳಿಸಬೇಕೆಂದು ಹೀಗೆ ತಮ್ಮ ವಾದವನ್ನು ಮಂಡಿಸಿರುತ್ತಾರೆ.

**25.** ವಾದಿಯರ ಪರ ನಿಶಾನೆಯೆಂದು ಗುರುತಿಸಿಕೊಂಡಂತಹ ದಾಖಲೆಗಳನ್ನು ಅವಲೋಕಿಸಲಾಗಿ, ನಿಪಿ-1 ಆಕಾರ್ ಬಂದ್ ನಕಲು, ನಿಪಿ-2 ರಿಂದ 4 ರೆಕಾರ್ಡ್ ಆಫ್ ರೈಟ್ಸ್ ನಕಲುಗಳು, ನಿಪಿ-5 ಜಮೀನು ಸರ್ವೆ ನಂ-16/5 ರ 1965-66 ರಿಂದ 1969-70 ರ ಪಹಣಿ ಪತ್ರಿಕೆ ಇದ್ದು, ಅದು ಮಲ್ಲಪ್ಪ ತಂದೆ ರುದ್ರಪ್ಪನ ಹೆಸರಿನಲ್ಲಿ ಇರುತ್ತದೆ. ನಿಪಿ-6 ಮತ್ತು 7 ಜಮೀನು ಸರ್ವೆ ನಂ-38 ರ 1970-71 ರಿಂದ 1979-80 ರ ಪಹಣಿ ಪತ್ರಿಕೆಗಳು ಇದ್ದು, ಅವು ಮಲ್ಲಪ್ಪ ತಂದೆ ರುದ್ರಪ್ಪನ ಹೆಸರಿನಲ್ಲಿ ಇರುತ್ತವೆ. ನಿಪಿ-8 ದಾವಾ ತಪಶೀಲಿನ 2 ನೇ ಆಸ್ತಿಯ 1980-81 ರಿಂದ 1984-85 ರ ಪಹಣಿ ಪತ್ರಿಕೆ ಇದ್ದು, ಅದು ಮಲ್ಲಣ್ಣ ತಂದೆ ರುದ್ರಪ್ಪ ನ ಹೆಸರಿನಲ್ಲಿ ಇರುತ್ತದೆ. ನಿಪಿ-9 ದಾವಾ ತಪಶೀಲಿನ 2 ನೇ ಆಸ್ತಿಯ 1985-86 ರಿಂದ 1989-90 ರ ಪಹಣಿ ಪತ್ರಿಕೆ ಇದ್ದು, ಅದು ಮಲ್ಲಣ್ಣ ತಂದೆ ರುದ್ರಪ್ಪನ ಹೆಸರಿನಲ್ಲಿ ಇದ್ದು, ನಂತರ ಗಂಗಾಧರಪ್ಪ ತಂದೆ ಪರಣ್ಣಇವನ ಹೆಸರಿನಲ್ಲಿ ಇರುತ್ತದೆ. ನಿಪಿ-10 ರಿಂದ 13 ದಾವಾ ತಪಶೀಲಿನ 2 ನೇ ಆಸ್ತಿಯ 1991 ರಿಂದ 1999-2000 ನೇ ಸಾಲಿನ ಪಹಣಿ ಪತ್ರಿಕೆಗಳು ಇರುತ್ತವೆ. ನಿಪಿ-14 ಜಮೀನು ಸರ್ವೆ ನಂ-38/1 ಎಪಿ1 ರ 2000-01 ರ ಪಹಣಿ ಪತ್ರಿಕೆ ಇದ್ದು, ಅದು ಗಂಗಾಧರಪ್ಪ ತಂದೆ ಪರಣ್ಣಇವನ ಹೆಸರಿನಲ್ಲಿ ಇರುತ್ತದೆ. ನಿಪಿ-15 ಜಮೀನು ಸರ್ವೆ ನಂ-38/1 ಎಪಿ3 ರ 2000-01 ರ ಪಹಣಿ ಪತ್ರಿಕೆ ಇದ್ದು, ಅದು ಶಿವರುದ್ರಪ್ಪ ತಂದೆ ಪರಣ್ಣ ಇವನ ಹೆಸರಿನಲ್ಲಿ ಇರುತ್ತದೆ. ನಿಪಿ-16 ಜಮೀನು ಸರ್ವೆ ನಂ-38/1 ಎಪಿ ರ 2000-01 ರ ಪಹಣಿ ಪತ್ರಿಕೆ ಇದ್ದು, ಅದು ಶೇಖರಪ್ಪ ತಂದೆ ಪರಣ್ಣಇವನ ಹೆಸರಿನಲ್ಲಿ ಇರುತ್ತದೆ. ನಿಪಿ-17 ಜಮೀನು ಸರ್ವೆ ನಂ-38/1 ಎಪಿ2 ರ 2000-01 ರ ಪಹಣಿ ಪತ್ರಿಕೆ ಇದ್ದು, ಅದು ಮಹೇಶ್ವರಪ್ಪ ತಂದೆ ಪರಣ್ಣ ಇವನ ಹೆಸರಿನಲ್ಲಿ ಇರುತ್ತದೆ. ನಿಪಿ-18 ಜಮೀನು ಸರ್ವೆ ನಂ-38/1 ಎಪಿ5 ರ 2000-01 ರ ಪಹಣಿ ಪತ್ರಿಕೆ ಇದ್ದು, ಅದು ಪ್ರಕಾಶ್ ತಂದೆ ಪರಣ್ಣಇವನ ಹೆಸರಿನಲ್ಲಿ

ಇರುತ್ತದೆ. ನಿಪಿ-19 ಜಮೀನು ಸರ್ವೇ ನಂ-38/1 ಎಪಿ6 ರ 2000-01 ರ ಪಹಣಿ ಪತ್ರಿಕೆ ಇದ್ದು, ಅದು ರುದ್ರಪ್ಪ ತಂದೆ ಮಲ್ಲಪ್ಪ ಇವನ ಹೆಸರಿನಲ್ಲಿ ಇರುತ್ತದೆ. ನಿಪಿ-20 ಜಮೀನು ಸರ್ವೇ ನಂ-38/ಎಪಿ7 ರ 2000-01 ರ ಪಹಣಿ ಪತ್ರಿಕೆ ಇದ್ದು, ಅದು ಚಂದ್ರಪ್ಪ ತಂದೆ ಹನುಮಂತಪ್ಪ ಇವನ ಹೆಸರಿನಲ್ಲಿ ಇರುತ್ತದೆ. ನಿಪಿ-21 ಜಮೀನು ಸರ್ವೇ ನಂ-38/1 ಎಪಿ8 ರ 2000-01 ರ ಪಹಣಿ ಪತ್ರಿಕೆ ಇದ್ದು, ಅದು ಕೆ.ಎಸ್. ವೆಂಕಟರಾಮಯ್ಯ ತಂದೆ ಶೇಷಯ್ಯ ಇವನ ಹೆಸರಿನಲ್ಲಿ ಇರುತ್ತದೆ. ನಿಪಿ-22 ರಿಂದ 26 , 41 ಮತ್ತು 52 ರ ಜಮೀನು ಸರ್ವೇ ನಂ-38/2 ರ 1980-81 ರಿಂದ 2001-02 ರ ಪಹಣಿ ಪತ್ರಿಕೆಗಳು ಇದ್ದು, ಅವುಗಳ ಪ್ರಕಾರ 20 ಗುಂಟೆ ಸರ್ಕಾರದ ಜಮೀನು ಇರುತ್ತದೆ. ನಿಪಿ-27 ರಿಂದ 31, 42 ಮತ್ತು 53 ಜಮೀನು ಸರ್ವೇ ನಂ-38/1 ಬಿ ರ 1980-81 ರಿಂದ 2001-02 ರ ಪಹಣಿ ಪತ್ರಿಕೆಗಳು ಇದ್ದು, ಅವುಗಳ ಪ್ರಕಾರ 2 ಎಕರೆ 36 ಗುಂಟೆ ಸರ್ಕಾರದ ಜಮೀನು ಇರುತ್ತದೆ. ನಿಪಿ-32 ಮತ್ತು 43 ಜಮೀನು ಸರ್ವೇ ನಂ-38/1 ಎಪಿ6-ಪಿ1 2001-02 ಮತ್ತು 2017-18 ರ ಪಹಣಿ ಪತ್ರಿಕೆಗಳು ಇದ್ದು, ಅವು ರುದ್ರಪ್ಪ ತಂದೆ ಮಲ್ಲಪ್ಪ ಇವನ ಹೆಸರಿನಲ್ಲಿ ಇರುತ್ತವೆ. ನಿಪಿ-33 ಮತ್ತು 44 ಜಮೀನು ಸರ್ವೇ ನಂ-38/1 ಎಪಿ6-ಪಿ2 ರ 2001-02 ಮತ್ತು 2017-18 ರ ಪಹಣಿ ಪತ್ರಿಕೆಗಳು ಇದ್ದು, ಅವು ರುದ್ರಪ್ಪ ತಂದೆ ಮಲ್ಲಪ್ಪ ಇವನ ಹೆಸರಿನಲ್ಲಿ ಇರುತ್ತವೆ. ನಿಪಿ-34 ಜಮೀನು ಸರ್ವೇ ನಂ-38/1 ಎಪಿ7 ರ 2001-02 ರ ಪಹಣಿ ಪತ್ರಿಕೆ ಇದ್ದು, ಅದು ಚಂದ್ರಪ್ಪ ತಂದೆ ಹನುಮಂತಪ್ಪ ಇವನ ಹೆಸರಿನಲ್ಲಿ ಇರುತ್ತದೆ. ನಿಪಿ-35 ಮತ್ತು 46 ಜಮೀನು ಸರ್ವೇ ನಂ-38/1 ಎ 8 ರ 2001-02 ಮತ್ತು 2017-18 ನೇ ಸಾಲಿನ ಪಹಣಿ ಪತ್ರಿಕೆಗಳು ಇದ್ದು, ಅವು ಕೆ.ಎಸ್ ವೆಂಕಟರಾಮಯ್ಯ ತಂದೆ ಶೇಷಯ್ಯ ಇವನ ಹೆಸರಿನಲ್ಲಿ ಇರುತ್ತವೆ. ನಿಪಿ-36 ಜಮೀನು ಸರ್ವೇ ನಂ-38/1 ಎಪಿ1 ರ 2001-02 ರ ಪಹಣಿ ಪತ್ರಿಕೆ ಇದ್ದು, ಅದು ಗಂಗಾಧರಪ್ಪ ತಂದೆ

ಪರಣ್ಣನ ಹೆಸರಿನಲ್ಲಿ ಇರುತ್ತದೆ. ನಿಪಿ-37 ಮತ್ತು 48 ಜಮೀನು ಸರ್ವೇ ನಂ-38/1 ಎಪಿ3 ರ 2001-02 ಮತ್ತು 2017-18 ರ ಪಹಣಿ ಪತ್ರಿಕೆಗಳು ಇದ್ದು, ಅವು ಶಿವರುದ್ರಪ್ಪ ತಂದೆ ಪರಣ್ಣ ಇವನ ಹೆಸರಿನಲ್ಲಿ ಇರುತ್ತವೆ. ನಿಪಿ-38 ಮತ್ತು 49 ಜಮೀನು ಸರ್ವೇ ನಂ-38/1 ಎಪಿ4 ರ 2001-02 ಮತ್ತು 2017-18 ರ ಪಹಣಿ ಪತ್ರಿಕೆಗಳು ಇದ್ದು, ಅವು ಶೇಖರಪ್ಪ ತಂದೆ ಪರಣ್ಣ ಇವನ ಹೆಸರಿನಲ್ಲಿ ಇರುತ್ತವೆ. ನಿಪಿ-39 ಮತ್ತು 50 ಜಮೀನು ಸರ್ವೇ ನಂ-38/1 ಎಪಿ2 ರ 2001-02 ಮತ್ತು 2017-18 ನೇ ಸಾಲಿನ ಪಹಣಿ ಪತ್ರಿಕೆಗಳು ಇದ್ದು, ಅವು ಮಹೇಶ್ವರಪ್ಪ ತಂದೆ ಪರಣ್ಣ ಇವನ ಹೆಸರಿನಲ್ಲಿ ಇರುತ್ತವೆ. ನಿಪಿ-40 ಮತ್ತು 51 ಜಮೀನು ಸರ್ವೇ ನಂ-38/1 ಎಪಿ5 ರ 2001-02 ಮತ್ತು 2017-18 ರ ಪಹಣಿ ಪತ್ರಿಕೆಗಳು ಇದ್ದು, ಅವು ಪ್ರಕಾಶ್ ತಂದೆ ಪರಣ್ಣನ ಹೆಸರಿನಲ್ಲಿ ಇರುತ್ತವೆ. ನಿಪಿ-47 ಜಮೀನು ಸರ್ವೇ ನಂ-38/1 ಎಪಿ1 ರ 2017-18 ರ ಪಹಣಿ ಪತ್ರಿಕೆ ಇದ್ದು, ಅದು ಸುವರ್ಣಮ್ಮ ಗಂಡ ಗಂಗಾಧರಪ್ಪ ಇವಳ ಹೆಸರಿನಲ್ಲಿ ಇರುತ್ತದೆ.

**26**. ನಿಪಿ-54 ಹೊಸದುರ್ಗ ಪೋಲೀಸರು ಕೊಟ್ಟಂತಹ ಸ್ವೀಕೃತಿ ಇರುತ್ತದೆ. ನಿಪಿ-55 ದಿನಾಂಕಃ 13-11-1986 ರ ಕ್ರಯಪತ್ರದ ದೃಢೀಕೃತ ನಕಲು ಇರುತ್ತದೆ, ನಿಪಿ-56 ಜಮೀನು ಸರ್ವೇ ನಂ-93/1 ರ 2023-24 ರ ಪಹಣಿ ಪತ್ರಿಕೆ ಇದ್ದು, ಅದು 4(ಸಿ) ಮತ್ತು 4(ಇ)ನೇ ಪ್ರತಿವಾದಿಗಳ ಜಂಟಿ ಹೆಸರಿನಲ್ಲಿ ಇರುತ್ತವೆ. ನಿಪಿ-57 ಜಮೀನು ಸರ್ವೇ ನಂ-114/1 ರ 2023-24 ರ ಪಹಣಿ ಪತ್ರಿಕೆ ಇದ್ದು, ಅದು 4(ಬಿ)ನೇ ಪ್ರತಿವಾದಿ ಹೆಸರಿನಲ್ಲಿ ಇರುತ್ತದೆ. ನಿಪಿ-58 ಜಮೀನು ಸರ್ವೇ ನಂ-115/3 ರ 2023-24 ರ ಪಹಣಿ ಪತ್ರಿಕೆ ಇದ್ದು, ಅದು 4(ಇ)ನೇ ಪ್ರತಿವಾದಿ ಹೆಸರಿನಲ್ಲಿ ಇರುತ್ತದೆ. ನಿಪಿ-59 ಜಮೀನು ಸರ್ವೇ ನಂ-115/3 ರ 2014-15 ರ ಪಹಣಿ ಪತ್ರಿಕೆ ಇದ್ದು, ಅದು ಶಾರದಮ್ಮ ಗಂಡ ಮರುಳಪ್ಪ ಇವಳ ಹೆಸರಿನಲ್ಲಿ ಇರುತ್ತದೆ. ನಿಪಿ-60 ರಿಂದ 65 ರ

ಹಿಸ್ಸಾ ಟಿಪ್ಪಣಿ ನಕಲುಗಳು ಇರುತ್ತವೆ. ನಿಪಿ-66 ಮತ್ತು 67 ಆಕಾರ್ ಭಂದ್ ನಕಲುಗಳು ಇರುತ್ತವೆ. ನಿಪಿ-68 ರಿಂದ 71 ಪೋಟೋಗಳು ಮತ್ತು ನಿಪಿ-72 ಪೋಟೋಗಳ ಸಿ ಡಿ ಇರುತ್ತದೆ.

**27**. ಪ್ರತಿವಾದಿಯರ ಪರ ನಿಶಾನೆ ಎಂದು ಗುರುತಿಸಿಕೊಂಡಂತಹ ದಾಖಲೆಗಳನ್ನು ಅವಲೋಕಿಸಲಾಗಿ, ನಿಡಿ-1 ಜಮೀನುಗಳ ಪರಿಶಿಷ್ಠ ನಕಲು, ನಿಡಿ-2 ಎಂ.ಆರ್. ನಂ-04/1985-86 ಮುಟೇಶನ್ ರಿಜಿಸ್ಟರ್ ನಕಲು, ನಿಡಿ-3 ಜಮೀನು ಹಕ್ಕಿನ ದಾಖಲೆ ನಕಲು, ನಿಡಿ-4 ದಿನಾಂಕಃ08-06-1930 ರ ಪಾಲು ವಿಭಾಗ ಪತ್ರ, ನಿಡಿ-4(ಎ) ದಿನಾಂಕಃ 08-06-1930 ರ ಪಾಲುವಿಭಾಗ ಪತ್ರದ ಗಣಕೀಕೃತ ಮಾಡಿದ ಪ್ರತಿ, ನಿಡಿ-5 ದಿನಾಂಕಃ 01-02-1974 ರ ಪಾಲು ವಿಭಾಗ ಪತ್ರ, ನಿಡಿ-5(ಎ) ದಿನಾಂಕಃ 01-02-1974 ರ ಪಾಲು ವಿಭಾಗ ಪತ್ರದ ಗಣಕೀಕೃತ ಮಾಡಿದ ಪ್ರತಿ, ನಿಡಿ-6 ದಿನಾಂಕಃ 16-12-1986 ರ ಪಾಲು ವಿಭಾಗ ಪತ್ರ, ನಿಡಿ-6(ಎ) ದಿನಾಂಕಃ 16-12-1986 ರ ಪಾಲು ವಿಭಾಗ ಪತ್ರದ ಗಣಕೀಕೃತ ಮಾಡಿದ ಪ್ರತಿ, ನಿಡಿ-7 ದಿನಾಂಕಃ 04-02-1989 ರ ಮುಚ್ಚಳಿಕೆ ಕರಾರು ಪತ್ರ, ನಿಡಿ-7(ಎ) ದಿನಾಂಕಃ 04-02-1989 ರ ಮುಚ್ಚಳಿಕೆ ಕರಾರು ಪತ್ರ ಗಣಕೀಕೃತ ಮಾಡಿದ ಪ್ರತಿ, ನಿಡಿ-8 ದಿನಾಂಕಃ 25-06-1993 ರ ಪಾಲು ವಿಭಾಗ ಪತ್ರ, ನಿಡಿ-9 ರಿಂದ 11 ಜಮೀನು ಸರ್ವೇ ನಂ-38/1 ಎಪಿ3, ಜಮೀನು ಸರ್ವೇ ನಂ-67/2 ಮತ್ತು ಜಮೀನು ಸರ್ವೇ ನಂ-7/9 ರ 2018-19 ಮತ್ತು 2020-21 ರ ಪಹಣಿ ಪತ್ರಿಕೆಗಳು ಇದ್ದು, ಅವು ಶಿವರುದ್ರಪ್ಪ ತಂದೆ ಪರಣ್ಣ ಇವನ ಹೆಸರಿನಲ್ಲಿ ಇರುತ್ತವೆ. ನಿಡಿ-12 ಜಮೀನು ಸರ್ವೇ ನಂ-7/9 ರ 2020-21 ನೇ ಸಾಲಿನ ಪಹಣಿ ಪತ್ರಿಕೆ ಇದ್ದು, ಅದು, ಚಂದ್ರಮ್ಮ ಗಂಡ ಲೇಟ್ ರಂಗಪ್ಪ, ನರಸಿಂಹಪ್ಪ ತಂದೆ ಲೇಟ್ ಸಿದ್ದಪ್ಪ, ಎಸ್ ಹನುಮಂತಪ್ಪ ತಂದೆ ಲೇಟ್ ಸಿದ್ದಪ್ಪ ಮತ್ತು ಶಿವರುದ್ರಪ್ಪ ತಂದೆ ಪರಣ್ಣ ಇವರ ಜಂಟಿ ಹೆಸರಿನಲ್ಲಿ ಇರುತ್ತದೆ, ನಿಡಿ-

13 ಜಮೀನು ಸರ್ವೇ ನಂ-38/2 ರಲ್ಲಿನ 20 ಗುಂಟೆಯ 2020-21 ನೇ ಸಾಲಿನ ಪಹಣಿ ಪತ್ರಿಕೆ ಇದ್ದು, ಅದರ ಪ್ರಕಾರ ಸರ್ಕಾರಿ ಜಮೀನು ಇರುತ್ತದೆ. ನಿಡಿ-14 ಜಮೀನು ಸರ್ವೇ ನಂ-38/1 ಎಪಿ6- ಪಿ1 ರ 2018-19 ರ ಪಹಣಿ ಪತ್ರಿಕೆ ಇದ್ದು, ಅದು ರುದ್ರಪ್ಪ ತಂದೆ ಮಲ್ಲಪ್ಪಇವನ ಹೆಸರಿನಲ್ಲಿ ಇರುತ್ತದೆ. ನಿಡಿ-15 ಜಮೀನು ಸರ್ವೇ ನಂ-38/1 ಎ 8 ರ 2018-19 ರ ಪಹಣಿ ಪತ್ರಿಕೆ ಇದ್ದು, ಅದು ಕೆ.ಎಸ್. ವೆಂಕಟರಾಮಯ್ಯ ತಂದೆ ಶೇಷಯ್ಯ ಇವನ ಹೆಸರಿನಲ್ಲಿ ಇರುತ್ತದೆ. ನಿಡಿ-16 ಜಮೀನು ಸರ್ವೇ ನಂ-38/1 ಬಿ ರಲ್ಲಿನ 2 ಎಕರೆ 36 ಗುಂಟೆ ಜಮೀನಿನ 2020-21 ರ ಪಹಣಿ ಪತ್ರಿಕೆ ಇದ್ದು, ಅದು ಸರ್ಕಾರಿ ಜಮೀನಾಗಿರುತ್ತದೆ. ನಿಡಿ-17 ಜಮೀನು ಸರ್ವೇ ನಂ-38/1 ಎಪಿ2 ರ 2018-19 ರ ಪಹಣಿ ಪತ್ರಿಕೆ ಇದ್ದು, ಅದು ಮಹೇಶ್ವರಪ್ಪ ತಂದೆ ಪರಣ್ಣ ಇವನ ಹೆಸರಿನಲ್ಲಿ ಇರುತ್ತದೆ. ನಿಡಿ-18 ಜಮೀನು ಸರ್ವೇ ನಂ-38/1 ಎಪಿ5 ರ 2018-19 ರ ಪಹಣಿ ಪತ್ರಿಕೆ ಇದ್ದು, ಅದು ಪ್ರಕಾಶ್ ತಂದೆ ಪರಣ್ಣ ಇವನ ಹೆಸರಿನಲ್ಲಿ ಇರುತ್ತದೆ. ನಿಡಿ-19 ಜಮೀನು ಸರ್ವೇ ನಂ-38/1 ಎಪಿ1 ರ 2018-19 ರ ಪಹಣಿ ಪತ್ರಿಕೆ ಇದ್ದು, ಅದು ಸುವರ್ಣಮ್ಮ ಗಂಡ ಗಂಗಾಧರಪ್ಪ ಇವಳ ಹೆಸರಿನಲ್ಲಿ ಇರುತ್ತದೆ. ನಿಡಿ-20 ಜಮೀನು ಸರ್ವೇ ನಂ-38/1 ಎಪಿ4 ರ 2018-19 ರ ಪಹಣಿ ಪತ್ರಿಕೆ ಇದ್ದು, ಅದು ಶೇಖರಪ್ಪ ತಂದೆ ಪರಣ್ಣಇವನ ಹೆಸರಿನಲ್ಲಿ ಇರುತ್ತದೆ. ನಿಡಿ-21 ಜಮೀನು ಸರ್ವೇ ನಂ-7/8 ರ 2020-21 ರ ಪಹಣಿ ಪತ್ರಿಕೆ ಇದ್ದು, ಅದು ಸುವರ್ಣಮ್ಮ ಗಂಡ ಲೇಟ್ ಗಂಗಾಧರಪ್ಪ ಇವಳ ಹೆಸರಿನಲ್ಲಿ ಇರುತ್ತದೆ. ನಿಡಿ-22 ವಂಶವೃಕ್ಷದ ಪ್ರಮಾಣ ಪತ್ರ ಮತ್ತು ನಿಡಿ-23 ದಿನಾಂಕಃ 26-10-1988 ರ ಕ್ರಯಪತ್ರದ ದೃಢೀಕೃತ ನಕಲು ಇರುತ್ತದೆ. ನಿಡಿ-24 44 ನೇ ಪ್ರತಿವಾದಿ ತನ್ನ ಮಗನಿಗೆ ಬರೆದುಕೊಟ್ಟ ಜಿ.ಪಿ.ಎ ಮತ್ತು ನಿಡಿ-25 ವಂಶವೃಕ್ಷದ ಪ್ರಮಾಣ ಪತ್ರ ಇರುತ್ತದೆ.

**28**. ನಿಡಿ-4 ರ ಪ್ರಕಾರ ದಿನಾಂಕಃ 08-06-1930 ರಂದು ರುದ್ರಯ್ಯ ಮತ್ತು ಅವನ ಮಕ್ಕಳಾದ ಸಿದ್ದಪ್ಪ, ಪರಣ್ಣ ಹಾಗೂ ಮಲ್ಲಪ್ಪ ಇವರುಗಳು ಸೇರಿಕೊಂಡು ಪಾಲುವಿಭಾಗ ಮಾಡಿಕೊಂಡಿರುವುದು ಕಂಡುಬರುತ್ತದೆ. ಅಲ್ಲದೆ, ನಿಡಿ-5 ರ ಪ್ರಕಾರ ದಿನಾಂಕಃ 01-02-1974 ರಲ್ಲಿ ರುದ್ರಪ್ಪನ ಮಗ ಪರ್ವತಪ್ಪ ಮತ್ತು ಅವನ ಮಕ್ಕಳಾದ ಗಂಗಾಧರಪ್ಪ, ಶಿವರುದ್ರಪ್ಪ, ಚಂದ್ರಶೇಖರಪ್ಪ, ಮಹೇಶ್ವರಪ್ಪ ಮತ್ತು ಪ್ರಕಾಶ ಇವರುಗಳು ಸೇರಿ ಪಾಲುವಿಭಾಗ ಮಾಡಿಕೊಂಡಿರುವುದು ಕಂಡುಬರುತ್ತದೆ. ಅಲ್ಲದೆ, ನಿಡಿ-6 ರ ಪ್ರಕಾರ ದಿನಾಂಕಃ 16-12-1986 ರಂದು ಪರಣ್ಣನ ಮಗ ಗಂಗಾಧರಪ್ಪ ಮತ್ತು ಮಲ್ಲಪ್ಪನ ಮಗ ರುದ್ರಪ್ಪ ಇವರುಗಳು ಈ ಹಿಂದೆ ಅಂದರೆ 1935 ನೇ ಸಾಲಿನಲ್ಲಿ ಭಾಗವಾಗಿ ಅನುಭವಿಸುತ್ತಿದ್ದರ ಪ್ರಕಾರ ಖಾತೆಯನ್ನು ಮಾಡಿಕೊಳ್ಳುವ ಸಲುವಾಗಿ ವಿಭಾಗ ಮಾಡಿಕೊಂಡಿರುವುದು ಕಂಡುಬರುತ್ತದೆ. ಅಲ್ಲದೆ, ನಿಡಿ-7 ರ ಪ್ರಕಾರ ದಿನಾಂಕಃ 04-02-1989 ರಲ್ಲಿ ಪರ್ವತಮ್ಮನ ಮಕ್ಕಳಾದ ಗಂಗಾಧರಪ್ಪ, ಶಿವರುದ್ರಪ್ಪ, ಚಂದ್ರಶೇಖರಪ್ಪ, ಮಹೇಶ್ವರಪ್ಪ ಮತ್ತು ಪ್ರಕಾಶ ಇವರುಗಳು ಸೇರಿಕೊಂಡು ಸ್ಥಿರಾಸ್ತಿಗಳ ಹಂಚಿಕೆಯಲ್ಲಿ ಭಿನ್ನಾಭಿಪ್ರಾಯ ಬಂದಿರುವುದರಿಂದ ಪಂಚಾಯ್ತಿದಾರರ ಸಮಕ್ಷಮ ಮುಚ್ಚಳಿಕೆ ಕರಾರು ಪತ್ರವನ್ನು ಮಾಡಿಕೊಂಡಿರುವುದು ಕಂಡುಬರುತ್ತದೆ. ಅಲ್ಲದೆ, ನಿಡಿ-8 ರ ಪ್ರಕಾರ ದಿನಾಂಕಃ 25-06-1993 ರಂದು ಪರಣ್ಣನ ಮಕ್ಕಳಾದ ಗಂಗಾಧರಪ್ಪ, ಶಿವರುದ್ರಪ್ಪ, ಶೇಖರಪ್ಪ, ಮಹೇಶ್ವರಪ್ಪ ಮತ್ತು ಪ್ರಕಾಶ ಇವರುಗಳು ಸೇರಿ ತಮ್ಮ ಒಟ್ಟು ಕುಟುಂಬದ ಆಸ್ತಿಗಳನ್ನು ಪಾಲುವಿಭಾಗ ಮಾಡಿಕೊಂಡಿರುವುದು ಕಂಡುಬರುತ್ತದೆ.

**29**. ವಾದಿಗಳು ತಮ್ಮ ವಾದಪತ್ರದಲ್ಲಿ ದಾವಾ ಆಸ್ತಿಗಳು ವಾದಿಗಳ ಮತ್ತು 1 ರಿಂದ 9 ನೇ ಪ್ರತಿವಾದಿಗಳ ಪಿತ್ರಾರ್ಜಿತ ಜಂಟಿ ಕುಟುಂಬದ ಆಸ್ತಿಗಳಾಗಿದ್ದು, ಅದರಂತೆ ಜಂಟಿಯಾಗಿ ಅನುಭವಿಸುತ್ತಿರುವುದಾಗಿ ಆರೋಪಿಸಿದ್ದು, ಆದರೆ ಅದಕ್ಕೆ ವ್ಯತಿರಿಕ್ತವಾಗಿ

ವಾದಿಯರ ಪರ ಸಾಕ್ಷಿ ನುಡಿದ ಪಿ.ಡಬ್ಲೂ-1 ತನ್ನ ಮುಖ್ಯ ವಿಚಾರಣೆಯ ಸಾಕ್ಷಿಯಲ್ಲಿ ಸಿದ್ದಪ್ಪ ತಂದೆ ಮೃತ ರುದ್ರಪ್ಪ ಇವನು ತನ್ನ ಭಾಗಕ್ಕೆ ಬಂದ ಜಮೀನಾದ ರಿ.ಸರ್ವೇ ನಂ-38/1 ಎ ರಲ್ಲಿ 2 ಎಕರೆ 36 ಗುಂಟೆ ಜಮೀನನ್ನು ಸರ್ಕಾರಕ್ಕೆ ಅಂದರೆ ಮೀನಾಕ್ಷಿ ವಾಟರ್ ವರ್ಕ್ಸ್ ಪುರಸಭೆಗೆ ಮಾರಾಟ ಮಾಡಿದ್ದಾರೆ ಎಂದು ಸಾಕ್ಷಿ ನುಡಿದಿದ್ದು, ಅದೇ ರೀತಿ ವಾದಿಯರ ಪರ ಸಾಕ್ಷಿ ನುಡಿದ ಪಿ.ಡಬ್ಲೂ-2 ತನ್ನ ಮುಖ್ಯ ವಿಚಾರಣೆಯ ಸಾಕ್ಷಿಯಲ್ಲಿ ರಿ.ಸರ್ವೇ ನಂ-38/1 ಎ ಒಟ್ಟು ಜಮೀನು 14 ಎಕರೆ 20 ಗುಂಟೆಯಲ್ಲಿ ಮೃತ ರುದ್ರಪ್ಪನ 1 ನೇ ಮಗ ಸಿದ್ದಪ್ಪ ಇವನು 2 ಎಕರೆ 36 ಗುಂಟೆ ಜಮೀನನ್ನು ಪಾಲು ಭಾಗವಾಗಿ ಪಡೆದಿದ್ದನು ಎಂದು ಸಾಕ್ಷಿ ನುಡಿದಿರುತ್ತಾರೆ. ಆದರೆ, ಪಿ.ಡಬ್ಲೂ-1 ಮತ್ತು 2 ರವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷಿಯಲ್ಲಿಯೇ ದಾವಾ ಆಸ್ತಿಗಳು 1 ನೇ ವಾದಿ ಮತ್ತು ಪ್ರತಿವಾದಿಯರಿಗೆ ಪಿತ್ರಾರ್ಜಿತವಾಗಿ ಬಂದಂತಹ ಸ್ವತ್ತುಗಳಾಗಿರುತ್ತವೆ. ಅವುಗಳನ್ನು 1 ನೇ ವಾದಿ ಮತ್ತು ಪ್ರತಿವಾದಿಯರು ಒಟ್ಟಿಗೆ ಅನುಭವಿಸುತ್ತಿದ್ದಾರೆ ಎಂದು ಸಾಕ್ಷಿ ನುಡಿದಿರುತ್ತಾರೆ.

**30**. ವಾದಿಯರ ಪರ ಸಾಕ್ಷಿ ನುಡಿದ ಪಿ.ಡಬ್ಲೂ-1 ತನ್ನ ಪಾಟಿಸವಾಲಿನಲ್ಲಿ, ದಿನಾಂಕಃ 08-06-1930 ರಂದು ತನ್ನ ತಾತ ಹಾಗೂ ಅವರ ಸಹೋದರರು ಕುಟುಂಬದ ಸ್ವತ್ತುಗಳನ್ನು ಭಾಗಮಾಡಿಕೊಂಡಿದ್ದರು ಎಂದರೆ ತನಗೆ ಗೊತ್ತಿಲ್ಲ.ಈ ರೀತಿ ವಿಭಾಗ ಆದ ಕಾರಣವೆ ಅವರವರ ಪಾಲಿಗೆ ಪಹಣಿಗಳು ಬಂದಿದೆ ಎಂದು ಸೂಚಿಸಲಾಗಿ ಸಾಕ್ಷಿ ಸಮಭಾಗ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ತಮ್ಮ ಅಜ್ಜನಿಗೆ ಸಮಭಾಗ ನೀಡಿರುವುದಿಲ್ಲ. ತಮ್ಮ ಅಜ್ಜ ಪರಣ್ಣ 1961 ರಲ್ಲಿ ಪಾಲುವಿಭಾಗ ಮಾಡಿಕೊಂಡಿರುತ್ತಾರೆ ಎಂದು ಸಾಕ್ಷಿ ನುಡಿದಿದ್ದು, ಅದೇ ರೀತಿ ಪಿ.ಡಬ್ಲೂ-2 ತನ್ನ ಪಾಟಿಸವಾಲಿನಲ್ಲಿ, 1930 ನೇ ಇಸವಿಯಲ್ಲಿಯೇ ರುದ್ರಪ್ಪನ ಮಕ್ಕಳು ಸ್ವತ್ತುಗಳನ್ನು ಪಾಲು ಮಾಡಿಕೊಂಡು ಅನುಭವಿಸಿಕೊಂಡು ಬಂದಿರುತ್ತಾರೆಂದು ಸೂಚಿಸಲಾಗಿ ಸಾಕ್ಷಿ

ಜಮೀನಿನ ಭಾಗ ಆಗಿರುವ ವಿಚಾರ ತನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿದಿರುತ್ತಾನೆ ವಿನಃ ಸುಳ್ಳು ಎಂದು ಅಲ್ಲಗಳೆದಿಲ್ಲ.

**31**. ವಾದಿಯರ ಪರ ಸಾಕ್ಷಿ ನುಡಿದ ಪಿ.ಡಬ್ಲೂ-1 ತನ್ನ ಪಾಟಿಸವಾಲಿನಲ್ಲಿ, 14 ಎಕರೆ 20 ಗುಂಟೆ ಜಮೀನಿನ ಪೈಕಿ, 7 ಎಕರೆ 14 ಗುಂಟೆ ರುದ್ರಪ್ಪನ ಹೆಸರಿನಲ್ಲಿ, 34 ಗುಂಟೆ ಗಂಗಾಧರಪ್ಪನ ಹೆಸರಿನಲ್ಲಿ, 30 ಗುಂಟೆ ಶಿವರುದ್ರಪ್ಪನ ಅಂದರೆ ತನ್ನ ತಂದೆಯ ಹೆಸರಿನಲ್ಲಿ, 34 ಗುಂಟೆ ಶೇಖರಪ್ಪನ ಹೆಸರಿನಲ್ಲಿ, 30 ಗುಂಟೆ ಜಮೀನು ಮಹೇಶ್ವರಪ್ಪನ ಹೆಸರಿನಲ್ಲಿ, ಪ್ರಕಾಶ್ ಇವನ ಹೆಸರಿನಲ್ಲಿ 30 ಗುಂಟೆ ಇರುತ್ತದೆ ಎಂದು ಸಾಕ್ಷಿ ನುಡಿದಿದ್ದು, ಅದೇ ರೀತಿ 19 ರಿಂದ 25 ಮತ್ತು 40 ರಿಂದ 44 ನೇ ಪ್ರತಿವಾದಿಗಳ ಪರ ಸಾಕ್ಷಿ ನುಡಿದ ಡಿ.ಡಬ್ಲೂ-11 ತನ್ನ ಪಾಟಿಸವಾಲಿನಲ್ಲಿ 1 ನೇ ಪ್ರತಿವಾದಿ 7 ಎಕರೆ 14 ಗುಂಟೆಯನ್ನು ಉಳುಮೆ ಮಾಡುತ್ತಿದ್ದಾರೆ. ಸದರಿ 7 ಎಕರೆ 14 ಗುಂಟೆ 1 ನೇ ಪ್ರತಿವಾದಿಯ ಹೆಸರಿಗೆ ಇರುತ್ತದೆ. ಪರಣ್ಣನ ಮಕ್ಕಳು ಗಂಗಾಧರಪ್ಪ 30 ಗುಂಟೆ, 7/8 ರಲ್ಲಿ 6 ಎಕರೆಯನ್ನು ಅನುಭವಿಸುತ್ತಿದ್ದಾನೆ. 1 ನೇ ವಾದಿ ಸರ್ವೇ ನಂ-38/1 ಎ ರಲ್ಲಿ 30 ಗುಂಟೆಯನ್ನು ಅನುಭವಿಸುತ್ತಿದ್ದಾನೆ. ಶೇಖರಪ್ಪ, ಮಹೇಶ್ವರಪ್ಪ ಮತ್ತು ಪ್ರಕಾಶ ಇವರು ತಲಾ 30 ಗುಂಟೆಯನ್ನು ಸರ್ವೇ ನಂ-38/1 ಎ ರಲ್ಲಿ ಅನುಭವಿಸುತ್ತಿದ್ದಾರೆ. ಸರ್ವೇ ನಂ-38/2 ರಲ್ಲಿನ 20 ಗುಂಟೆಯನ್ನು ಶೇಖರಪ್ಪ, ಮಹೇಶ್ವರಪ್ಪ, ಪ್ರಕಾಶ, ಗಂಗಾಧರಪ್ಪ, ರುದ್ರಪ್ಪ ಮತ್ತು ಶಿವರುದ್ರಪ್ಪ ಅನುಭವಿಸುತ್ತಿದ್ದಾರೆ ಎಂದು ಸಾಕ್ಷಿ ನುಡಿದಿದ್ದು, ಅದೇ ರೀತಿ ಡಿ.ಡಬ್ಲೂ-12 ತನ್ನ ಪಾಟಿಸವಾಲಿನಲ್ಲಿ, ಸರ್ವೇ ನಂ-38/2 ರಲ್ಲಿ ಶೇಖರಪ್ಪ 1 ಎಕರೆ, ಪ್ರಕಾಶಪ್ಪ 1 ½ ಎಕರೆ, ಗಂಗಾಧರಪ್ಪ 2 ಎಕರೆ ನೋಡಿಕೊಳ್ಳುತ್ತಿದ್ದಾರೆ. ಸದರಿಯವರು ಸುಮಾರು 50 ವರ್ಷಗಳಿಂದ ಮೇಲೆ ಹೇಳಿದಂತೆ ಜಮೀನನ್ನು ನೋಡಿಕೊಳ್ಳುತ್ತಿದ್ದಾರೆ ಎಂದು ಸಾಕ್ಷಿ ನುಡಿದಿರುವುದರಿಂದ ಹಾಗೂ ವಾದಿಗಳ ಪರ ವಕೀಲರು ಡಿ.ಡಬ್ಲೂ-1 ರವರ ಪಾಟಿಸವಾಲಿನಲ್ಲಿ, 1 ನೇ ಪ್ರತಿವಾದಿಯ

ತಂದೆ ಮತ್ತು ಪರಣ್ಣ ಅವರವರ ಭಾಗಕ್ಕೆ ಬಂದಂತಹ ಜಮೀನನ್ನು ಉಳುಮೆ ಮಾಡುತ್ತಿದ್ದರು ಎಂದರೆ ಸರಿ. ನಿಪಿ-7 ಮತ್ತು 8 ರಂತೆ 1970 ರಿಂದ 1975 ರ ತನಕ ತಮ್ಮ ತಂದೆ ಮತ್ತು ಪರಣ್ಣ ಇಬ್ಬರು ತಲಾ 6 ಎಕರೆ 17 ಗುಂಟೆಯನ್ನು ಅನುಭವಿಸುತ್ತಿದ್ದರು ಎನ್ನುವುದು ಸರಿಯಲ್ಲ. ತಾವು ಬೇರೆ ಬೇರೆ ವಾಸ ಮಾಡಲು ಪ್ರಾರಂಭಿಸಿದ ನಂತರ ಹೊಸೂರಾಳ್ ಗ್ರಾಮದಲ್ಲಿ ಸರ್ವೇ ನಂ-85 ರಲ್ಲಿ 1 ಎಕರೆ 33 ಗುಂಟೆ ಖರೀದಿಸಿರುತ್ತೇನೆಂದರೆ ಸರಿ. ಮಹೇಶ್ವರಪ್ಪನು ಸಹ ಸದರಿ ಗ್ರಾಮದಲ್ಲಿಯೇ 1 ಎಕರೆ 13 ಗುಂಟೆಯನ್ನು ತನ್ನ ಹೆಂಡತಿಯ ಹೆಸರಿಗೆ ಖರೀದಿಸಿರುತ್ತಾರೆಂದು ಸೂಚಿಸಲಾಗಿ ಸಾಕ್ಷಿ ಇರಬಹುದೆಂದು ನುಡಿದಿದ್ದು, ಅದೇ ರೀತಿ ತಮ್ಮ ಚಿಕ್ಕಪ್ಪ ಗಂಗಾಧರಪ್ಪ 6 ಎಕರೆ ಜಮೀನನ್ನು ಖರೀದಿಸಿರುತ್ತಾರೆ ಎಂದು ಸಲಹೆಗಳನ್ನು ಮಾಡಿರುವುದರಿಂದ ಹಾಗೂ ಡಿ.ಡಬ್ಲೂ-1 ತನ್ನ ಪಾಟಿಸವಾಲಿನಲ್ಲಿ, ತಮ್ಮ ಕುಟುಂಬಕ್ಕೂ ಮತ್ತು ಪರಣ್ಣನ ಕುಟುಂಬಕ್ಕೂ ವೈಮನಸ್ಸು ಇದ್ದ ಕಾರಣ 1986 ರಿಂದ ಬೇರೆ ಬೇರೆ ವಾಸವಾಗಿರುತ್ತಾರೆಂದು ಸೂಚಿಸಲಾಗಿ ಸಾಕ್ಷಿ 1935 ರಲ್ಲಿಯೆ ಪಾಲುವಿಭಾಗ ಮಾಡಿಕೊಂಡು ಬೇರೆ ಬೇರೆ ವಾಸವಾಗಿರುತ್ತಾರೆಂದು ಸಾಕ್ಷಿ ನುಡಿದಿರುವುದನ್ನು ವಾದಿಗಳ ಪರ ವಕೀಲರು ಸುಳ್ಳು ಎಂದು ಅಲ್ಲಗಳೆದಿಲ್ಲ.

**32**. ವಾದಿಯರ ಪರ ಸಾಕ್ಷಿ ನುಡಿದ ಪಿ.ಡಬ್ಲೂ-1 ತನ್ನ ಪಾಟಿಸವಾಲಿನಲ್ಲಿ, ಹೊಸರಾಳು ಗ್ರಾಮದ ಸರ್ವೇ ನಂ-7/9 ರಲ್ಲಿ 3 ಎಕರೆ ಜಮೀನು ತನ್ನ ತಂದೆಯ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಸರ್ವೇ ನಂ-67/2 ರಲ್ಲಿ 3 ಎಕರೆ ಜಮೀನು ತನ್ನ ತಂದೆಯ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಸರ್ವೇ ನಂ-7/2 ರ 6 ಎಕರೆ ಜಮೀನು ತನ್ನ ತಾತ ಪರಣ್ಣನ ಹೆಸರಿನಲ್ಲಿ ಇರುತ್ತದೆ. ಹೊಸರಾಳು ಗ್ರಾಮದ ಮೇಲೆ ಹೇಳಿದ 2 ಜಮೀನುಗಳನ್ನು ತಮ್ಮ ತಂದೆ ಬೇರೆಯಾದ ನಂತರ ಸ್ವಯಾರ್ಜಿತವಾಗಿ ಖರೀದಿದ್ದರು. ಯಾವಾಗ ಕ್ರಯಕ್ಕೆ ಪಡೆದರು ಎಂದು ತನಗೆ ಗೊತ್ತಿಲ್ಲ. ತಮ್ಮ ತಂದೆ ವ್ಯವಸಾಯ

ಮತ್ತು ಕೂಲಿಯಿಂದ, ವ್ಯಾಪಾರದಿಂದ ಬಂದ ಆದಾಯದಿಂದ ಸದರಿ ಸ್ವತ್ತುಗಳನ್ನು ಖರೀದಿಸಿದರು. ತನಗೆ ತಿಳುವಳಿಕೆ ಬಂದಾಗಿನಿಂದ ತಮ್ಮ ತಂದೆ ಬೇರೆಯಾಗಿ ಇರುತ್ತಾರೆ ಎಂದು ಸಾಕ್ಷಿ ನುಡಿದಿರುವುದರಿಂದ ಹಾಗೂ ತನ್ನ ಪಾಟಿಸವಾಲಿನಲ್ಲಿ ತನ್ನ ತಂದೆ ಸಹೋದರರು ಸಹ ಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಈ ರೀತಿ ವಿಭಾಗ ಆದ ಕಾರಣವೆ ಅವರವರ ಪಾಲಿಗೆ ಪಹಣಿಗಳು ಬಂದಿದೆ ಎಂದು ಸೂಚಿಸಲಾಗಿ ಸಾಕ್ಷಿ ಸಮಭಾಗ ಕೊಟ್ಟಿಲ್ಲ ಎಂದು ಸಾಕ್ಷಿ ನುಡಿದಿರುವುದರಿಂದ ಹಾಗೂ ಡಿ.ಡಬ್ಲೂ-1 ರವರ ಪಾಟಿಸವಾಲಿನಲ್ಲಿ ವಾದಿಗಳ ಪರ ವಕೀಲರು ನಿಮ್ಮ ತಂದೆ ದಿನಾಂಕಃ 13-11-1976 ರಂದು ಕೆಲ್ಲೋಡು ಗ್ರಾಮದಲ್ಲಿರುವ 2 ಸೈಟುಗಳನ್ನು ಮಾರಾಟ ಮಾಡಿರುತ್ತಾರೆ ಎಂದು ಸೂಚಿಸಲಾಗಿ, ಸಾಕ್ಷಿ ತಮ್ಮ ತಂದೆ 1 ಸೈಟ್ ನ್ನು ಸ್ವಂತವಾಗಿ ಖರೀದಿಸಿದ್ದು ಅದನ್ನು ಮಾರಾಟ ಮಾಡಿರುತ್ತಾರೆ ಎಂದು ಸಾಕ್ಷಿ ನುಡಿದಿರುವುದರಿಂದ ಹಾಗೂ 2 ಮತ್ತು 11 ರಿಂದ 14 ನೇ ಪ್ರತಿವಾದಿಗಳ ಪರ ಸಾಕ್ಷಿನುಡಿದ ಡಿ.ಡಬ್ಲೂ-6 ವಾದಿಗಳ ಪರ ವಕೀಲರ ಪಾಟಿಸವಾಲಿನಲ್ಲಿ, ತನ್ನ ತಾತ ಸಿದ್ದಪ್ಪ ಒಟ್ಟು ಕುಟುಂಬದಿಂದ 1957 ರಿಂದಲೆ ಬೇರೆಯಾಗಿ ವಾಸವಾಗಿದ್ದರು ಎಂದರೆ ಸರಿ ಎಂದು ಸಾಕ್ಷಿ ನುಡಿದಿದ್ದು, ಅದೇ ರೀತಿ 1 ಮತ್ತು 6 ರಿಂದ 9 ನೇ ಪ್ರತಿವಾದಿಗಳ ವಕೀಲರ ಪಾಟಿಸವಾನಲಿನಲ್ಲಿ, ವಿಭಾಗ ಆದಾಗ ನಿಮ್ಮ ಅಜ್ಜ ಸಿದ್ದಪ್ಪನಿಗೆ ಹೊಸದುರ್ಗದಲ್ಲಿರುವ ಮನೆಯನ್ನು ನೀಡಿದ್ದರು ಎಂದು ಸೂಚಿಸಲಾಗಿ, ಸಾಕ್ಷಿ ಅದನ್ನು ನಮ್ಮ ಅಜ್ಜ ದುಡಿದು ಸ್ವಯಾರ್ಜಿತವಾಗಿ ಖರೀದಿಸಿರುತ್ತಾರೆಂದು ಸಾಕ್ಷಿ ನುಡಿದಿರುವುದರಿಂದ, ಅದೇ ರೀತಿ 1, 6 ರಿಂದ 9 ನೇ ಪ್ರತಿವಾದಿಗಳ ಪರ ಸಾಕ್ಷಿ ನುಡಿದ ಡಿ.ಡಬ್ಲೂ-9 ವಾದಿಗಳ ಪರ ವಕೀಲರ ಪಾಟಿಸವಾಲಿನಲ್ಲಿ, ರುದ್ರಪ್ಪನ ಒಟ್ಟು ಕುಟುಂಬದ ಆಸ್ತಿಯಲ್ಲಿ ತಮ್ಮ ಕುಟುಂಬಕ್ಕೆ ಯಾವ ಆಸ್ತಿ ಬಂದಿರುತ್ತದೆ ಎಂದು ಪ್ರಶ್ನಿಸಲಾಗಿ, ಸಾಕ್ಷಿ ತಮ್ಮ ತಾತ ಇದ್ದಾಗಲೇ ಭಾಗ ಆಗಿರುತ್ತಾರೆ. ಪಾಲುವಿಭಾಗದಲ್ಲಿ ಹೊಸದುರ್ಗದಲ್ಲಿರುವ ಮನೆ ತಮ್ಮ ತಾತ ಸಿದ್ದಪ್ಪನ

ಭಾಗಕ್ಕೆ ಬಂದಿರುತ್ತದೆ ಎಂದು ಸಾಕ್ಷಿ ನುಡಿದಿರುವುದರಿಂದ ವಾದಿಯರ ಮತ್ತು ಪ್ರತಿವಾದಿಯರ ಪರ ಇರುವಂತಹ ಎಲ್ಲಾ ಮೌಖಿಕ ಸಾಕ್ಷಿಯನ್ನು ಕೂಲಂಕುಷವಾಗಿ ಅವಲೋಕಿಸಲಾಗಿ, ಈಗಾಗಲೇ ಮೂಲ ಪುರುಷ ರುದ್ರಪ್ಪನ ಮಕ್ಕಳಾದ ಸಿದ್ದಪ್ಪ, ಪರಣ್ಣ ಮತ್ತು ಮಲ್ಲಪ್ಪ ಇವರುಗಳು ಪಾಲುವಿಭಾಗಮಾಡಿಕೊಂಡಿದ್ದು, ನಂತರ ಪರಣ್ಣನ ಮಕ್ಕಳಾದ 1 ನೇ ವಾದಿ ಮತ್ತು ಅವನ ಸಹೋದರರು ಸಹ ನಿಡಿ-8 ರಂತೆ ಪಾಲುವಿಭಾಗ ಮಾಡಿಕೊಂಡು ಪ್ರತ್ಯೇಕ ಸ್ವಾಧೀನತೆಯನ್ನು ಹೊಂದಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಅಲ್ಲದೆ, ದಾವಾ ಆಸ್ತಿಗಳ ಪಹಣಿ ಪತ್ರಿಕೆಗಳಿಂದಲೂ ಸಹ, ಆಸ್ತಿಗಳನ್ನು ಸಿದ್ದಪ್ಪ, ಪರಣ್ಣ ಮತ್ತು ಮಲ್ಲಪ್ಪನ ಮಕ್ಕಳು ಪ್ರತ್ಯೇಕವಾಗಿ ಅನುಭವಿಸುತ್ತಿದ್ದು, ಅದರಂತೆ ಅವರ ಹೆಸರು ನಮೂದಾಗಿರುವುದು ಕಂಡುಬರುತ್ತದೆ.

**33**. ವಾದಿಯರ ಪರ ಸಾಕ್ಷಿ ನುಡಿದ ಪಿ.ಡಬ್ಲೂ-1 ತನ್ನ ಪಾಟಿಸವಾಲಿನಲ್ಲಿ, 1992 ಅಥವಾ 1995 ರಲ್ಲಿ ಸರ್ಕಾರದಿಂದ ಸವಲತ್ತು ಪಡೆಯಲು ತನ್ನ ತಂದೆ ಮತ್ತು ಅವರ ಸಹೋದರರು ಮತ್ತು ಅವರ ಮಕ್ಕಳು ಜಮೀನುಗಳನ್ನು ಭಾಗ ಮಾಡಿಕೊಂಡು ಖಾತೆ ಮಾಡಿಕೊಂಡಿರುತ್ತಾರೆ. ತಮ್ಮ ಅಜ್ಜನಿಗೆ ಸಮಭಾಗ ನೀಡಿರುವುದಿಲ್ಲ ಎಂದು ಸಾಕ್ಷಿ ನುಡಿದಂತೆ, ವಾದಿಗಳು ತಮ್ಮ ವಾದಪತ್ರದಲ್ಲಿ 1 ನೇ ವಾದಿಯ ತಂದೆಗೆ ಸಮಭಾಗವನ್ನು ಕೊಟ್ಟಿಲ್ಲ, ಆದ್ದರಿಂದ, ಈ ಹಿಂದೆ ಆದ ಪಾಲುವಿಭಾಗವನ್ನು ರದ್ದುಪಡಿಸಿ, ಪುನಃ ಪಾಲುವಿಭಾಗ ಮಾಡಿ ಸಮನಾದ ಹಿಸ್ಸೆ ಹಂಚಿಕೆ ಮಾಡಬೇಕು ಎಂಬ ಪರಿಹಾರವನ್ನು ಕೇಳಿಲ್ಲ. ಅಲ್ಲದೆ, ಈ ಹಿಂದೆ ಆದ ಪಾಲುವಿಭಾಗದಲ್ಲಿ 1 ನೇ ವಾದಿಯ ತಂದೆಗೆ ಸಮಭಾಗ ನೀಡಿಲ್ಲ ಎನ್ನುವುದು ವಾದಿಗಳ ಕೇಸು ಅಲ್ಲ. ಅಲ್ಲದೆ, ಮೂಲ ಪುರುಷ ರುದ್ರಪ್ಪನ ಮಗ ಸಿದ್ದಪ್ಪ ಇವನು ತನ್ನ ಭಾಗಕ್ಕೆ ಬಂದ ಜಮೀನು ಸರ್ವೆ ನಂ-38/1 ಎ ರಲ್ಲಿನ 2 ಎಕರೆ 36 ಗುಂಟೆ ಜಮೀನನ್ನು ಸರ್ಕಾರಕ್ಕೆ ಅಂದರೆ ಮೀನಾಕ್ಷಿ ವಾಟರ್ ವರ್ಕಸ್ ಪುರಸಭೆಗೆ ಮಾರಾಟ ಮಾಡಿರುತ್ತಾನೆ ಎನ್ನುವುದು ವಾದಿಗಳು ತಮ್ಮ

ವಾದಪತ್ರದಲ್ಲಿ ಹೇಳಿಲ್ಲ, ಬದಲಾಗಿ ಸಿದ್ದಪ್ಪನ ಮಕ್ಕಳು, ಮಲ್ಲಪ್ಪನ ಮಕ್ಕಳು ಮತ್ತು ಪರಣ್ಣನ ಮಕ್ಕಳು ದಾವಾ ಆಸ್ತಿಗಳನ್ನು ಪಿತ್ರಾರ್ಜಿತ ಒಟ್ಟು ಕುಟುಂಬದ ಆಸ್ತಿಗಳಾಗಿ ಅನುಭವಿಸುತ್ತಿದ್ದೇವೆ ಎಂದು ಹೇಳಿರುತ್ತಾರೆ. ಆದ್ದರಿಂದ, ಈಗಾಗಲೇ ಮೂಲ ಪುರುಷ ರುದ್ರಪ್ಪನ ಮಕ್ಕಳ ಮಧ್ಯೆ ಪಾಲುವಿಭಾಗವಾಗಿದ್ದು, ನಂತರ ಪರಣ್ಣನ ಮಕ್ಕಳಲ್ಲಿಯೂ ಪಾಲುವಿಭಾಗವಾಗಿ, ಅದರಂತೆ ಪ್ರತ್ಯೇಕ ಸ್ವಾಧೀನತೆಯಲ್ಲಿ ಇರುತ್ತಾರೆ ಎನ್ನುವುದನ್ನು 1, 6 ರಿಂದ 9 ನೇ ಪ್ರತಿವಾದಿಗಳು ಸಾಭೀತುಪಡಿಸಿರುತ್ತಾರೆ. ಆದರೆ, ವಾದಿಗಳು ಮತ್ತು ವಾದಪತ್ರದಲ್ಲಿ ಆರೋಪಿಸಿದಂತೆ ಅದೇ ರೀತಿ 2, 11 ರಿಂದ 14 ನೇ ಪ್ರತಿವಾದಿಗಳು ತಮ್ಮ ಎದುರುಕ್ಲೇಮಿನಲ್ಲಿ ಆರೋಪಿಸಿದಂತೆ ಮತ್ತು 19 ರಿಂದ 25 ಹಾಗೂ 40 ರಿಂದ 44 ನೇ ಪ್ರತಿವಾದಿಗಳು ತಮ್ಮ ಎದುರುಕ್ಲೇಮಿನಲ್ಲಿ ಆರೋಪಿಸಿದಂತೆ ದಾವಾ ತಪಶೀಲಿನ ಆಸ್ತಿಗಳು ಹಾಗೂ ಎದುರುಕ್ಲೇಮಿನ ತಪಶೀಲಿನಲ್ಲಿ ಹೇಳಿದಂತಹ ಆಸ್ತಿಗಳು ವಾದಿಗಳ ಮತ್ತು 1 ರಿಂದ 9 ಹಾಗೂ 11 ರಿಂದ 53 ನೇ ಪ್ರತಿವಾದಿಗಳ ಪಿತ್ರಾರ್ಜಿತ ಜಂಟಿ ಕುಟುಂಬದ ಆಸ್ತಿಗಳು ಎನ್ನುವುದನ್ನು ಸಾಭೀತುಪಡಿಸಿಲ್ಲ. ಕಾರಣ, **ವಿವಾದಾಂಶ-1, ದಿನಾಂಕಃ 15-07-2023 ರ ಹೆಚ್ಚುವರಿ ವಿವಾದಾಂಶ-2 ಮತ್ತು ದಿನಾಂಕಃ 18-03-2026 ರ ಹೆಚ್ಚುವರಿ ವಿವಾದಾಂಶ-1 ನ್ನು ನಕಾರಾತ್ಮಕವಾಗಿ ಹಾಗೂ ವಿವಾದಾಂಶ-2, ದಿನಾಂಕಃ02-08-2021 ರ ಹೆಚ್ಚುವರಿ ವಿವಾದಾಂಶ-1 ನ್ನು ಸಕಾರಾತ್ಮಕವಾಗಿ ಉತ್ತರಿಸಿದ್ದೇನೆ.**

**34. <u>ದಿನಾಂಕಃ 15-07-2023 ರ ಹೆಚ್ಚುವರಿ ವಿವಾದಾಂಶ-1 ಮತ್ತು 4</u>-**

ಈ ಎರಡು ವಿವಾದಾಂಶಗಳು ಮೇಲ್ನೋಟಕ್ಕೆ ಬೇರೆ ಬೇರೆಯಾಗಿ ಕಂಡು ಬಂದರೂ ಸಹ, ಆಂತರಿಕವಾಗಿ ಒಂದೊಕ್ಕೊಂದು ಸಂಬಂಧ ಹೊಂದಿರುವುದರಿಂದ, ವಿಷಯಗಳ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಒಟ್ಟಿಗೆ ಪರಿಗಣಿಸಲಾಗಿದೆ.

ವಾದಿಗಳು ತಮ್ಮ ವಾದಪತ್ರದಲ್ಲಿ ಆರೋಪಿಸಿದಂತೆ, ಅದೇ ರೀತಿ 11 ರಿಂದ 14 ನೇ ಪ್ರತಿವಾದಿಗಳು ತಮ್ಮ ಎದುರುಕ್ಲೇಮಿನಲ್ಲಿ ಆರೋಪಿಸಿದಂತೆ ದಾವಾ ಆಸ್ತಿಗಳು ಹಾಗೂ ಎದುರುಕ್ಲೇಮಿನ ತಪಶೀಲಿನ ಆಸ್ತಿಗಳು ವಾದಿಗಳ ಹಾಗೂ 1 ರಿಂದ 9 ಮತ್ತು 11 ರಿಂದ 53 ನೇ ಪ್ರತಿವಾದಿಗಳ ಪಿತ್ರಾರ್ಜಿತ ಜಂಟಿ ಕುಟುಂಬದ ಆಸ್ತಿಗಳಾಗಿದ್ದು, ಅವುಗಳಲ್ಲಿ ತಮಗೆ ಹಿಸ್ಸೆಯ ಹಕ್ಕು ಇದೆ ಎನ್ನುವುದನ್ನು ಸಾಭೀತುಪಡಿಸದ ಕಾರಣ, ವಾದಿಗಳು ವಾದಪತ್ರದಲ್ಲಿ ಕೋರಿದಂತೆ ಹಾಗೂ 11 ರಿಂದ 14 ನೇ ಪ್ರತಿವಾದಿಗಳು ತಮ್ಮ ಎದುರುಕ್ಲೇಮಿನಲ್ಲಿ ಕೋರಿದಂತೆ ಯಾವುದೇ ರೀತಿಯ ಮಧ್ಯಕಾಲಿನ ಲಾಭದ ಪರಿಹಾರವನ್ನು ಪಡೆಯಲು ಅರ್ಹರಾಗಿರುವುದಿಲ್ಲವೆಂದು ತೀರ್ಮಾನಿಸಿ, **ದಿನಾಂಕಃ 15-07-2023 ರ ಹೆಚ್ಚುವರಿ ವಿವಾದಾಂಶ-1 ಮತ್ತು 4 ನ್ನು ನಕಾರಾತ್ಮಕವಾಗಿ ಉತ್ತರಿಸಿದ್ದೇನೆ.**

**35**. **ವಿವಾದಾಂಶ-3 ದಿನಾಂಕಃ 15-07-2023 ರ ಹೆಚ್ಚುವರಿ ವಿವಾದಾಂಶ-3 ಮತ್ತು 5 ಹಾಗೂ ದಿನಾಂಕಃ 18-03-2026 ರ ಹೆಚ್ಚುವರಿ ವಿವಾದಾಂಶ 2** -

ಈ ನಾಲ್ಕು ವಿವಾದಾಂಶಗಳು ಮೇಲ್ನೋಟಕ್ಕೆ ಬೇರೆ ಬೇರೆಯಾಗಿ ಕಂಡು ಬಂದರೂ ಸಹ, ಆಂತರಿಕವಾಗಿ ಒಂದೊಕ್ಕೊಂದು ಸಂಬಂಧ ಹೊಂದಿರುವುದರಿಂದ, ವಿಷಯಗಳ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಒಟ್ಟಿಗೆ ಪರಿಗಣಿಸಲಾಗಿದೆ.

ವಾದಿಗಳು ತಮ್ಮ ವಾದಪತ್ರದಲ್ಲಿ ಆರೋಪಿಸಿದಂತೆ, ಅದೇ ರೀತಿ 11 ರಿಂದ 14 ನೇ ಪ್ರತಿವಾದಿಗಳು ತಮ್ಮ ಎದುರುಕ್ಲೇಮಿನಲ್ಲಿ ಆರೋಪಿಸಿದಂತೆ ಮತ್ತು 19 ರಿಂದ 25, 40 ರಿಂದ 44 ನೇ ಪ್ರತಿವಾದಿಗಳು ತಮ್ಮ ಎದುರುಕ್ಲೇಮಿನಲ್ಲಿ ಆರೋಪಿಸಿದಂತೆ ದಾವಾ ಆಸ್ತಿಗಳು ಹಾಗೂ ಎದುರುಕ್ಲೇಮಿನ ತಪಶೀಲಿನ ಆಸ್ತಿಗಳು ವಾದಿಗಳ ಹಾಗೂ 1

ರಿಂದ 9 ಮತ್ತು 11 ರಿಂದ 53 ನೇ ಪ್ರತಿವಾದಿಗಳ ಪಿತ್ರಾರ್ಜಿತ ಜಂಟಿ ಕುಟುಂಬದ ಆಸ್ತಿಗಳಾಗಿದ್ದು, ಅವುಗಳಲ್ಲಿ ತಮಗೆ ಹಿಸ್ಸೆಯ ಹಕ್ಕು ಇದೆ ಎನ್ನುವುದನ್ನು ಸಾಭೀತುಪಡಿಸದ ಕಾರಣ, ವಾದಿಗಳು ವಾದಪತ್ರದಲ್ಲಿ ಕೋರಿದಂತೆ ಹಾಗೂ 11 ರಿಂದ 14 ನೇ ಪ್ರತಿವಾದಿಗಳು ತಮ್ಮ ಎದುರುಕ್ಲೇಮಿನಲ್ಲಿ ಕೋರಿದಂತೆ ಮತ್ತು 19 ರಿಂದ 25, 40 ರಿಂದ 44 ನೇ ಪ್ರತಿವಾದಿಗಳು ತಮ್ಮ ಎದುರುಕ್ಲೇಮಿನಲ್ಲಿ ಕೋರಿದಂತೆ, ದಾವಾ ತಪಶೀಲಿನ ಆಸ್ತಿಗಳು ಹಾಗು ಎದುರುಕ್ಲೇಮಿನ ತಪಶೀಲಿನ ಆಸ್ತಿಗಳು ವಾದಿಗಳ ಮತ್ತು 1 ರಿಂದ 9 ಹಾಗೂ 11 ರಿಂದ 53 ನೇ ಪ್ರತಿವಾದಿಗಳ ಪಿತ್ರಾರ್ಜಿತ ಜಂಟಿ ಕುಟುಂಬದ ಆಸ್ತಿಗಳು ಎಂಬ ಘೋಷಣೆಯ ಪರಿಹಾರ ಹಾಗೂ ಸದರಿ ಆಸ್ತಿಗಳಲ್ಲಿ ಪಾಲುವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆಯ ಪರಿಹಾರವನ್ನು ಪಡೆಯಲು ಅರ್ಹರಾಗಿರುವುದಿಲ್ಲವೆಂದು ತೀರ್ಮಾನಿಸಿ, **ವಿವಾದಾಂಶ-3 ದಿನಾಂಕಃ 15-07-2023 ರ ಹೆಚ್ಚುವರಿ ವಿವಾದಾಂಶ-3 ಮತ್ತು 5 ಹಾಗೂ ದಿನಾಂಕಃ 18-03-2026 ರ ಹೆಚ್ಚುವರಿ ವಿವಾದಾಂಶ 2 ನ್ನು ನಕಾರಾತ್ಮಕವಾಗಿ ಉತ್ತರಿಸಿದ್ದೇನೆ.**

**36**. **ವಿವಾದಾಂಶ-4** -ಮೇಲಿನ ವಿವಾದಾಂಶಗಳಲ್ಲಿ ಹಾಗೂ ಹೆಚ್ಚುವರಿ ವಿವಾದಾಂಶಗಳಲ್ಲಿ ಚರ್ಚಿಸಲಾದ ಕಾರಣಗಳಿಂದಾಗಿ ಈ ಕೆಳಕಂಡಂತೆ ಮಾಡಿದಃ

**ಆದೇಶ**

ವಾದಿಯರ ದಾವೆಯನ್ನು ಖರ್ಚು ಸಹಿತ ವಜಾಗೊಳಿಸಲಾಗಿದೆ.

11 ರಿಂದ 14 ನೇ ಪ್ರತಿವಾದಿಗಳ ಎದುರುಕ್ಲೇಮಿನ ದಾವೆಯನ್ನು ಖರ್ಚು ಸಹಿತ ವಜಾಗೊಳಿಸಲಾಗಿದೆ.

19 ರಿಂದ 25 ಮತ್ತು 40 ರಿಂದ 44 ನೇ ಪ್ರತಿವಾದಿಗಳ ಎದುರುಕ್ಲೇಮಿನ ದಾವೆಯನ್ನು ಖರ್ಚು ಸಹಿತ ವಜಾಗೊಳಿಸಲಾಗಿದೆ.

ಮೇಲ್ಕಂಡಂತೆ ಡಿಕ್ರಿ ಬರೆಯತಕ್ಕದ್ದು.

(ನನ್ನ ಉಕ್ತಲೇಖನದ ಪ್ರಕಾರ ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು ನಂತರ ಅವರಿಂದ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ಅದರಲ್ಲಿದ್ದ ಲೋಪದೋಷಗಳನ್ನು ತಿದ್ದಿ, ಇಂದು **ದಿನಾಂಕ 7 ನೇ ಆಗಸ್ಟ್ 2026** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

**(ವೈ. ಕೆ. ಬೇನಾಳ)**
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಹೊಸದುರ್ಗ.**

**ಅನುಬಂಧಃ-**

**ವಾದಿಯರ ಪರ ವಿಚಾರಣೆ ಮಾಡಲಾದ ಸಾಕ್ಷಿಃ**

ಪಿ.ಡಬ್ಲೂ-1 – ಮಂಜುನಾಥ ತಂದೆ ಶಿವರುದ್ರಪ್ಪ
ಪಿ.ಡಬ್ಲೂ-2 - ಮಹೇಶ್ವರಪ್ಪ ಕೆ.ಜಿ ತಂದೆ ಗೋವಿಂದಪ್ಪ

**ವಾದಿಯರ ಪರ ಗುರುತಿಸಲಾದ ದಾಖಲೆಗಳುಃ**

| | |
|---|---|
| ನಿ.ಪಿ.1 | ಆಕಾರ್ ಬಂದ್ ನಕಲು |
| ನಿಪಿ-2 ರಿಂದ 4 | 3 ಜಮೀನು ಹಕ್ಕಿನ ದಾಖಲೆ ರಿಜಿಸ್ಟರ್ ನಕಲುಗಳು |
| ನಿ.ಪಿ.5 ರಿಂದ 31 | 27 ಪಹಣಿ ಪತ್ರಿಕೆಗಳ ದೃಢೀಕೃತ ನಕಲುಗಳು |
| ನಿ.ಪಿ.32 ರಿಂದ 53 | 22 ಗಣಕೀಕೃತ ಪಹಣಿ ಪತ್ರಿಕೆಗಳು |
| ನಿಪಿ-54 | ಹೊಸದುರ್ಗ ಪೋಲೀಸರು ಕೊಟ್ಟ ಸ್ವೀಕೃತಿ |

ನಿ.ಪಿ.55 ದಿನಾಂಕಃ 13-11-1986 ರ ನೊಂದಾಯಿತ ಕ್ರಯಪತ್ರದ ದೃಢೀಕೃತ ನಕಲು

ನಿ.ಪಿ.56 ರಿಂದ 59 4 ಗಣಕೀಕೃತ ಪಹಣಿ ಪತ್ರಿಕೆಗಳು

ನಿ.ಪಿ.60 ರಿಂದ 65 6 ಹಿಸ್ಸಾ ಟಿಪ್ಪಣಿ ನಕಲುಗಳು

ನಿ.ಪಿ.66 ಮತ್ತು 67 2 ಆಕಾರ್ ಬಂದ್ ನಕಲುಗಳು

ನಿ.ಪಿ.68 ರಿಂದ 71 4 ಫೋಟೋಗಳು

ನಿ.ಪಿ.72 ಫೋಟೋಗಳ ಸಿಡಿ

**ಪ್ರತಿವಾದಿಯರ ಪರ ವಿಚಾರಣೆ ಮಾಡಲಾದ ಸಾಕ್ಷಿಃ**

ಡಿ.ಡಬ್ಲೂ-1 ರುದ್ರಪ್ಪ ತಂದೆ ಮಲ್ಲಪ್ಪ
ಡಿ.ಡಬ್ಲೂ-2 ಮಹೇಶ್ವರಪ್ಪ ತಂದೆ ಪರಣ್ಣ
ಡಿ.ಡಬ್ಲೂ-3 ಸಿದ್ದಪ್ಪ ತಂದೆ ಭೀಮಪ್ಪ
ಡಿ.ಡಬ್ಲೂ-4 ತಿಮ್ಮಣ್ಣ ತಂದೆ ಗೋವಿಂದಪ್ಪ
ಡಿ.ಡಬ್ಲೂ-5 ಕೆಂಚಪ್ಪ ತಂದೆ ಕದುರಪ್ಪ
ಡಿ.ಡಬ್ಲೂ-6 ಮುರುಗೇಶ್ ತಂದೆ ಪರಣ್ಣ
ಡಿ.ಡಬ್ಲೂ-7 ಮರುಳಸಿದ್ದಮ್ಮ ತಂದೆ ಲೇಟ್ ಶಿವಣ್ಣ
ಡಿ.ಡಬ್ಲೂ-8 ಶ್ರೀಮತಿ ಗಿರಿಜಮ್ಮ ತಂದೆ ಲೇಟ್ ಶಿವಣ್ಣ
ಡಿ.ಡಬ್ಲೂ-9 ಎಸ್.ಎಂ ವಿರೇಶ್ ಬಾಬು ತಂದೆ ಮರುಳಸಿದ್ದಪ್ಪ
ಡಿ.ಡಬ್ಲೂ-10 ಸತೀಶ್ ಕುಮಾರ್ ತಾಯಿ ಪಾರ್ವತಮ್ಮ
ಡಿ.ಡಬ್ಲೂ-11 ಗುರುಪ್ರಸಾದ್ ತಂದೆ ಜಿ. ಗಿರೀಶ್ ಕುಮಾರ್
ಡಿ.ಡಬ್ಲೂ-12 ಲೋಕೇಶ್ ತಂದೆ ಹೆಚ್.ಟಿ ಉಮೇಶ್ ಕುಮರ್

**ಪ್ರತಿವಾದಿಯರ ಪರ ಗುರುತಿಸಲಾದ ದಾಖಲೆಗಳುಃ**

ನಿ.ಡಿ.1 ಜಮೀನುಗಳ ಪರಿಶಿಷ್ಠ ನಕಲು

ನಿ.ಡಿ.2 ಮುಟೇಶನ್ ರಿಜಿಸ್ಟರ್ ನಕಲು

ನಿ.ಡಿ.3 ಜಮೀನು ಹಕ್ಕಿನ ದಾಖಲೆಯ ನಕಲು

ನಿ.ಡಿ.4 ದಿನಾಂಕಃ 08-06-1930 ರ ಪಾಲು ವಿಭಾಗ ಪತ್ರ,

ನಿ.ಡಿ.4(ಎ) ದಿನಾಂಕಃ 08-06-1930 ರ ಪಾಲು ವಿಭಾಗ ಪತ್ರವನ್ನು ಗಣಕೀಕರಣ ಮಾಡಿದ ಪ್ರತಿ

| | |
|---|---|
| ನಿ.ಡಿ.5 | ದಿನಾಂಕಃ 01-02-1974 ರ ಪಾಲು ವಿಭಾಗ ಪತ್ರ |
| ನಿ.ಡಿ.5(ಎ) | ದಿನಾಂಕಃ 01-02-1974 ರ ಪಾಲು ವಿಭಾಗ ಪತ್ರ ಗಣಕೀಕೃತ ಮಾಡಿದ ಪ್ರತಿ |
| ನಿ.ಡಿ.6 | ದಿನಾಂಕಃ 16-12-1986 ರ ಪಾಲು ವಿಭಾಗ ಪತ್ರ, |
| ನಿ.ಡಿ.6(ಎ) | ದಿನಾಂಕಃ 16-12-1986 ರ ಪಾಲು ವಿಭಾಗ ಪತ್ರಗಣಕೀಕೃತ ಮಾಡಿದ ಪ್ರತಿ |
| ನಿ.ಡಿ.7 | ದಿನಾಂಕಃ 04-02-1989 ರ ಮುಚ್ಚಳಿಕೆ ಕರಾರುಪತ್ರ |
| ನಿ.ಡಿ.7(ಎ) | ದಿನಾಂಕಃ 04-02-1989 ರ ಮುಚ್ಚಳಿಕೆ ಕರಾರು ಪತ್ರ ಗಣಕೀಕೃತ ಮಾಡಿದ ಪ್ರತಿ |
| ನಿ.ಡಿ.8 | ದಿನಾಂಕಃ 25-06-1993 ಮೂಲ ಪಾಲು ವಿಭಾಗ ಪತ್ರ, |
| ನಿ.ಡಿ.9 ರಿಂದ 21 | 13 ಗಣಕೀಕೃತ ಪಹಣಿ ಪತ್ರಿಕೆಗಳು |
| ನಿ.ಡಿ.22 | ವಂಶವೃಕ್ಷದ ಪ್ರಮಾಣ ಪತ್ರ |
| ನಿ.ಡಿ.23 | ದಿನಾಂಕಃ 26-10-1988 ರ ನೊಂದಾಯಿತ ಕ್ರಯಪತ್ರದ ದೃಢೀಕೃತ ನಕಲು |
| ನಿ.ಡಿ.24 | ಜಿ. ಪಿ.ಎ |
| ನಿ.ಡಿ.25 | ವಂಶವೃಕ್ಷದ ಪ್ರಮಾಣ ಪತ್ರ |

ಸಹಿ/-

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ಹೊಸದುರ್ಗ.**

YAMANOORAPPA KANAKAPPA BENAL

Digitally signed by YAMANOORAPPA KANAKAPPA BENAL
Date: 2026.08.07 17:45:29 +0530